ಸಂಪುಟ 20 ಸಂಚಿಕೆ 52
ಡಿಸೆಂಬರ್ 26, 1999 ಬೆಲೆ ರೂ. 3.00

ಮಿಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ರಾಷ್ಟ್ರೀಕೃತ ಬ್ಯಾಂಕುಗಳು ತಿಮಿಂಗಲಗಳ ಬಾಯಿಗೆ

ಕಗ್ಗತ್ತಲಿಗೆ ನೂಕಲು ಕೊಜೆಂಟ್ರಿಕ್ಸ್



ವಾಜಪೇಯಿ ಮಾತಿನ ಕಸರತ್ತು



ಗ್ರಾಮೀಣ ಕೃಪಾಂಕದ ಅಗತ್ಯ ಸುಗ್ರೀವಾಜ್ಞೆಯ ಅನಿವಾರ್ಯ

ಹೊಸ ಕೊಜೆಂಟ್ರಿಕ್ಸ್ ಒತ್ತಡಕ್ಕೆ ಮಣಿಯಬಾರದು

ಕರ್ನಾಟಕವನ್ನು ಕಗ್ಗತ್ತಲಿಗೆ ನೂಕುವ ಕೊಜೆಂಟ್ರಿಕ್ಸ್ ಮತ್ತೆ ಸುದ್ದಿಯಲ್ಲಿದೆ. ಡಿಸೆಂಬರ್ ೯ ರಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ರಾನ್ ಸೋಮರ್ಸ್ ರವರು ಮಂಗಳೂರಿನಲ್ಲಿ ಉದ್ದೇಶಿತ ವಿದ್ಯುತ್ ಘಟಕದ ಯೋಜನೆಯನ್ನು ರದ್ದುಗೊಳಿಸುವುದಾಗಿ ಪ್ರಕಟಿಸಿದರು. ಮೊದಲಿನಿಂದಲೂ ಹಲವಾರು ವಾದ-ವಿವಾದಗಳ ಸುಳಿಯಲ್ಲೇ ಸಾಗಿಬಂದ ಸಂಸ್ಥೆಯ ಪ್ರಕಟಣೆ ಸಹಜವಾಗಿ ವಿವಿಧ ಅಭಿಪ್ರಾಯಗಳನ್ನು ಎಬ್ಬಿಸಿತು. ಕಳೆದ ಏಳು ವರುಷಗಳಿಂದಲೂ ನೂರಾರು ಕೋಟಿ ರೂಪಾಯಿಗಳನ್ನು ತೊಡಗಿಸಿದ ಈ ಸಂಸ್ಥೆ ಈಗ ಇದ್ದಕ್ಕಿದ್ದಂತೆಯೇ ಮುಚ್ಚಲಿದೆ ಎಂಬ ಮಾತನ್ನು ಅಷ್ಟು ಸುಲಭವಾಗಿ ನಂಬಲು ಸಾಧ್ಯವಿರಲಿಲ್ಲ. ಅತ್ಯಧಿಕ ಬೆಲೆ ನಿಗದಿ ಮಾಡಿ, ೩೦ ವರ್ಷದವರೆಗೂ ಲಾಭದ ಗ್ಯಾರಂಟಿ(ಕೌಂಟರ್ ಗ್ಯಾರಂಟಿ)ಯನ್ನು ಖಾತ್ರಿ ಮಾಡಿಕೊಂಡು ಬಂದಿರುವ ಅಮೆರಿಕಾ ಮೂಲದ ಈ ಬಹುರಾಷ್ಟ್ರೀಯ ಕಂಪನಿ, ಇಲ್ಲಿರುವುದೇ ಲಾಭ ಮಾಡಲಿಕ್ಕೆ. ಮತ್ತು ದೇಶಿಯ ಸಾರ್ವಜನಿಕ ವಲಯದ ಉದ್ದಿಮೆಗಳಾದ ರಾಯಚೂರು ಥರ್ಮಕೋಲ್ ಪ್ರಾಜೆಕ್ಟ್ ನಂತಹ ಹಲವಾರು ಉದ್ದಿಮೆಗಳನ್ನು ಮುಳುಗಿಸಿ, ಪೂರ್ಣವಾಗಿ ಏಕಸ್ವಾಮ್ಯ ಹೊಂದಲು ಹವಣಿಸುತ್ತಿರುವುದು ತಿಳಿಯದ ಸಂಗತಿಯೇನಲ್ಲ. ಈಗಾಗಲೇ ಇದರ ಅವಳಿ ಸೋದರನಂತಿರುವ ಮಹಾರಾಷ್ಟ್ರದ ಎನ್ರಾನ್ ಕಂಪನಿ ಜಗದ್ವಿಖ್ಯಾತ ಕುಖ್ಯಾತಿಗಳೂ ಕಣ್ಣೆದುರಿಗಿವೆ.

ಕೊಜೆಂಟ್ರಿಕ್ ನ ಪ್ರತಿನಿಧಿ ಹೇಳುವಂತೆ ತಮ್ಮ ಯೋಜನೆಯ ಕಾರ್ಯಗತಕ್ಕೆ ನೂರಾರು ಅಡ್ಡಿಗಳು ಬಂದಿದೆಯೆಂಬುದು. ಹೀಗಾಗಿ ಯೋಜನೆ ರದ್ದು ಮಾಡಲಾಗುತ್ತಿದೆಯೆಂಬ ವಿವರಣೆ ನೀಡಿದರು. ಕಾಕತಾಳೀಯವೋ ಎಂಬಂತೆ ಡಿಸೆಂಬರ್ ೧೩ ರಂದು ಸುಪ್ರೀಂಕೋರ್ಟ್, ಈ ಕಂಪನಿಯು ನಡಸಿದೆ ಎನ್ನಲಾದ ಲಂಚದ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದು ಪಡಿಸಿತು. ಸಾರ್ವಜನಿಕ ಹಿತಾಸಕ್ತಿ ಅರ್ಜಿಪುರಸ್ಕರಿಸಿ ಲಂಚದ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ರಾಜ್ಯ ಹೈಕೋರ್ಟ್ ಆದೇಶವನ್ನು ನೀಡಿತ್ತು. ಈ ತೀರ್ಪು ಪ್ರಕಟಣೆಗೊಂಡ ನಂತರ ಮತ್ತೇ ಕೊಜೆಂಟ್ರಿಕ್ ಚುರುಕಾಯಿತು. ಕೇಂದ್ರದ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರ ಮತ್ತು ರಾಜ್ಯದ ಕಾಂಗ್ರೆಸ್‌ನ ಕೃಷ್ಣರ ಸರಕಾರಗಳು ಕಂಪನಿಯ ತೀರ್ಪಿನ ನಂತರ ಕೊಜೆಂಟ್ರಿಕ್ಸ್‌ನ್ನು ಪುಸಲಾಯಿಸುವ ಕೆಲಸದಲ್ಲಿದ್ದವರು ಕೋರ್ಟ್ ತೀರ್ಪು ಹೊರ ಬಿದ್ದನಂತರ ಇನ್ನೂ ಕ್ರಿಯಾಶೀಲರಾದರು. ಈ ಸಂದರ್ಭವನ್ನೇ ನಿರೀಕ್ಷಿಸುತ್ತಿದ್ದ ಕೊಜೆಂಟ್ರಿಕ್ಸ್ ಕಂಪನಿಯು ಈಗ ಹೊಸ ಶರತ್ತುಗಳನ್ನು ಹಾಕತೊಡಗಿದೆ. ಒಂದು ರೀತಿಯಲ್ಲಿ ಸರ್ಕಾರಕ್ಕೆ ಆದೇಶಿಸಲಾಗುತ್ತಿದೆ. ತಮ್ಮ ಯೋಜನೆಗೆ ಇರುವ ಅಡೆತಡೆಗಳನ್ನು

ಸಂಪಾದಕೀಯ

ನಿವಾರಿಸಬೇಕೆಂದೂ, ಮುಖ್ಯವಾಗಿ ತಮ್ಮ ವ್ಯವಹಾರಕ್ಕೆ ಕೌಂಟರ್ ಗ್ಯಾರಂಟಿಯನ್ನು ನೀಡುವ ಆದೇಶದ ಪ್ರತಿ ಈಗಲೇ ನೀಡಬೇಕೆಂದೂ, ಅದಕ್ಕೆ ಹೊಂದಿ ಮೊತ್ತವನ್ನು ಕಾದಿರಿಸಬೇಕೆಂದು ತಾವು ಮಾಡುವ ವಿದ್ಯುತ್ ದರಗಳನ್ನು ೧೯೯೭ ರಲ್ಲಿ ನೀಡಬೇಕಾಗಿದ್ದ ದರಗಳನ್ನೇ ಕೊಡಬೇಕೆಂದು ಬಿಗಿ ಹಿಡಿದಿದೆ. ೧೯೯೪ ರಲ್ಲಿ ಮೊದಲ ಹಂತದ ೫೦೦ ಮೆ.ವಾ. ವಿದ್ಯುತ್ ಉತ್ಪಾದನೆ ಆದಾಗ ಅದರ ದರ ಯೂನಿಟ್‌ಗೆ ರೂ ೨.೬೭ ಪೈಸೆಯಂತೆ, ಕರ್ನಾಟಕ ವಿದ್ಯುತ್ ಮಂಡಳಿಗೆ ಮಾರಲು ಒಪ್ಪಂದ ಆಗಿತ್ತು. ೧೯೯೭ ರಲ್ಲಿ ಎರಡನೇ ಹಂತದ ಇನ್ನೂ ೫೦೦ ಮೆ.ವಾ. ವಿದ್ಯುತ್ ಉತ್ಪಾದನೆಗೆ ರೂ. ೨.೫೯ ರಂತೆ ಮಾರುವುದು ಎಂದು ನಿಗದಿಯಾಗಿತ್ತು. ಕೊಜೆಂಟ್ರಿಕ್ಸ್ ಈಗ ಒಟ್ಟು ಎಲ್ಲಕ್ಕೂ ಯೂನಿಟ್‌ಗೆ ಹೆಚ್ಚಿನ ದರ ಕೊಡಲು ಕೇಳುತ್ತಿದೆ. ಕೊಜೆಂಟ್ರಿಕ್ಸ್‌ನಿಂದಲೇ ಸರ್ಕಾರ ೪.೪೨ ಪೈಸೆಗೆ ಖರೀದಿಸಬೇಕು. ಅದು ಒಂದು ವರ್ಷದ ದರದ ಒಪ್ಪಂದ ಮಾತ್ರ. ಈ ದರಗಳ ನಿಗದಿಯು ರೂಪಾಯಿ ಮತ್ತು ಡಾಲರ್‌ಗಳ ನಡುವಿನ ಬೆಲೆಯನ್ನು ಆಧಾರವಾಗಿರಬೇಕೆಂಬುದು-ಆಪಾದ ಸೂಚನೆ.ಅಂದರೆ ಕರ್ನಾಟಕ ಗ್ರಾಹಕರಿಗೆ ರೈತ-ಜನಸಾಮಾನ್ಯರಿಗೆ ವಿದ್ಯುತ್ ಸಿಗಬೇಕಾದರೆ ಯೂನಿಟ್‌ಗೆ ರೂ ೭.೫೦ ರಂತೆ ಕನಿಷ್ಟ ತೆರಬೇಕು. ಇಂತಹ ಕಂಪನಿಗಳ ಒತ್ತಡದಿಂದಲೇ ವಿದ್ಯುತ್ ದರಗಳನ್ನು ರಾಜ್ಯ ಸರ್ಕಾರ ಹೆಚ್ಚಿಸುತ್ತಲೇ ಬಂದಿದೆ. ಮತ್ತು ಬಡಜನರಿಗೆ, ಬಡ ರೈತರಿಗೆ, ಸಾಮಾಜಿಕ ಆರ್ಥಿಕ ಹಿಂದುಳಿದ ಜನ ಸಮೂಹಗಳಿಗೆ ಸುಲಭವಾಗಿ ವಿದ್ಯುತ್ ದೊರೆಯದಂತೆ ಮಾಡಲಾಗುತ್ತಿದೆ. ಹೇಳಿಕೇಳಿ ಕೊಜೆಂಟ್ರಿಕ್ಸ್ ನಂತಹ ಬಹುರಾಷ್ಟ್ರೀಯ ಕಂಪನಿಗೆ ನಮ್ಮ ದೇಶದ ಜನರ ಬಗ್ಗೆ ಕಾಳಜಿಯೆಲ್ಲಿದೆ? ಈಗಾಗಲೇ ಚಂಡಮಾರುತದಿಂದ ಒರಿಸ್ಸಾದ ಜನ ತತ್ತರಿಸಿ, ಚೇತರಿಸಿಕೊಳ್ಳಲು ಹಾಹಾಕಾರ ಪಡುವಾಗಲೇ ಅಮೆರಿಕಾದ ACE ವಿದ್ಯುತ್ ಕಂಪನಿ ತನ್ನ ವಿದ್ಯುತ್‌ಗೆ ಮೂರರಷ್ಟು ಬೆಲೆ ನೀಡಬೇಕೆಂದು ಆಗ್ರಹಿಸುತ್ತಿರುವುದು ಈ ಕಂಪನಿಗಳ ಕಾಳಜಿ ಎತ್ತಿ ತೋರಿಸಿದೆ.

ಬಹಳ ಮುಖ್ಯವಾದ ವಿಷಯವೆಂದರೆ ಈ ಕಂಪನಿಗಳು ಹಾಕುವ ಶರತ್ತುಗಳನ್ನು ನೋಡಿದರೆ ಸಾರ್ವಭೌಮತ್ವ, ಸ್ವಾತಂತ್ರ್ಯ, ಸ್ವಾಭಿಮಾನ ಏನಾದರೂ ಈ ಸರ್ಕಾರಕ್ಕೆ ಇದೆಯೋ ಎಂದು ಅನುಮಾನವಾಗುತ್ತದೆ. ವಿದ್ಯುತ್ ಕ್ಷೇತ್ರಕ್ಕೆ ವಿದೇಶಿ ಬಂಡವಾಳ ಹೂಡಿಕೆ-ಕಂಪನಿಗಳು ಅಗತ್ಯವಿರುವಲ್ಲಿ ಬರಬಹುದು, ಆದರೆ ಅವು ನಮ್ಮ ನಾಡಿನ ಹಿತಕ್ಕೆ, ಕಾನೂನು-ಕಟ್ಟಳೆ, ಮೌಲ್ಯಗಳಿಗೆ ಹೊಂದಿಕೊಂಡು ಇರಬೇಕು. ಈ ರಂಗದಲ್ಲಿ ಪ.ಬಂಗಾಲದ ಸರ್ಕಾರ ವಹಿಸಿರುವ ಕ್ರಮಗಳು ಅತ್ಯಂತ ಸ್ವಾಗತಾರ್ಹ. ಅಲ್ಲಿಯೂ ಬಂಡವಾಳ ಹೂಡಿ, ವಿದ್ಯುತ್ ಉತ್ಪಾದಿಸುವ ಹಲವು ವಿದೇಶಿ ಕಂಪನಿಗಳು, ಕೊಜೆಂಟ್ರಿಕ್ಸ್, ಎನ್ರೋನ್‌ನಂತೆ ಕೌಂಟರ್ ಗ್ಯಾರಂಟಿ ಅಥವಾ ಬಂಡವಾಳದ ಲಾಭ, ಇಡಗಂಟನು ಕೇಳದೇ ಅದನ್ನು ವಿದೇಶಗಳಿಗೆ ಲಪಟಾಯಿಸದೇ, ರಾಜ್ಯ ಸರ್ಕಾರದ ಚೌಕಟ್ಟಿನೊಳಗೆ ಕೆಲಸ ಮಾಡುತ್ತಿವೆ. ಸುಮಾರು ೧೬ ಅಥವಾ ೨೦ ವರ್ಷದ ನಂತರ ೨೮ ವಿದ್ಯುತ್ ಸ್ಥಾವರವನ್ನು ಔಪಚಾರಿಕ ಬೆಲೆಗೆ (ರೂ. ೧.೦೦) ಮಾರಿಹೋಗಲಿವೆ. ಆದರೆ ಕೊಜೆಂಟ್ರಿಕ್ಸ್‌ನಂತಹ ಬಹುರಾಷ್ಟ್ರೀಯ ಕಂಪನಿಗಳು ನಡೆಸುವ ದರ್ಬಾರು, ಹುಕುಂಗಳು, ಅವುಗಳನ್ನು ಸ್ವೀಕರಿಸುವ ಈ ಸರ್ಕಾರಗಳ ನಿಲುವು ಅವಮಾನಕರ. ಈಗಾಗಲೇ ಉದಾರೀಕರಣದ ಪ್ರಕ್ರಿಯೆ ಜಾರಿ ತೀವ್ರಗೊಳಿಸಲು ವಾಜಪೇಯಿ ಸರ್ಕಾರ, ಟಾಸ್ಕ್‌ಪೋರ್ಸ್‌ಗಳನ್ನು ರಚಿಸಿಕೊಂಡು ಹೊರಟಿವೆ. ಅದೇ ಧಾಟಿಯಲ್ಲಿ ರಾಜ್ಯದ ಕೃಷ್ಣರವರು ಬಂಡವಾಳಗಾರರು, ವ್ಯಾಪಾರಸ್ಥರನ್ನು ಉದ್ದೇಶಿಸಿ ಇತ್ತೀಚೆಗೆ ಮಾತನಾಡುತ್ತಾ 'ನಿಮ್ಮ ಆಶಯ ನನಗೆ ಆಜ್ಞೆ' ಎಂದು ಹೇಳಿ ಕೋಟಿಕೋಟಿ ಜನತೆ ಇಟ್ಟಿರುವ ವಿಶ್ವಾಸಕ್ಕೆ ಘಾತ ಮಾಡಿದ್ದಾರೆ.

ಆದ್ದರಿಂದ ಕೇಂದ್ರ - ರಾಜ್ಯ ಸರ್ಕಾರಗಳು ಕೊಜೆಂಟ್ರಿಕ್ಸ್‌ನಂತಹ ಕಂಪನಿಗಳ ಹೊಸ ಹೊಸ ಒತ್ತಡಕ್ಕೆ ಮಣಿಯಬಾರದು. ರಾಯಚೂರು ಥರ್ಮಕೋಲ್‌ನಲ್ಲಿವಿದ್ಯುತ್ ಬೆಲೆ ೨.೨೫ ಪೈಸೆಗೆ, ವಾರಾಹಿ ಯಲ್ಲಿ ೦.೯೬ ಪೈಸೆಗೆ ಶರಾವತಿಯಲ್ಲಿ ೦.೧೬ ಪೈಸೆಗೆ ಸಿಗುತ್ತಿದೆ. ಅಗತ್ಯ ಬಂದಲ್ಲಿ ಅಪಾರ ಅನುಭವ, ದಕ್ಷತೆ ಮತ್ತು ಲಾಭ ಗಳಿಸಿರುವ ಸರ್ಕಾರದ ಕರ್ನಾಟಕ ಪವರ್ ಕಾರ್ಪೋರೇಷನ್‌ನಂತಹ ಸಾರ್ವಜನಿಕ ವಲಯದ ವಿದ್ಯುತ್ ಉತ್ಪಾದನೆ ಆರಂಭಿಸಬಹುದು. ಇದು ಜನಪ್ರೀತಿ, ಸ್ವಾಭಿಮಾನ ಇರುವ ಸರ್ಕಾರ ಮಾಡಬೇಕಾದ್ದು.

ವಾಜಪೇಯಿ ಸರಕಾರವನ್ನು ನಡೆಸುವವರು ಯಾರು?

ವಿದೇಶಿ ಮತ್ತು ದೇಶೀ ಬಂಡವಾಳಶಾಹಿಗಳು ಎಂಬುದನ್ನು ಕಳೆದ ಎರಡು ವಾರಗಳ ಘಟನೆಗಳು ಎತ್ತಿ ತೋರಿವೆ. ಇವುಗಳಲ್ಲಿ ಮೊದಲನೆಯದು ನವದೆಹಲಿಯಲ್ಲಿ ಭಾರಿ ಅಬ್ಬರದ ನಡುವೆ ನಡೆದ ವಿಶ್ವ ಆರ್ಥಿಕ ವೇದಿಕೆ (ವರ್ಲ್ಡ್ ಇಕಾನಾಮಿಕ್ ಫೋರಂ - ಡಬ್ಲ್ಯು.ಇ.ಎಫ್) ಯ 'ಭಾರತ ಶೃಂಗ' ಸಭೆ ಮತ್ತು ಎರಡನೆಯದು ವ್ಯಾಪಾರ ಮತ್ತು ಉದ್ದಿಮೆ ಮಂಡಳಿಯ ಆಶ್ರಯದಲ್ಲಿ ದೇಶದ ದೊಡ್ಡ ಕೈಗಾರಿಕೋದ್ಯಮಿಗಳ ಅಧ್ಯಕ್ಷತೆಯಲ್ಲಿ ಎಂಟು ಕಾರ್ಯಕಾರೀ ಗುಂಪುಗಳ ನೇಮಕ. ಅಧಿಕಾರಕ್ಕೆ ಮರಳುವಲ್ಲಿ ನೆರವಾದ ತಮ್ಮ ಈ ವಿದೇಶಿ ಮತ್ತು ಸ್ವದೇಶಿ ಪೋಷಕರಿಗೆ ವಾಜಪೇಯಿ ಸರಕಾರ ಈ ರೀತಿ ತನ್ನ ಕೃತಜ್ಞತೆ ಸಲ್ಲಿಸುತ್ತಿದೆಯೇ?



"ಭಾರತಕ್ಕೆ ವಿಶ್ವ ಆರ್ಥಿಕದೊಂದಿಗೆ ಬೆಸೆದುಕೊಳ್ಳಬೇಕೆಂದಿದ್ದರೆ ಅದಕ್ಕಿರುವ ಒಂದೇ ದಾರಿಯೆಂದರೆ ಒಂದು ಉತ್ತಮ ಹಣಕಾಸು ಮತ್ತು ಆರ್ಥಿಕ ಸನ್ನಿವೇಶ ನಿರ್ಮಿಸುವುದು. **ಸರಿಯಾದ ಧೋರಣೆಗಳನ್ನು ಅನುಸರಿಸುವಲ್ಲಿ ವಿಫಲವಾದ ದೇಶಗಳು ತೆರಬೇಕಾದ ದಂಡದ ಮಟ್ಟವನ್ನು ಖಂಡಿತಾ ಕೀಳಂದಾಜು ಮಾಡಬಾರದು** - ಇದು ನವದೆಹಲಿಯಲ್ಲಿ ವಿಶ್ವ ಆರ್ಥಿಕ ವೇದಿಕೆ' ಏರ್ಪಡಿಸಿದ 'ಭಾರತ ಶೃಂಗ' ಸಭೆಯಲ್ಲಿ ಈ ವೇದಿಕೆಯ ಮ್ಯಾನೇಜಿಂಗ್ ಡೈರಕ್ಟರ್‌ನ ಮಾತುಗಳು, ಅಲ್ಲ ಆದೇಶ, ಫರ್ಮಾನು. ಯಾವುದೇ ಸ್ವಾಭಿಮಾನಿ ಭಾರತೀಯ ಆತನ ಸಮಾರೋಪ ಭಾಷಣದ ಧಾಟಿಯನ್ನು ಕೇಳಿ ಸುಮ್ಮನಿರುತ್ತಿರಲಿಲ್ಲ. ಆದರೆ ಹಿಂದೆ ದೇಶ ಭಕ್ತಿಯ ಗುತ್ತೇದಾರರು ತಾವು ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿ ನೇತೃತ್ವದ ಸರಕಾರದ ಪ್ರಧಾನ ಮಂತ್ರಿಯಾದಿಯಾಗಿ ಹಲವು ಮಂತ್ರಿಗಳು ಈ ಮ್ಯಾನೇಜಿಂಗ್ ಡೈರಕ್ಟರ್‌ನೊಡನೆ ಫೋಟೋ ತೆಗೆಸಿಕೊಳ್ಳಲು ಸಾಲುಗಟ್ಟಿ ನಿಂತಿದ್ದರು!

ನಿಮ್ಮ ಅಪಾರ ಆರ್ಥಿಕ ಸಂಪನ್ಮೂಲಗಳನ್ನು, ಮಾರುಕಟ್ಟೆಯನ್ನು ನಮಗೆ ತೆರೆದು ಕೊಡಿ ಎಂಬ ವಿದೇಶಿ ಬಂಡವಾಳಿಗರ ಪ್ರತಿನಿಧಿಗಳ ಮಾತಿಗೆ ಜೀ ಹುಜೂರ್ ಎನ್ನುತ್ತಾ ಪ್ರಧಾನ ಮಂತ್ರಿಗಳು - ನೋಡಿ, ಕಾಂಗ್ರೆಸ್‌ನ ಬೆಂಬಲ ಗಿಟ್ಟಿಸಿ ವಿಮಾ ಪ್ರಾಧಿಕಾರ ಮಸೂದೆ, ವಿದೇಶಿ ವಿನಿಮಯ ಮಸೂದೆ ಇತ್ಯಾದಿಗಳನ್ನು ಪಾಸು ಮಾಡಿಸಿಕೊಂಡು ನಿಮಗೆ ಒಂದೊಂದಾಗಿ ಬಾಗಿಲುಗಳನ್ನು ಪೂರ್ಣವಾಗಿ ತೆರೆದುಕೊಡುತ್ತಿದ್ದೇವೆ, ಇನ್ನೂ ಕೊಡುತ್ತೇವೆ ಎಂದು ಉದಾರವಾಗಿ ಆಶ್ವಾಸನೆ ನೀಡಿದರು!

ನಮ್ಮ ದೇಶೀ ಬಂಡವಾಳಿಗರ ಲಾಭದಾಹವೂ ಈ ಶೃಂಗ ಸಭೆಯಲ್ಲಿ ಸಂಪೂರ್ಣವಾಗಿ ಬಯಲಿಗೆ ಬಂತು. ಬಹುರಾಷ್ಟ್ರೀಯ ಕಂಪನಿಗಳಿಂದ ಸ್ಪರ್ಧೆಯಿಂದಾಗಿ ತಮ್ಮ ಹಿತಾಸಕ್ತಿಗಳಿಗೆ ಬೆದರಿಕೆ ಬಂದಾಗಲೆಲ್ಲಾ ಈ ದೇಶಿ ಬಂಡವಾಳಿಗರ ಒಂದು ವಿಭಾಗ 'ಆಟದ ಮೈದಾನ ಒಂದೇ ಮಟ್ಟದ್ದಾಗಿರಬೇಕು' ಅಂದರೆ ತಮಗೆ ಸಮಾನ ಅವಕಾಶ ಇರಬೇಕು ಎಂದು ಬೊಬ್ಬೆ ಹೊಡೆಯುತ್ತಾ ಬಂದಿರುವುದನ್ನು ನಾವು ಕೇಳಿದ್ದೇವೆ. ಆದರೆ ತಮಗೆ ಪ್ರಯೋಜನವಾಗುವುದಾದರೆ ವಿದೇಶಿ ಉದ್ಯಮಿಗಳ ಆಕಾಂಕ್ಷೆಗಳಿಗೆ ತಲೆಬಾಗಿ ನಡೆಯಲು, ಮೈದಾನವನ್ನು ತೆರೆದುಕೊಡಲು, ಅದಕ್ಕಾಗಿ ದೇಶದ ಹಿತಾಸಕ್ತಿಗಳನ್ನು ಕೂಡಾ ಒತ್ತೆಯಿಡಲು ಇವರು ಹಿಂಜರಿಯುವವರಲ್ಲ ಎಂದು ಈ 'ಶೃಂಗ' ದಲ್ಲಿ ಇನ್ನೊಮ್ಮೆ ಬಯಲಿಗೆ ಬಂತು. ನಮ್ಮ 'ಸ್ವದೇಶಿ' ಬಂಡವಾಳಿಗಳಿಗೆ ತಮ್ಮ ರೊಟ್ಟಿಗೆ ಎರಡೂ ಕಡೆ ತುಪ್ಪ ಸವರಿರಬೇಕು, ಅಷ್ಟೇ.

'ವಿಶ್ವ ಆರ್ಥಿಕ ವೇದಿಕೆ' ಯ ಮ್ಯಾನೇಜಿಂಗ್ ಡೈರೆಕ್ಟರ್ ಎರಡು ಕ್ರಮಗಳನ್ನು ವಾಜಪೇಯಿ ಸರಕಾರ ಅಂಗೀಕರಿಸಬೇಕು ಎಂದರು ಒಂದು, ಸಬ್ಸಿಡಿಗಳಲ್ಲಿ ಭಾರಿ ಕಡಿತ ತರಬೇಕು, ಎರಡು ಸಾರ್ವಜನಿಕ ವಲಯದ ಶೇರುಗಳನ್ನು ತ್ವರಿತವಾಗಿ ಮಾರಾಟ ಮಾಡಬೇಕು. ಸಾಮ್ರಾಜ್ಯಶಾಹಿ-ಪರ, ದೊಡ್ಡ ಬಂಡವಾಳಿಗ-ಪರ ವಾಜಪೇಯಿ ಸರಕಾರ ಈ ಎರಡೂ ಕ್ರಮಗಳಿಗೂ ಸಿದ್ಧ!

ಇದರ ಅರ್ಥ - ಒಂದು ದೇಶದ ಬಡ ಜನರಿಗೆ ಸಿಗುತ್ತಿದ್ದ ಅಲ್ಪಸ್ವಲ್ಪ ಸಹಾಯಕ್ಕೂ ಇನ್ನು ಮುಂದೆ ಪಂಗನಾಮ, ಅದರ ಬದಲು ಜನಗಳ ಮೇಲೆ ಇನ್ನಷ್ಟು ಹೊರೆಗಳು. ಸಬ್ಸಿಡಿ ಕಡಿತದ ಅರ್ಥ ಇದೇ. ಇದು ಸರಕಾರೀ ಅಂಕಿ-ಅಂಶಗಳಿಂದಲೂ ಸಿದ್ಧವಾಗಿರುವ ಸಂಗತಿ. ಉದಾರೀಕರಣದ ನೀತಿಗಳೊಂದಿಗೆ ಸಬ್ಸಿಡಿಗಳ ಕಡಿತ ಆರಂಭವಾದ ಮೊದಲ ಮೂರು ವರ್ಷಗಳಲ್ಲೇ ಬಡತನದ ರೇಖೆಯ ಕೆಳಗೆ ಇರುವವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿಸಿತು ಎಂದು ಸರಕಾರದ ಅಂಕೆ-ಸಂಖ್ಯೆಗಳೇ ಹೇಳುತ್ತಿವೆ. ಎರಡನೆಯದಾಗಿ, ಸಾರ್ವಜನಿಕ ವಲಯದ ಶೇರುಗಳ ತ್ವರಿತ ಮಾರಾಟ ಎಂದರೆ ಸರಕಾರದ ಆದಾಯ ತರುವ ಆಸ್ತಿಗಳ ಮಾರಾಟ ಎಂದೇ ಅರ್ಥ. ಸದ್ಯದ ಖರ್ಚು ತೂಗಿಸಲು, ವಿದೇಶಿ ಬಂಡವಾಳಿಗರ ಆದೇಶ ಪಾಲಿಸಲು ವಾಜಪೇಯಿ ಸರಕಾರ ಈ ಕ್ರಮ ಕೈಗೊಂಡರೆ ಮುಂದೆ ನಮ್ಮ ಮೇಲಿನ ಸಾಲದ ಹೊರೆ ಭಾರಿ ಪ್ರಮಾಣದಲ್ಲಿ ಏರಲಿದೆ ಎಂಬ ಪರಿವೆಯೂ ಈ ಸರ್ಕಾರಕ್ಕೆ ಇದ್ದಂತಿಲ್ಲ.

ಸಂಪೂರ್ಣ ಖಾಸಗೀಕರಣದ ದಾರಿ

ವಾಜಪೇಯಿ ಸರಕಾರದ ನಿಜ ಸ್ವರೂಪವನ್ನು ತೆರೆದಿಟ್ಟ ಇನ್ನೊಂದು ಬೆಳವಣಿಗೆಯೆಂದರೆ 'ವ್ಯಾಪಾರ ಮತ್ತು ಉದ್ದಿಮೆ ಮಂಡಳಿ'ಯ ಆಶ್ರಯದಲ್ಲಿ ಎಂಟು ಕಾರ್ಯಕಾರಿ ಗುಂಪುಗಳ ರಚನೆ ಹಾಗೂ ಅವೆಲ್ಲವಕ್ಕೂ ಮುಖ್ಯಸ್ಥರಾಗಿ ದೇಶದ ದೊಡ್ಡ ಬಂಡವಾಳಿಗರ ನೇಮಕ. ಆರ್ಥಿಕದ ಎಲ್ಲಾ ಅಂಶಗಳ ಬಗ್ಗೆ ಧೋರಣೆಗಳನ್ನು ಕುರಿತಾದ ಶಿಫಾರಸುಗಳನ್ನು ನೀಡಲು ಈ ಕಾರ್ಯಕಾರಿ ಗುಂಪುಗಳನ್ನು ರಚಿಸಲಾಗಿದೆ. ಇದು ದೇಶದ ಆರ್ಥಿಕವನ್ನು ಸಂಪೂರ್ಣವಾಗಿ ಖಾಸಗೀಕರಿಸುವ ಬಿಜೆಪಿ ನೇತೃತ್ವದ ಸರಕಾರದ ಹಾದಿಯ ಆಶ್ಚರ್ಯಕರ ಸಂಕೇತ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ದೊಡ್ಡ ಉದ್ದಿಮೆಗಳ ಖಾಸಗೀ ಮಾಲಕರನ್ನು ಧೋರಣೆ ಸಲಹಾ ಗುಂಪುಗಳಿಗೆ ಮುಖ್ಯಸ್ಥರಾಗಿ ನೇಮಿಸಿರುವುದು ಪ್ರಧಾನ [illegible] ಧೋರಣೆಗಳನ್ನು ರೂಪಿಸುವಲ್ಲಿ ಸರಕಾರದ ಜವಾಬ್ದಾರಿಯನ್ನು ಕಳಚಿಕೊಂಡಂತೆಯೇ ಸರಿ. ಅಂದರೆ ದೇಶದ ಆರ್ಥಿಕ ಧೋರಣೆಗಳನ್ನು ರೂಪಿಸಬೇಕಾದದ್ದು ಜನತೆ, ಅದು ಆರಿಸಿದ ಸಂಸತ್ತು ಅಲ್ಲ. ದೇಶದ ದೊಡ್ಡ ಬಂಡವಾಳಿಗರು ಮಾತ್ರ! ಜನತೆ ಮತ್ತು ಸಂಸತ್ತಿನ ಅಭಿಪ್ರಾಯಗಳಿಗೆ ಅನುಗುಣವಾಗಿರದ ಆರ್ಥಿಕ ಕ್ರಮಗಳನ್ನು ಹೇರಲು ಪ್ರಧಾನ ಮಂತ್ರಿಗಳ ಕಚೇರಿ ಇಂತಹ ಗುಂಪುಗಳನ್ನು ಪ್ರೋತ್ಸಾಹಿಸುವಂತಹ ಸ್ಥಿತಿ ಬಂದಿದೆ.

ಇದರೊಂದಿಗೆ ಮುದ್ರಣ ಮಾಧ್ಯಮದಲ್ಲಿ ವಿದೇಶಿಯರ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಮಾತೂ ಕೇಳಿಬರುತ್ತಿದೆ. ಅಂದರೆ ಈ ಮಾಧ್ಯಮವನ್ನು ವಿದೇಶಿ ಹಿತಾಸಕ್ತಿಗಳಿಗೆ ಅನುಗುಣವಾಗಿ ವಿರೂಪಗೊಳಿಸಲು ಅವಕಾಶ ನೀಡಲು ಈ ಸರಕಾರ ಸಿದ್ಧವಾಗುತ್ತಿದೆ.

ಒಟ್ಟಿನಲ್ಲಿ ವಾಜಪೇಯಿ ಸರಕಾರದ ಕೃಪೆಯಿಂದ ಸ್ವದೇಶಿ, ವಿದೇಶಿ ಬಂಡವಾಳಿಗರಿಗೆ ಸುಗ್ಗಿಯೋ ಸುಗ್ಗಿ!! ಅದಕ್ಕಾಗಿ ಜನಗಳ ಸುಲಿಗೆಯಲ್ಲಿ ಇನ್ನಷ್ಟು ಹೆಚ್ಚಳ. ಇದನ್ನು ದೇಶದ ಒಮ್ಮತದ ನೀತಿ ಎಂದು ಬೇರೆ ಹೇಳಲಾಗುತ್ತಿದೆ. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು, ಪ್ರಗತಿಪರರು, ದೇಶ ಪ್ರೇಮಿಗಳು ಈ 'ಒಮ್ಮತ'ದಲ್ಲಿ ಸೇರಿಕೊಳ್ಳಲು ಸಿದ್ಧರಿಲ್ಲ. ಈಗ ಸಾಧ್ಯವಾಗುವ ಏಕೈಕ ಒಮ್ಮತವೆಂದರೆ ಈ ಅತ್ಯಂತ ದೇಶ-ವಿರೋಧಿ ಜನ-ವಿರೋಧಿ ಆರ್ಥಿಕ ಕ್ರಮಗಳ ವಿರುದ್ಧ ಬಹುಪಾಲು ಭಾರತೀಯ ಜನತೆ ಒಟ್ಟಾಗಿ ಕಟ್ಟಿ ಬೆಳೆಸುವ ಒಮ್ಮತ

ಮತ್ತೆ ಹೊಗೆಯಾಡುತ್ತಿರುವ ಬಾಬಾ ಬುಡನ್‌ಗಿರಿ ವಿವಾದ

ಚಿಕ್ಕಮಗಳೂರಿನಿಂದ ವಿ.ಸುಕುಮಾರ್

ಶತಮಾನಗಳಿಂದ ಕೋಮು ಸೌಹಾರ್ದಕ್ಕೆ ಹೆಸರಾದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಇನಾಂ ದತ್ತಾತ್ರೇಯ ಪೀಠ ಬಾಬಾ ಬುಡನ್‌ಗಿರಿಯ ಸುತ್ತಮುತ್ತಲಿನ ಜನ ಬಹಳ ಆತಂಕದಲ್ಲಿದ್ದಾರೆ. ಕಳೆದ ವರ್ಷ ಆಗಬಹುದಾಗಿದ್ದ ದೊಡ್ಡ ಅಘಾತ ತಪ್ಪಿದ್ದು, ಚಿಕ್ಕಮಗಳೂರಿನ ಜನತೆ ನಿಟ್ಟುಸಿರುವ ಬಿಡುವಂತಾಗಿತ್ತು. ಭಜರಂಗ ದಳ-ಸಂಘಪರಿವಾರದ ಸದಾ ಒಂದಲ್ಲ ಒಂದು ಕಡೆ ಕೋಮು ಗಲಭೆಗೆ ಬೇಕಾದ ಅನಗತ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತಲೇ ಇರುತ್ತಾರೆ. ಕೋಮು ಗಲಭೆಯಿಂದ ಮಾತ್ರ ತಮ್ಮ ಅಸ್ತಿತ್ವವನ್ನುಳಿಸಲು ಹಾಗೂ ಬೆಳೆಸಲು ಸಾಧ್ಯವೆಂದು ಅವರು ನಂಬಿದ್ದಾರೆ. ಆ ದಿಸೆಯಲ್ಲಿ ಅವರು ಕಾರ್ಯತಂತ್ರವನ್ನು ರೂಪಿಸುತ್ತಿದ್ದಾರೆ.

ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯ ಧ್ವಂಸಕ್ಕೆ ಮೊದಲು ದೇಶದ ಉದ್ದಗಲಕ್ಕೆ ಶ್ರೀರಾಮನ ಹೆಸರಿನಲ್ಲಿ ಅನೇಕ ರಥ ಯಾತ್ರೆಗಳನ್ನು ನಡೆಸಿ, ಕೋಮು ಗಲಭೆಯನ್ನು ಪ್ರಚೋದಿಸಿ ನಡೆಸಿದ ಕೋಮು ದಳ್ಳುರಿಯಲ್ಲಿ ಸಾವಿರಾರು ಅಮಾಯಕರು ಬಲಿಯಾದುದರ ಫಲ ತಮಗೆ ಲೋಕಸಭೆಯಲ್ಲಿ ಕೇವಲ ಎರಡು ಸ್ಥಾನಗಳು ಮಾತ್ರ ಇದ್ದುದನ್ನು ಹೆಚ್ಚಿಸಿ ಈಗ ಅವರು ತಮ್ಮ ಸ್ಥಾನಗಳನ್ನು 182 ಕ್ಕೆ ಏರಿಸಿ ಕೇಂದ್ರದಲ್ಲಿ ಇತರರ ಸಹಾಯ ಪಡೆದು ಅಧಿಕಾರ ಚುಕ್ಕಾಣಿ ಹಿಡಿದಿದ್ದಾರೆ. ಅನೇಕ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದಾರೆ.

ಕರ್ನಾಟಕದಲ್ಲಿ ಸಹ ಈ ತಂತ್ರವನ್ನು ನಡೆಸಲು ಹುಬ್ಬಳ್ಳಿಯ ಈದ್ಗಾ ಮೈದಾನ, ಚಿಕ್ಕಮಗಳೂರು ಜಿಲ್ಲೆಯಲ್ಲಿಯ ಶ್ರೀ ದತ್ತಾತ್ರೇಯ ಪೀಠ, ಬಾಬಾಬುಡನ್‌ಗಿರಿಯನ್ನು ಆರಿಸಿಕೊಂಡು ಕೋಮುಗಲಭೆಗೆ ಪ್ರಚೋದನೆ ನೀಡುತ್ತಾ ಬಂದಿದ್ದಾರೆ. ಹುಬ್ಬಳ್ಳಿ ಈದ್ಗಾ ಮೈದಾನದ ಸಮಸ್ಯೆಯನ್ನು ಶ್ರೀ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ತಾತ್ಕಾಲಿಕವಾಗಿ ಬಗೆಹರಿಸಿದ್ದುದರಿಂದ, ಆನಂತರ ತಮ್ಮ ಎಲ್ಲಾ ಕಾರ್ಯತಂತ್ರಗಳನ್ನು ಶ್ರೀ ದತ್ತಾತ್ರೇಯ ಪೀಠ ಬಾಬಾಬುಡನ್‌ಗಿರಿಯಲ್ಲಿ ಕೇಂದ್ರೀಕರಿಸಿರುವುದು ಕಂಡು ಬರುತ್ತಿದೆ.

ಹಿಂದೆ ಅಂತಹ ಮಹತ್ವ ಹೊಂದದ ದತ್ತ ಜಯಂತಿಯನ್ನು ಇತ್ತೀಚಿಗಿನ ವರ್ಷಗಳಲ್ಲಿ ಬಹಳ ದೊಡ್ಡ ರೀತಿಯಲ್ಲಿ ಬಾಬಾ ಬುಡನ್‌ಗಿರಿ ಬೆಟ್ಟದಲ್ಲಿ ಆಚರಿಸಲು ಪ್ರಾರಂಭಿಸಿದ್ದು ಅಲ್ಲದೆ, ಶ್ರೀ ದತ್ತಾತ್ರೇಯ ಪೀಠ ಬಾಬಾ ಬುಡನ್‌ಗಿರಿ ಹಿಂದೂಗಳಿಗೆ ಸೇರಿದ್ದು, ಅಲ್ಲಿಯ ದರ್ಗಾದೊಳಗೆ ಮೂರ್ತಿಯನ್ನಿಡಲು ಹಿಂದೂ ಪೂಜಾರಿಯನ್ನಿಡಲು ತಮಗೆ ಅವಕಾಶಬೇಕೆಂದು ಇಲ್ಲದ ಅನವಶ್ಯಕ ಸಮಸ್ಯೆಯನ್ನು ಹುಟ್ಟುಹಾಕಿದ್ದಾರೆ. ಕಳೆದ ವರ್ಷದ ದತ್ತ ಜಯಂತಿಯ ಮುನ್ನ ರಾಜ್ಯದ ನಾಲ್ಕು ಭಾಗಗಳಿಂದಲೂ ಭಜರಂಗದಳದವರು ಹಾಗೂ ಸಂಘ ಪರಿವಾರದವರು ರಥಯಾತ್ರೆಗಳನ್ನು ನಡೆಸಿ ಕೊನೆಯಲ್ಲಿ ದತ್ತಪೀಠ ಬಾಬಾಬುಡನ್‌ಗಿರಿಯಲ್ಲಿ ಜಮಾಯಿಸಿದ್ದರು. ದತ್ತಪೀಠದ ವಿಮೋಚನೆಯ ಘೋಷಣೆ ಮೊಳಗಿತ್ತು. ಸಂಘ ಪರಿವಾರದವರು ಅಯೋಧ್ಯೆಯಲ್ಲಿ ನಡೆಸಿದ ದುಷ್ಕೃತ್ಯದ ಅರಿವಿದ್ದ ರಾಜ್ಯ ಸರಕಾರ ಕಟ್ಟೆಚ್ಚರ ವಹಿಸಿ ಬಿಗಿ ಪೋಲೀಸ್ ಬಂದೋಬಸ್ತ್ ವಹಿಸಿದ್ದುದರಿಂದ ಅಹಿತಕರ ಘಟನೆ ನಡೆಯದೆ ರಾಜ್ಯದ ಮೂಲೆ-ಮೂಲೆಗಳಲ್ಲಿ ಮಾರಣಹೋಮ ನಡೆಯುತ್ತಿದ್ದುದು ತಪ್ಪಿತು. ಆದರೆ ಆ ಪ್ರದೇಶಗಳಲ್ಲಿ ಧ್ವಜ ಹಾರಿಸಿ ಕೇಕೆ ಹಾಕಿ ಕೂಗಿದ್ದು ಗಮನಾರ್ಹ.

ಕಳೆದ ವರ್ಷದ ತಮ್ಮ ವಿಫಲತೆಯನ್ನು ಮುಚ್ಚಲು ಭಜರಂಗ ದಳದ ಕಾರ್ಯಕರ್ತರು ದತ್ತಪೀಠ/ಬಾಬಾ ಬುಡನ್ ಗಿರಿಯ ಮುಖ್ಯಸ್ಥ 'ಸಜ್ಜಾದ್ ನಶೀನ್' ಕಳೆದ ಅಕ್ಟೋಬರಿನಲ್ಲಿ ನಿಧನರಾದಾಗ ಮತ್ತೆ ಕೋಮುಗಲಭೆಯನ್ನು ಪ್ರಚೋದಿಸಲು ಮುಂದಾದರು. ಸುಮಾರು 73 ವರ್ಷ ಪ್ರಾಯದ ಸಯ್ಯದ್ ಫೀರ್ ಮೊಹಮ್ಮದ್ ಶಹ್‌ಖಾದ್ರಿಯವರು ಅವರ ತಂದೆಯ ನಿಧನದ ನಂತರ ಕಳೆದ 57 ವರ್ಷಗಳಿಂದ ದತ್ತ ಪೀಠದ 'ಸಜ್ಜಾದ್ ನಶೀನ್'(ಮುಖ್ಯಸ್ಥ)ರಾಗಿದ್ದು ತೀವ್ರ ಅಸ್ವಸ್ಥತೆಯಿಂದಾಗಿ ತಾ. 25.10.1999 ರಂದು ಬೆಳಿಗೆ 6.20 ಕ್ಕೆ ಖಾಸಗಿ ನರ್ಸಿಂಗ್ ಹೋಂನಲ್ಲಿ ನಿಧನರಾಗಿದ್ದರು. ಅಂದು ಮಧ್ಯಾಹ್ನ 3 ಗಂಟೆಗೆ ಚಿಕ್ಕಮಗಳೂರಿನಿಂದ ಶ್ರೀ ದತ್ತಪೀಠಕ್ಕೆ ಮೃತರ ಕಳೆಬರ ಸಾಗಿಸಿ ಅಲ್ಲಿ ಅವರ ಪೂರ್ವಜರ ಸಮಾಧಿಯ ಪಕ್ಕದಲ್ಲಿ ಸಮಾಧಿ ಮಾಡುವುದೆಂದು ಪ್ರಚಾರ ಪಡಿಸಲಾಗಿತ್ತು. ಈ ಸುದ್ದಿಯನ್ನು ತಿಳಿದ ಭಜರಂಗ ದಳದವರು ಶಹ್‌ಖಾದ್ರಿಯವರ ಪಾರ್ಥಿವ ಶರೀರವನ್ನು ಬಾಬಾ ಬುಡನ್‌ಗಿರಿಯಲ್ಲಿ ಹೂಳಬಾರದೆಂದು ಸರಕಾರಕ್ಕೆ ಮನವಿ ಸಲ್ಲಿಸಿದ್ದು ಅಲ್ಲದೆ ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಕಳೆಬರವನ್ನು ಬಾಬಾ ಬುಡನ್‌ಗಿರಿ ತೆಗೆದುಕೊಂಡು ಹೋಗದಂತೆ ತಡೆಯಲು ಸನ್ನದ್ದರಾದರು. ಚಿಕ್ಕಮಗಳೂರಿನಿಂದ ಬಾಬಾ ಬುಡನ್‌ಗಿರಿಗೆ ಹೋಗುವ ದಾರಿ 6 ಕಿ.ಮಿ. ದೂರದ ಕೈಮರದಲ್ಲಿ ತಡೆಯಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ ಜಿಲ್ಲಾಡಳಿತದ ಮುಂಜಾಗ್ರತೆಯ ಕ್ರಮದಿಂದಾಗಿ ಗೋಪ್ಯವಾಗಿ ಬೆಳಿಗ್ಗೆ 10.45 ಕ್ಕೆ ಶಹಖಾದ್ರಿಯವರ ಕಳೆಬರವನ್ನು ದತ್ತ ಪೀಠಕ್ಕೆ ಬಾಬಾ ಬುಡನ್‌ಗಿರಿಗೆ ಸಾಗಿಸಿ ಬಿಗಿ ಪೋಲೀಸ್ ಬಂದೋಬಸ್ತ್‌ನೊಂದಿಗೆ ಸಂಜೆ 3.20 ಕ್ಕೆ ಅವರ ಪೂರ್ವಜರ ಸಮಾಧಿ ಪಕ್ಕದಲ್ಲಿ ಅಂತ್ಯ ಸಂಸ್ಕಾರ ಪೂರ್ಣಗೊಳಿಸಿದರು. ಇದನ್ನು ತಡವಾಗಿ ತಿಳಿದ ಸಂಘ ಪರಿವಾರದವರು ಹತಾಶೆಯಿಂದ ಜಿಲ್ಲಾಡಳಿತವನ್ನು ನಿಂದಿಸಿ ಚಿಕ್ಕಮಗಳೂರು ಬಂದ್‌ಗೆ ಕರೆ ನೀಡಿದರು. ಆದರೆ ಬಂದ್‌ಗೆ ಪ್ರತಿಕ್ರಿಯೆ ಕಂಡುಬರಲಿಲ್ಲ.

ಅಲ್ಲಿಂದೀಚೆಗೆ ಪದೇ ಪದೇ ಶಹ್‌ಖಾದ್ರಿಯವರ ಕಳೆಬರವನ್ನು ಅವರ ಸಮಾಧಿಯಿಂದ ಸ್ಥಳಾಂತರಿಸಲು ಒತ್ತಾಯಿಸುತ್ತಾ ಬರುತ್ತಿದ್ದಾರೆ. ರಾಜ್ಯದ ಶ್ರೇಷ್ಠ ನ್ಯಾಯಾಲಯದ ತೀರ್ಪಿನಲ್ಲಿ 1975 ರ ಹಿಂದಿನ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂದು ನೀಡಿದ ಆದೇಶವನ್ನು ತಪ್ಪಾಗಿ ವ್ಯಾಖ್ಯಾನ ಮಾಡುತ್ತಲಿದ್ದಾರೆ.

ಪುನಃ ಈ ವರ್ಷ ಇದೇ ಡಿಸೆಂಬರ್ 20 ರಿಂದ 22 ರವರೆಗೆ ನಡೆಯಲಿರುವ ದತ್ತ ಜಯಂತಿಯ ಸಂದರ್ಭ ರಾಜ್ಯದ ಎಲ್ಲಾ ತಾಲ್ಲೂಕುಗಳಿಂದಲೂ ಭಜರಂಗ ದಳದವರು ಹಾಗೂ ಭಕ್ತಾದಿಗಳು ಒಂದು ಜಮಾಯಿಸಬೇಕೆಂದು ಅಲ್ಲದೆ ಎಲ್ಲಾ ತಾಲ್ಲೂಕುಗಳಿಂದ ದತ್ತಪೀಠ ಬಾಬಾ ಬುಡನ್‌ಗಿರಿಗೆ ಜಾತಾಗಳನ್ನು ಹೊರಡಿಸಲು ಕರೆನೀಡಿದ್ದಾರೆ. ಇದರಿಂದ ಬಾಬಾ ಬುಡನ್‌ಗಿರಿ ಹಾಗೂ ಚಿಕ್ಕಮಗಳೂರು ಕೇಂದ್ರ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿದೆ. ರಾಜ್ಯ ಸರಕಾರದ ಬಿಗಿ ಬಂದೋಬಸ್ತ್ ಏರ್ಪಡಿಸಿದೆ.



ವಿವಾದದ ಕೇಂದ್ರಬಿಂದುವಾದ ಬಾಬಾ ಬುಡನ್‌ಗಿರಿ ತಪ್ಪಲಿನ ಜನ್ನತ್ ನಗರದಲ್ಲಿ ಇರುವ 'ದರ್ಗಾ'

ಈಗ ಬಾಬಾ ಬುಡನ್‌ಗಿರಿ ದತ್ತಪೀಠಕ್ಕೆ ವಿವಾದಕ್ಕೆ ಸಂಘ ಪರಿವಾರದವರು ಹೊಸತಿರುವು ನೀಡುತ್ತಿದ್ದಾರೆ. ಬಾಬಾ ಬುಡನ್‌ಗಿರಿಯಲ್ಲಿರುವುದು ಮಂದಿರ ಮಾತ್ರ, ಮಸೀದಿಯಿರುವುದು ಬಾಬಾ ಬುಡನ್‌ಗಿರಿಯ ತಪ್ಪಲಿನ ಮಲ್ಲೇನಹಳ್ಳಿಯ ಹತ್ತಿರ ಕಾಡಿನೊಳಗೆ ಕಿರಿದಾದ ದಾರಿಯಲ್ಲಿ ಹೋದಾಗ ಸಿಕ್ಕುವ ದರ್ಗಾ ಎಂದೂ, ಆದ್ದರಿಂದ ಬಾಬು ಬುಡನ್‌ಗಿರಿಯನ್ನು ತಮಗೆ ಬಿಡಿಸಿ ಕೊಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಬೇಕಾದ ಹಾಗೆ ನೂರಾರು ವರ್ಷಗಳ ಪುರಾವೆಗಳನ್ನು ಸೃಷ್ಟಿಸಲಾಗುತ್ತಿದೆ.

ಹಿಂದು ಹಾಗೂ ಮುಸ್ಲಿಂರ ಭಾವೈಕ್ಯತೆಯ ಕೇಂದ್ರವಾದ ಬಾಬಾ ಬುಡನ್‌ಗಿರಿಯನ್ನು ನಾನು ನನ್ನ ಜೀವಮಾನದ ಅರ್ಧ ಶತಮಾನದಿದ ನೇರವಾಗಿ ಬಲ್ಲೆ. ನೂರಾರು ವರ್ಷಗಳ ಹಿಂದಿನ ಅಲ್ಲಿಯ ಇತಿಹಾಸವನ್ನು ನಾನು ಅಭ್ಯಸಿಸದೇ ಇದ್ದರೂ ಶ್ರೀ ದತ್ತಪೀಠ /ಬಾಬಾ ಬುಡನ್‌ಗಿರಿಯಲ್ಲಿ ಹೇಗೆ ಕೋಮುಸೌಹಾರ್ದತೆ ಇತ್ತು ಎಂಬುದು ತಿಳಿದಿದೆ. ನಾನು ಹುಟ್ಟಿದ್ದು ಬಾಬಾ ಬುಡನ್ ಗಿರಿಯ ತಪ್ಪಲಿನಲ್ಲಿರುವ ಒಂದು ಕಾಫಿತೋಟದಲ್ಲಿ. ನನ್ನ ಬಾಲ್ಯವನ್ನೂ ಅಲ್ಲಿಯೇ ಕಳೆದೆ. ನನಗೆ ಸುಮಾರು 4 ಅಥವಾ 5 ವರ್ಷ ವಯಸ್ಸಾಗಿದ್ದಾಗ ನನ್ನ(ದೊಡ್ಡಪ್ಪನವರ ಮಗ) ಅಣ್ಣ ನನ್ನನ್ನು ತನ್ನ ಹೆಗಲ ಮೇಲೆ ಹೊತ್ತು ಸುಮಾರು 3-4 ಕಿ.ಮಿ. ದೂರದ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಉರುಸು ತೋರಿಸಿ ಕರೆ ತಂದು ಬಿಟ್ಟಿದ್ದಾರೆ. ಅಲ್ಲಿಂದೀಚೆಗೆ ಲೆಕ್ಕವಿಲ್ಲದಷ್ಟು ಸಲ ಬಾಬಾ ಬುಡನ್‌ಗಿರಿಗೆ ಹೋಗಿದ್ದೇನೆ. ಅನೇಕ ವರ್ಷ ಉರುಸ್ಸುಗಳನ್ನು ಕಂಡಿದ್ದೇನೆ.

ಹಿಂದೆ ಬಾಬಾ ಬುಡನ್ ಗಿರಿಯ ತಪ್ಪಲಲ್ಲಿರುವ ಕಾರ್ಮಿಕರು ಹಾಗೂ ಆಸುಪಾಸಿನ ಗ್ರಾಮಸ್ಥರು ವರ್ಷಕ್ಕೊಮ್ಮೆ ಬರುವ ಉರುಸ್ಸಿನಲ್ಲಿ ಭಾಗವಹಿಸಲು ದೊಡ್ಡ ಹಬ್ಬದ ಸಡಗರದಲ್ಲಿರುತ್ತಿದ್ದರು. ಉರುಸ್ಸಿಗೋಗಿ ಬರಲು ಹೆಣ್ಣು ಮಕ್ಕಳು ಕಾಸನ್ನು ಕೂಡಿ ಹಾಕುತ್ತಿದ್ದರು. ಬೆಳಿಗ್ಗೆ ಬೇಗನೆ ಬೆಟ್ಟ ಹತ್ತಿ ಬಾಬಾ ಬುಡನ್‌ಗಿರಿಯ ಉತ್ತರಕ್ಕೆ ಇರುವ 4-5 ಕಿ.ಮಿ. ದೂರವಿರುವ 'ಗಾಳಿಕೆರೆ' ಅಥವಾ 'ಪಲಂಗ್ ತಲಾಬ್' ಗಳಲ್ಲಿ ಹಾಗೂ ಮಾಣಿಕಧಾರಾದಲ್ಲಿ ಮಿಂದು, ದರ್ಗಾಕ್ಕೆ ಹೋಗಿ ಪೂಜೆ ಮಾಡಿಸಿ ನಂತರ ಸಂತರ ಜಾತ್ರೆಯಲ್ಲಿ ಸುತ್ತು ಹಾಕಿದ್ದರು. ಸಂಜೆ ಬರುವ ಗಂಧ(ಅಂದರೆ ನೂರಾರು ಫಕೀರರು ಹೊತ್ತು ತರುವ ಗಂಧ) ವನ್ನು ನೋಡಿ ಅಲ್ಲಿಂದ ಹಿಂತಿರುಗುತ್ತಿದ್ದರು. ಆಗ ಅಲ್ಲಿಯಾವುದೇ ಕೋಮು ಪ್ರಶ್ನೆ ಕಂಡಿರಲಿಲ್ಲ. ಹಿಂದೂಗಳು ಮುಸ್ಲಿಮರು ಭಾವೈಕ್ಯತೆಯಿಂದ ಇದ್ದರು.

ಆದರೆ ಈಗ ಬಿಜೆಪಿ ಹಾಗೂ ಸಂಘ ಪರಿವಾರದವರ ಪ್ರವೇಶದಿಂದ ಹಿಂದೆ ಇದ್ದ ಸಿಹಿ ವಾತಾವರಣವನ್ನು ಹಿಂದೂ -ಮುಸ್ಲಿಂ ಎಂದು ಕೆದಕುತ್ತಿದ್ದಾರೆ. ಅಮಾಯಕ ಜನರಲ್ಲಿ ಕೋಮು ವಿಷವನ್ನು ಬಿತ್ತುತ್ತಿದ್ದಾರೆ. ಆದರೆ ಇಲ್ಲಿಯ ಸಾಮಾನ್ಯ ಜನ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ.

ಇತಿಹಾಸ ಇತಿಹಾಸವಾಗಿಯೇ ಉಳಿಯಬೇಕೇ ಹೊರತು ಅದನ್ನು ತಿರುಚಲು ಹೊರಡುವುದು ಮಹಾಪರಾಧ. ಇತಿಹಾಸವನ್ನು ತಿರುಚಲು ಸಾಧ್ಯವಿಲ್ಲ. ಇಲ್ಲಿಯವರೆಗೆ ರಾಜ್ಯ ಸರ್ಕಾರ ಬಾಬಾ ಬುಡನ್‌ಗಿರಿ ದತ್ತಪೀಠದ ಪ್ರಶ್ನೆಯಲ್ಲಿ ದಿಟ್ಟ ನಿಲುವು ತಳೆದಿದೆ. ಜಿಲ್ಲಾಡಳಿತ ಬಿಗಿ ಕ್ರಮ ಕೈಗೊಂಡಿದೆ. ಅವರು ತಮ್ಮ ಹಿಡಿತವನ್ನು ಸ್ವಲ್ಪ ಸಡಿಲಿಸಿದರೂ ಕೋಮುವಾದಿಗಳು ತಮ್ಮ ಮೇಲುಗೈ ಸ್ಥಾಪಿಸಲು ಮುಂದಾಗುತ್ತಾರೆ. ಆದ್ದರಿಂದ ಪುನಃ ಮತ್ತೊಂದು ಬಾಬರಿ ಮಸೀದಿಯ ಘಟನೆ ನಿರ್ಮಾಣವಾದೀತು. ಅದಕ್ಕೆ ಸರ್ಕಾರ ತನ್ನ ಕಟ್ಟೆಚ್ಚರ ಮುಂದುವರಿಸಬೇಕು. ○

ವಿಗ್ರಹವಿಡಲು, ಪೂಜೆ ಸಲ್ಲಿಕೆಗೆ ಅವಕಾಶ ಬೇಡ ಸಚಿವರಲ್ಲಿ ಮನವಿ

ಬಾಬಾಬುಡನ್ ಗಿರಿ-ದತ್ತಾತ್ರೇಯ ಪೀಠದ ಗರ್ಭಗುಡಿಯೊಳಗೆ ಯಾವದೇ ದೇವರ ಮೂರ್ತಿ, ಚಿತ್ರಪಠ ಕೊಂಡೊಯ್ಯದಂತೆ ಹಾಗೂ ಯಾವ ರೀತಿ ಪೂಜೆ ಸಲ್ಲಿಸಲೂ ಅಲ್ಲಿ ಅವಕಾಶ ನೀಡಬಾರದೆಂದು ಸಯ್ಯದ್ ಗೌಸ್ ಮೊಹಿಯುದ್ದೀನ್ ಶಹ್‌ಖಾದ್ರಿ ಗೃಹ ಸಚಿವರನ್ನು ಒತ್ತಾಯಿಸಿದ್ದಾರೆ.

ಅವರು ಪೀಠಕ್ಕೆ ಭೇಟಿ ನೀಡಿದ್ದ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಲಿಖಿತ ಮನವಿ ಸಲ್ಲಿಸಿ, ಈ ಎಲ್ಲಾ ಕುತಂತ್ರಗಳನ್ನು ವಿಶ್ವ ಹಿಂದು ಪರಿಷತ್ ಮತ್ತು ಭಜರಂಗದಳಗಳು ಮಾಡುತ್ತಾ, ಮುಗ್ಧ ಜನರ ಭಾವನೆ ಕೆರಳಿಸಿ, ಹಿಂದೂ-ಮುಸಲ್ಮಾನರ ಐಕ್ಯತೆ ಹಾಳುಗೆಡುವುತ್ತಿವೆ ಎಂದಿದ್ದಾರೆ.

ಹಿಂದೆ 1975 ರಲ್ಲಿ ವಕ್ಫ್‌ಗೆ ಈ ಪೀಠವನ್ನು ಸೇರಿಸುವ ಬಗ್ಗೆ ಹಿಂದೂಗಳೇ ವಿರೋಧ ವ್ಯಕ್ತಪಡಿಸಿ, ಮೊಕದ್ದಮೆ ಹೂಡಿದ್ದು, ಅದರ ತೀರ್ಪಿನಲ್ಲೂ ಇದನ್ನು ಮುಜರಾಯಿ ಸಂಸ್ಥೆ ಎಂದು ಪರಿಗಣಿಸಿದ್ದು, ಹಿಂದು ಮತ್ತು ಮುಸಲ್ಮಾನರಿಬ್ಬರಿಗೂ ಪವಿತ್ರ ಸ್ಥಾನವೆಂದು ಹೇಳಲಾಗಿದೆ ಎಂಬುದನ್ನು ಉಲ್ಲೇಖಿಸಿದ್ದಾರೆ.

ಇದೊಂದು ಪ್ರಮುಖ ಮುಜರಾಯಿ ಸಂಸ್ಥೆಯಾಗಿದ್ದು, ಅದಕ್ಕೆ ತಾವು ಸಜ್ಜಾದ ನಶೀನ್ ಅಥವಾ ಗುರುವಾಗಿದ್ದು ಸರ್ಕಾರ ಸಹ ಇದನ್ನು ಮಾನ್ಯ ಮಾಡಿದೆ ಎಂದಿದ್ದಾರೆ.

ಈ ಸಂಸ್ಥೆಯಲ್ಲಿ ಏನೇ ನಡೆಯಬೇಕಾದರೆ, ತಮ್ಮ ಅನುಮತಿಯಿಂದಲೇ ಮಾಡಬೇಕೆಂದಿರುವ ಶಹ್‌ಖಾದ್ರಿ, ಈ ಒಪ್ಪಿತ ಸ್ಥಿತಿಯಲ್ಲಿ ಮುಜರಾಯಿ ಮ್ಯಾನುಯಲ್ ಸಹ ಅಡ್ಡ ಬರುವ ಹಾಗಿಲ್ಲವೆಂದಿದ್ದಾರೆ.

ಈ ಪೀಠದಲ್ಲಿ 1987 ರವರೆಗೆ ಎಲ್ಲವೂ ಸರಿಯಿದ್ದು, 1987 ರ ನಂತರ ಬಾಬ್ರಿ ಮಸೀದಿ ವಿವಾದ ಆರಂಭವಾದ ನಂತರ, ಈ ಸಂಸ್ಥೆಗೆ ಪೂಜಾರಿ ನೇಮಿಸಲು ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳ ಒತ್ತಾಯಿಸುತ್ತಿವೆ ಎಂದಿದ್ದಾರೆ.


ಈ ಸಂಸ್ಥೆಗಳು ಮೊದಲ ವರ್ಷ ಭಜನೆ ಆರಂಭಿಸಿ, ನಂತರ ದತ್ತಾತ್ರೇಯ ಜಯಂತಿ ಗರ್ಭ ಗುಡಿಯಲ್ಲಿ ಪೂಜೆ ಆರಂಭಿಸಿದ್ದು, ಇದನ್ನು ತಮ್ಮ ತಂದೆ ಸಹ ಆಕ್ಷೇಪಿಸಿದ್ದರೆಂದು ಮನವಿಯಲ್ಲಿ ಹೇಳಿದ್ದಾರೆ.

ಕಳೆದ ವರ್ಷ ಮೂರು ದಿನ ಜಯಂತಿ ಆಚರಿಸಿ, ವಿಶ್ವ ಹಿಂದೂ ಪರಿಷತ್ ಬಾವುಟ ಹಾರಿಸಿ, ಗರ್ಭಗೃಹದ ಒಳಗೆ ವಿಗ್ರಹವನ್ನು ಪೀಠದ ಬಳಿ ಇಟ್ಟು ಪೂಜಿಸಿದ್ದು, ಇದಕ್ಕೂ ತಮ್ಮ ತಂದೆ ಆಕ್ಷೇಪಿಸಿದ್ದರೆಂದು ಹೇಳಿದ್ದಾರೆ. 1975 ರವರೆಗೆ ಆನಂತರ ಸಹ ಇಲ್ಲಿ ದತ್ತಜಯಂತಿ ಇರಲಿಲ್ಲವೆಂಬುದನ್ನು ದಾಖಲೆಗಳಿಂದ ಪರಿಶೀಲಿಸಬಹುದೆಂದು ತಿಳಿಸಿ, ಈ ರೀತಿ ಪೂಜೆಗೆ ಇಲ್ಲಿ ಅವಕಾಶವಿಲ್ಲವೆಂದಿರುವ ಶಹ್‌ಖಾದ್ರಿ ತಮ್ಮ ಅಧಿಕಾರವನ್ನು ಕಿತ್ತುಕೊಳ್ಳಲು ಅಥವಾ ಮೊಟಕುಗೊಳಿಸಲಾಗಿಲ್ಲವೆಂದು ಹೇಳಿದ್ದಾರೆ.

'ಜನಮಿತ್ರ' ಪತ್ರಿಕೆಯಿಂದ

ಕಳೆದ ಸಂಚಿಕೆಯಲ್ಲಿ ಜ್ಯೋತಿ ಬಸು ಅವರು ತೆಲಂಗಾಣಕ್ಕೆ ಭೇಟಿ ನೀಡಿ ತೆಲಂಗಾಣ ಹೋರಾಟದ ಬಂಧಿಗಳನ್ನು ಭೇಟಿ ಮಾಡಿ ಬಗ್ಗೆ ಹಾಗೂ ದೆಹಲಿಯಲ್ಲಿ ನೆಹರೂ ಅವರನ್ನು ಭೇಟಿ ಮಾಡಿ ತೆಲಂಗಾಣ ಹೋರಾಟದ ಬಂಧಿಗಳನ್ನು ಬಿಡುಗಡೆ ಮಾಡಲು ಒತ್ತಾಯಿಸಿದ್ದರ ಬಗ್ಗೆ ಓದಿದ್ದೀರಿ. ಈ ಸಂಚಿಕೆಯಲ್ಲಿ ಜ್ಯೋತಿ ಅವರು ದೇಶ ಸಂವಿಧಾ ಅಂಗೀಕರಿಸಿದ ನಂತರ ಪ.ಬಂಗಾಳದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧದ ಹೋರಾಟಗಳನ್ನು ಸ್ಮರಿಸಿಕೊಂಡಿದ್ದಾರೆ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ
ಕನ್ನಡಕ್ಕೆ: ವಿಶ್ವಕುಂದಾಪುರ

ಕಂತು 19

1951-52ರ ಬಜೆಟ್ ಅಧಿವೇಶನ 1951 ಫೆಬ್ರವರಿ 8 ರಂದು ಆರಂಭವಾಯಿತು. ಈ ಅಧಿವೇಶನದಲ್ಲಿ ನಾನು ಹಲವು ಚರ್ಚೆಗಳಲ್ಲಿ ಪಾಲ್ಗೊಂಡೆ. ಡಾ. ಪಿ.ಸಿ. ಘೋಷ್ ಸುರೇಶ ಬ್ಯಾನರ್ಜಿ, ಮತ್ತು ಚಾರು ಚಂದ್ರ ಭಂಡಾರಿ ಪ್ರಜಾ ಸೋಷಲಿಸ್ಟ್ ಪಕ್ಷ (ಪಿಎಸ್‌ಪಿ)ವನ್ನು ರಚಿಸುವುದರೊಂದಿಗೆ ಕಾಂಗ್ರೆಸ್ ಆ ವೇಳೆಗೆ ವಿಭಜನೆಗೊಂಡಿತ್ತು. ಹೇಮಂತ ಬೋಸ್ ಕೂಡ ಕಾಂಗ್ರೆಸ್ ಶಾಸಕ ಪಕ್ಷವನ್ನು ತೊರೆದಿದ್ದರು. ಅವರೆಲ್ಲ ಪ್ರತಿಪಕ್ಷ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದರು. ವಿಧಾನಸಭೆಯಲ್ಲಿ ಕಾಂಗ್ರೆಸ್ ಸರಕಾರವನ್ನು ಟೀಕಿಸುವ ಒಂದೇ ಒಂದು ಅವಕಾಶವನ್ನು ನಾನು ಕಳೆದುಕೊಳ್ಳುತ್ತಿರಲಿಲ್ಲ.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ವೇಳೆ ರತನ್‌ಲಾಲ್ ಬ್ರಹ್ಮನ್ ಚಹಾ ತೋಟ ಕಾರ್ಮಿಕರ ದಮನೀಯ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

1951 ಮೇ 18 ರಂದು ಕಲ್ಕತ್ತ ವಿಶ್ವವಿದ್ಯಾಲಯ ಇನ್ಸ್‌ಟಿಟ್ಯೂಟ್ ಹಾಲ್‌ನಲ್ಲಿ ಕಾಕಾ ಬಾಬುಗೆ ನಾಗರಿಕ ಸಮ್ಮಾನ ನೀಡಲಾಯಿತು. ನ್ಯಾಯವಾದಿ ಅತುಲ್ ಗಂಗೂಲಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭ ಭರ್ಜರಿ ಯಶಸ್ವಿಯಾಯಿತು. ಹೇಮಂತ ಬೋಸ್, ಮೃಣಾಲ್ ಕಾಂತಿ ಬೋಸ್ ಮತ್ತು ಸತ್ಯಪ್ರಿಯ ಬ್ಯಾನರ್ಜಿ ಸಂಚಾಲಕರಾಗಿದ್ದರು.

ಮರುದಿನ 'ಸ್ವಾಧಿನತಾ' ಹೀಗೆ ವರದಿ ಮಾಡಿತು. "ಜನ ನಾಯಕ ಮುಜಫರ್ ಅಹಮದ್‌ರಿಗೆ ಜನರಿಂದ ಕಿಕ್ಕಿರಿದು ತುಂಬಿದ್ದ ವಿ.ವಿ. ಎನ್ಸ್‌ಟಿಟ್ಯೂಟ್ ಹಾಲ್‌ನಲ್ಲಿ ಹಾರ್ದಿಕವಾಗಿ ಸನ್ಮಾನಿಸಲಾಯಿತು. ಕಾಂ||ಮುಜಫರ್ ಅಹಮದ್ ಭಾವಪೂರ್ಣ ಭಾಷಣ ಮಾಡಿ ವಿಚಾರಣೆಯಿಲ್ಲದೆ ಬಂಧಿಸಲಾಗಿರುವ ಕೈದಿಗಳನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಚುನಾವಣೆಗಳಲ್ಲಿ ಪಕ್ಷ ಅನುಸರಿಸಬೇಕಾದ ನಿಲುವು ನಮ್ಮ ಮುಂದಿತ್ತು. ಪ್ರಗತಿಪರ ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಆಧಾರದಲ್ಲಿ ನಾವು ಎಡ ಮತ್ತು ಜನತಾಂತ್ರಿಕ ಶಕ್ತಿಗಳ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಇ.ಐ. ರೈಲ್ ರೋಡ್ ವರ್ಕರ್ಸ್ ಯೂನಿಯನ್‌ನ ನಿಯೋಗವೊಂದರ ನೇತೃತ್ವದಲ್ಲಿ ವಹಿಸಿಕೊಂಡು 1951 ಮಾರ್ಚ್ 27ರಂದು ಎ.ಐ.ಆರ್.ಎಫ್ ನ ಪ್ರಧಾನ ಕಾರ್ಯದರ್ಶಿ ಎಸ್. ಗುರುಸ್ವಾಮಿಯವರಲ್ಲಿಗೆ ನಾನು ಹೋದೆ. ನಾನಾ ರೈಲ್ವೆ ನೌಕರ ಸಂಘದ ನಡುವೆ ಕಾರ್ಯಾಚರಣೆಯಲ್ಲಿ ಹೆಚ್ಚಿನ ಒಗ್ಗಟ್ಟು ಅಗತ್ಯ ಎಂದು ನಾನು ಪ್ರತಿಪಾದಿಸಿದೆ. ಇಐ ರೆಲ್ಸ್ ರೋಡ್ ವರ್ಕರ್ಸ್ ಯೂನಿಯನ್‌ನ ವಿಶೇಷ ಸಭೆಯೊಂದು 1951 ಏಪ್ರಿಲ್ 13-14ರಂದು ನಡೆಯಿತು. ಅಲಹಬಾದ್, ತುಂಡ್ಲಾ, ಜಮಾಲ್‌ಪುರ,

ಆಹಾರಕ್ಕೆ ಹಾಹಾಕಾರ .... ಚಳವಳಿ

ಅಸನ್ಸೋಲ್, ಅಲುಹಾ, ಹೌರಾ, ಬಂಡೇಲ್, ರಾಮಪುರ್ಹತ್, ನೈಹತಿ, ಕಂಚರಪರಾ ಮತ್ತು ಕಲ್ಕತ್ತಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಸತ್ಸೇನ್ ಗಂಗೂಲಿ ಪ್ರಧಾನ ಕಾರ್ಯದರ್ಶಿಯಾಗಿರುವ ಹೊಸ ಕಾರ್ಯಸಮಿತಿಯನ್ನು ಸಭೆಯಲ್ಲಿ ರಚಿಸಲಾಯಿತು.

ಎತ್ತೆತ್ತಲೂ ಕೆಂಬಾವುಟ.

ಅದೇ ವರ್ಷ ಮೇ 22ರಂದು ನೀಲಗಿರಿಯಲ್ಲಿ ರೈಲ್ವೆ ನೌಕರರ ರ್‍ಯಾಲಿಯೊಂದರಲ್ಲಿ ನಾನು ಮಾತನಾಡಿದೆ. ಒಗ್ಗಟ್ಟಿನ ಕೊರತೆ ಹಾಗೂ ಎಐಆರ್‌ಎಫ್‌ನ ಕೆಲವು ಮುಖಂಡರ ಅಸಹಕಾರವಿದ್ದರೂ ಚಳವಳಿಯನ್ನು ಬಲಪಡಿಸುವುದು ಅಗತ್ಯ ಎಂದು ನಾನು ಹೇಳಿದೆ.

ಕಾಂಗ್ರೆಸ್ ಸರಕಾರ ನಮ್ಮ ಯೂನಿಯನ್ ಮೇಲೆ ದೊಡ್ಡ ದಾಳಿಗಳನ್ನು ಸಂಘಟಿಸಿತು. ನಮ್ಮ ಸಾವಿರಾರು ಕಾರ್ಯಕರ್ತರು ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿದ್ದರು. ಕಾಂಗ್ರೆಸ್ ಸರಕಾರ ಬ್ರಿಟಿಷ್ ಆಳರಸರಂತೆಯೇ ವರ್ತಿಸುತ್ತಿತ್ತು. ಆದರೆ ಗ್ರಾಮಗಳಲ್ಲಿ ಫ್ಯಾಕ್ಟರಿಗಳಲ್ಲಿ ಮತ್ತು ಚಹಾ ತೋಟಗಳಲ್ಲಿ ಕೆಂಬಾವುಟ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸತೊಡಗಿತು. ರತನ್‌ಲಾಲ್ ಬ್ರಹ್ಮನ್ ಕೂಡ ರ್‍ಯಾಲಿಯಲ್ಲಿ ಮಾತಾಡಿದರು.

ಅದು ಆಹಾರ ಬಿಕ್ಕಟ್ಟು ಬಿಗಡಾಯಿಸಿದ ಸಮಯವಾಗಿತ್ತು. ಅಗತ್ಯ ಸಾಮಗ್ರಿಗಳು ಜನಸಾಮಾನ್ಯರ ಕೈಗೆ ಎಟುಕದ ಪರಿಸ್ಥಿತಿಯಿತ್ತು. ಹತ್ತು ರೂಪಾಯಿಯ ಧೋತಿ ಮೂರು ಪಟ್ಟು ಹೆಚ್ಚು ಬೆಲೆಗೆ ಮಾರಾಟವಾಗುತ್ತಿತ್ತು. ಅನೇಕ ಪ್ರದೇಶಗಳಲ್ಲಿ 'ಹಸಿವು ರ್‍ಯಾಲಿಗಳನ್ನು ಸಂಘಟಿಸಲಾಯಿತು.

ಗೋಲಿಬಾರ್.... ಸಾವು

ಆಹಾರಕ್ಕೆ ಹಾಹಾಕಾರವೆದ್ದಿತು. ಆಹಾರ ಇದುವೇ ಪ್ರಧಾನ ಕೂಗಾಗಿತ್ತು. ಕೋಪೋದ್ರಿಕ್ತ ಜನರು ಕಾಳಸಂತೆಕೋರರ ಅಡ್ಡೆಗಳ ಮೇಲೆ ದಾಳಿ ಆರಂಭಿಸಿದರು. ಅಲ್ಲಲ್ಲಿ ಘರ್ಷಣೆಗಳು ನಡೆದ ಸುದ್ದಿ ಹರಿದುಬರುತ್ತಲೇ ಇತ್ತು. 1951 ಏಪ್ರಿಲ್ 21 ರಂದು ಕೂಚ್ ಬಿಹಾರ ಪಟ್ಟಣದಲ್ಲಿ ನಡೆದ ಹಸಿವು ರ್‍ಯಾಲಿಯಲ್ಲಿ ಸುಮಾರು 5000 ಜನರು ಭಾಗವಹಿಸಿದ್ದರು. ಪೊಲೀಸರು ಯಾವುದೇ ಪ್ರಚೋದನೆಯಿಲ್ಲದೆ ಗುಂಡು ಹಾರಿಸಿದರು. ಐದು ಜನರು ಸತ್ತರು, ಕನಿಷ್ಠ 40 ಮಂದಿ ಗಾಯಗೊಂಡರು.

ಅದರ ಮರುದಿನವೇ ಇನ್ನೊಂದು ರ್‍ಯಾಲಿಯನ್ನು ಸಂಘಟಿಸಲಾಯಿತು. ಪೊಲೀಸರು ಇನ್ನಿಲ್ಲದ ದೌರ್ಜನ್ಯಕ್ಕೆ ಇಳಿದರು. "ಕೂಚ್ ಬಿಹಾರ್ ಪಟ್ಟಣಕ್ಕೆ ಸೇನೆಯನ್ನು ಕರೆಸಲಾಗಿದೆ. ಸೈನಿಕರು ನಗರದಲ್ಲಿ ಪಥಸಂಚಲನ ನಡೆಸುತ್ತಿದ್ದಾರೆ. ಸಚಿವಾಲಯದ ಹೊರಗೆ ಪೊಲೀಸರು ನಡೆಸಿದ ಗೋಲಿಬಾರಿನಿಂದ ಪರಿಸ್ಥಿತಿ ಬಿಗಡಾಯಿಸಿದೆ ಎಂದು ಅಧಿಕೃತ ವಕ್ತಾರರು ಹೇಳಿದ್ದಾರೆ" ಎಂದು 'ಸ್ವಾಧಿನತಾ' ವರದಿ ಮಾಡಿತು.

"ಪ್ರತಿಭಟನಕಾರರು ಕೂಡ ಬಿಹಾರ ಪೊಲೀಸ್ ಸೂಪರಿಂಟೆಂಡೆಂಟ್ ಮನೆ ಮೇಲೆ ಆಕ್ರಮಣ ಮಾಡಿದರು. ಪೀಠೋಪಕರಣಗಳನ್ನು ಧ್ವಂಸಗೊಳಿಸಿದರು. ಕೂಚ್ ಬಿಹಾರ, ಮಾತಭಂಗ ಮತ್ತು ದಿನ್ಹತಾಗಳಲ್ಲಿನ ಕಾಂಗ್ರೆಸ್ ಕಚೇರಿಗಳ ಮೇಲೆ ಕೂಡ ಚಳವಳಿಕಾರರು ದಾಳಿಮಾಡಿ ದಾಖಲೆ ಪತ್ರಗಳು ಹಾಗೂ ಪೀಠೋಪಕರಣಗಳನ್ನು ನಾಶಗೊಳಿಸಿದರು. ಇಂಥ ಗರ್ಷಣೆಗಳ ಇನ್ನಷ್ಟು ಸುದ್ದಿಗಳು ಬರುತ್ತಿದೆ" ಎಂದೂ 'ಸ್ವಾಧೀನತಾ' ತಿಳಿಸಿತು.

ಕೊಲೆಗಡುಕರನ್ನು ಬಂಧಿಸಬೇಕೆಂಬ ಒತ್ತಾಯ ವ್ಯಾಪಕವಾಗಿ ಕೇಳಿ ಬಂತು. ಸರಕಾರ ಮಣಿದು 144ನೇ ಸೆಕ್ಷನ್ ಅನ್ವಯದ ನಿಷೇದಾಜ್ಞೆಯನ್ನು ವಾಪಸ್ ಪಡೆಯಿತು. ಪಟ್ಟಣದ ಕೆಲವು ಭಾಗಗಳಲ್ಲಿ ಪಡಿತರ ಅಂಗಡಿಗಳನ್ನು ತೆರೆಯಲಾಯಿತು.

ವಿಚಾರಣೆ ವರದಿ ಕಸದ ಬುಟ್ಟಿಗೆ!

ನ್ಯಾಯಮೂರ್ತಿ ಗುಹಾ ರಾಯ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಯೇನೋ ನಡೆಯಿತು. ಆದರೆ ಅದರ ವರದಿ ಸರಕಾರ ಬಯಸಿದಂತೆ ಇರಲಿಲ್ಲ ಹಾಗಾಗಿ ಅದನ್ನು ಕಸದ ಬುಟ್ಟಿಗೆ ಎಸೆಯಲಾಯಿತು.

ದೀನ್ಸೇಂದ್ರ ತಾಲೂಕ್‌ದಾರ (7ವರ್ಷ) ಮತ್ತು ಕವಿತಾ ಬೋಸ್ (13 ವರ್ಷ) ಕೂಚಾ ಬಿಹಾರನಲ್ಲಿ ನಡೆದ ಗೋಲಿಬಾರಿನಲ್ಲೇ ಸ್ಥಳದಲ್ಲೇ ಸತ್ತವರು. ಗುಂಡೇಟು ತಗಲಿ ಗಾಯಗೊಂಡಿದ್ದ ವಂದನ ತಾಲೂಕ್‌ದಾರ (16 ವರ್ಷ), ಜಿಪೇನ್ ಮಾನೆ ಬಾದಲ್ ವಿಶ್ವಾಸ್ (23ವರ್ಷ) ಮತ್ತು ಸತೀಶ್ ದೇನವಾಥ್ (25 ವರ್ಷ) ಆಸ್ಪತ್ರೆಯಲ್ಲಿ ಮೃತರಾದರು.

ಪರಿಸ್ಥಿತಿಯ ಅಧ್ಯಯನಕ್ಕಾಗಿ ಕೂಚ್‌ಬಿಹಾರ್‌ಗೆ ನನ್ನನ್ನು ಕಳಿಸಲಾಯಿತು. ಮೃತಪಟ್ಟವರ ಪೋಷಕರನ್ನಲ್ಲದೆ ಎಡಪಂಥಿಯ ಕಾರ್ಯಕರ್ತರು ಮತ್ತು ಪ್ರಮುಖ ನಾಗರಿಕರನ್ನು ನಾನು ಭೇಟಿಯಾದೆ. ಏಪ್ರಿಲ್ 29ರಂದು ಸುಮಾರು 6000 ಜನ ಸೇರಿದ್ದ ಬೃಹತ್ ಸಭೆಯಲ್ಲಿ ಮಾತನಾಡಿದೆ.

"ಇಡೀ ಪಶ್ಚಿಮ ಬಂಗಾಳಕ್ಕೆ ನೀವು ದಾರಿ ತೋರಿಸಿದ್ದೀರಿ. ಕಾಂಗ್ರೆಸ್‌ನ ಕಳೆದ ನಾಲ್ಕು ವರ್ಷಗಳ ಆಡಳಿತದಲ್ಲಿ ಗೋಲಿಬಾರ್‌ಗಳಲ್ಲಿ 40 ಮಹಿಳೆಯರ ಸಹಿತ 200 ಜನರು ಸತ್ತಿದ್ದಾರೆ." ಎಂದು ನಾನು ಹೇಳಿದೆ. ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂಬ ಬೇಡಿಕೆಯನ್ನು ಮಂಡಿಸಲಾಯಿತು.

ಮೇ 16ರಂದು ನನ್ನನ್ನು ಮತ್ತೆ ಕೂಚ್ ಬಿಹಾರಗೆ ಕಳಿಸಲಾಯಿತು. ದಿನ್ಹತದಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ನಾನು ಕಾಂಗ್ರೆಸ್ ಸರಕಾರವನ್ನು ಉಗ್ರವಾಗಿ ತರಾಟೆಗೆ ತೆಗೆದುಕೊಂಡೆ.

"ಕಾಂಗ್ರೆಸ್ ಸರಕಾರ ದೇಶದ ಯಾವುದೇ ಸಮಸ್ಯೆಗಳನ್ನು ಬಗೆಸಹಿಸಿಲ್ಲ. ಹಾಗೆ ನೋಡಿದರೆ ಅದು ಪರಿಸ್ಥಿತಿಯನ್ನು ಮತ್ತಷ್ಟು ಹಾಳುಮಾಡುತ್ತಿದೆ. ಹಸಿವಿನಿಂದ ಕಂಗಾಲಿಗಿರುವ ಜನರ ಮೇಲೆ ಅದು ಗುಂಡು ಹಾರಿಸುತ್ತಿದೆ. ಎಡ ಪ್ರಜಾ ಸತ್ತಾತ್ಮಕ ಜನತಾ ಸರಕಾರ ಕಾಲದ ತುರ್ತು ಅಗತ್ಯವಾಗಿದೆ. ಕಾಂಗ್ರೆಸ್ ಸರಕಾರವನ್ನು ತೊಲಗಿಸಬೇಕು. ದೇಶ ಹೊಸದೊಂದು ನಾಯಕತ್ವದಲ್ಲಿ ಮುಂದಾಗಬೇಕು" ಎಂದು ನಾನು ಭಾಷಣದಲ್ಲಿ ಪ್ರತಿಪಾದಿಸಿದೆ.

ಕೂಚ್‌ಬಿಹಾರ್‌ನ ಈಚಿನ ವಿಶ್ವಮಾನಗಳು ಜನತೆಯ ಅಂದೋಲನಕ್ಕೆ ಒಂದು ಮಾದರಿಯಾಗಬಲ್ಲದು. ಈ ಚಳವಳಿಯ ಬೇರುಗಳನ್ನು ಬಲಪಡಿಸಲು ಕೆಲಸ ಮಾಡುವುದು ಅಗತ್ಯ ಎಂದೂ ನಾನು ಹೇಳಿದೆ.

ಎಲ್ಲಾ ಎಡಪಂಥೀಯ ಟ್ರೇಡ್ ಯೂನಿಯನ್‌ಗಳು 1951ರ ಮೇ ದಿನವನ್ನು ಒಂದೇ ವೇದಿಕೆಯಡಿ ಸೇರಿ ಆಚರಿಸಿದವು.

(ಮುಂದುವರಿಯುವುದು)

ಕೈಮಗ್ಗ ನೇಕಾರರ ಧರಣಾ ಸತ್ಯಾಗ್ರಹ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನೇಕಾರರಿಗೆ ತಿಂಗಳವರಗೆ ನೂಲು ಪೂರೈಸದಿರುವುದರಿಂದ ಉದ್ಯೋಗವಿಲ್ಲದೆ ಸಹಸ್ರಾರು ನೇಕಾರರು ಉಪವಾಸವಿರುವಂತಹ ಗಂಭೀರ ಪರಿಸ್ಥಿತಿ ಬಂದು ಒದಗಿದೆ.

ಸರಕಾರ ಈ ಬಡವರ್ಗಕ್ಕೆ ನಿಯಂತ್ರಿತ ಬೆಲೆಯಲ್ಲಿ ನೂಲಿನ ಪೂರೈಕೆ ಮತ್ತು ಮಾರಾಟದ ವ್ಯವಸ್ಥೆಗೆ ಗಮನ ನೀಡುತ್ತಿಲ್ಲ. ಬದಲಾಗಿ ನೇಕಾರ ಸಹಕಾರಿ ಭ್ರಷ್ಟ ಸೊಸಾಯ್ಟಿ ಮಾಲಿಕರಿಗೆ ಖಾದಿ ಕೇಂದ್ರದ ಮಾಲಿಕರಿಗೆ ಕೋಟಿಗಟ್ಟಲೆ ಹಣ ನೀಡುತ್ತಿರುವುದು ಶ್ರೀಮಂತರ ಪಾಲಾಗುತ್ತಿದೆ. ದುಡಿವ ನೇಕಾರರಿಗೆ ಯಾವ ಹಿತವು ಆಗುತ್ತಿಲ್ಲವೆಂದು ಕೆ.ಎಚ್.ಡಿ.ಸಿ.ಗೆ ಹೆಚ್ಚಿನ ಧನಸಹಾಯ ನೀಡಿ ವ್ಯವಸ್ಥಿತವಾಗಿ ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿ ನವಂಬರ್ 15ರಂದು ರಾಣೆಬೆನ್ನೂರಿನ ತಮ್ಮಿನಕಟ್ಟಿ ನಿಗಮದೆದುರು ಧರಣಾ ಸತ್ಯಾಗ್ರಹ ನಡೆಸಿದರು. ನೇಕಾರರನ್ನು ಉದ್ದೇಶಿಸಿ ಎಸ್.ಎಫ್. ಕ್ಯಾದಗಿ ಮಾತನಾಡಿ ಬಿಜೆಪಿ ಕಾಂಗ್ರೈ ಸರಕಾರಗಳು ಅನುಸರಿಸುತ್ತಿರುವ ಜಾಗತೀಕರಣ ಉದಾರೀಕರಣ ನೀತಿ ರೈತರಂತೆ ನೇಕಾರರನ್ನು ಸಹ ದಿವಾಳಿ ಮಾಡುತ್ತಿದೆ. ಒಗ್ಗಟ್ಟಾಗಿ ಸಾವು ಬದುಕಿನ ಹೋರಾಟಕ್ಕೆ ಸಿದ್ದರಾಗಿರೆಂದು ಕರೆನೀಡಿದರು.

ರಾಣೆಬೆನ್ನೂರಿ ಕೆ.ಎಚ್.ಡಿ.ಸಿ. ಅಧಿಕಾರಿಗಳು ಹಲಗೇರಿ ರಕ್ಷಣಾಧಿಕಾರಿಗಳ ಸಮಕ್ಷಮ ಹುಬ್ಬಳ್ಳಿಯಿಂದ ಅಧಿಕಾರಿಗಳನ್ನು ಕರೆಸಿ ಸಮಸ್ಯೆಗಳನ್ನು ಬಗೆಹರಿಸುತ್ತೇನೆಂದು ಆಶ್ವಾಸನೆ ನೀಡಿದರು.

ರಾಜ್ಯ ಸರಕಾರಿ ನೌಕರರ ರಾಷ್ಟ್ರೀಯ ಸಮ್ಮೇಳನ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 10ನೇ ರಾಷ್ಟ್ರೀಯ ಸಮ್ಮೇಳನವು 1999ರ ಡಿಸೆಂಬರ್ 27 ರಿಂದ 30ರವರೆಗೆ ಮುಂಬಯಿ ನಗರದ "ರಂಗಭವನ"ದಲ್ಲಿ ನಡೆಯಲಿದೆ.

ಈ ಸಮ್ಮೇಳನದಲ್ಲಿ ಕರ್ನಾಟಕದಿಂದ 75 ಪ್ರತಿನಿಧಿ ವೀಕ್ಷಕರು ಸೇರಿದಂತೆ, ದೇಶದ ವಿವಿಧ ರಾಜ್ಯಗಳಿಂದ ಸುಮಾರು 3000 ಪ್ರತಿನಿಧಿ ಮತ್ತು ವೀಕ್ಷಕರು ಬಾಗವಹಿಸುವರು.

ಬಸ್ ಪ್ರಯಾಣ ದರ ಏರಿಕೆ ವಿರೋಧಿಸಿ ಮೆರವಣಿಗೆ

ಡಿಸೆಲ್, ಬಸ್ ದರ ಏರಿಸಿರುವುದನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಸಿ.ಐ.ಟಿ.ಯು ಮತ್ತು ಡಿ.ವೈ.ಎಫ್.ಐ. ವಿಜಾಪುರ ಸಂಘಟನೆಗಳು ನಗರದಲ್ಲಿ ಮೆರವಣಿಗೆ ನೆಡೆಸಿದರು. ಎ.ಪಿ.ಎಂ.ಸಿ. ಯಾರ್ಡ್‌ನಿಂದ ಹೊರಟ ಪ್ರತಿಭಟನಾಕಾರರರ ಈ ಮೆರವಣಿಗೆಯು ನಗರಸಭೆ ಮೂಲಕ ಪ್ರಮುಖ ಬೀದಿಗಳಿಂದ ಹಾಯ್ದು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಅಧಿವೇಶನದಲ್ಲಿ ವಿರೋಧ ಪಕ್ಷದವರೊಂದಿಗೆ ಚರ್ಚಿಸದೇ ಬಸ್ ದರ ಏರಿಸುವುದು ಖಂಡನೀಯ. ಸಾರಿಗೆ ಸಂಸ್ಥೆಗಳಲ್ಲಿ ಸೋರಿಕೆಯಾಗುತ್ತಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರ ತಡೆಗಟ್ಟಿದರೆ ಬಸ್ ಪ್ರಯಾಣ ದರ ಏರಿಕೆಯ ಪ್ರಮೇಯವೇ ಬರುವುದಿಲ್ಲ. ದರ ಏರಿಕೆಯಿಂದ ಜನ ಸಾಮಾನ್ಯರಿಗೆ ಬಾರೀ ಹೊರೆಯಾಗಿದೆ ಎಂದು ಪ್ರತಿಭಟನೆಕಾರರು ಆರೋಪಿಸಿದರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದಿಢೀರನೇ ಡಿಸೆಲ್ ಬೆಲೆ ಏರಿಸುವುದನ್ನು ಸಂಘಟನೆಗಳು ಖಂಡಿಸಿವೆ.

ವಿದ್ಯುತ್ ನೀತಿ ಬದಲಾಯಿಸಲು ಆಗ್ರಹಿಸಿದ ಪ್ರತಿಭಟನಾಕಾರರು, ಜನತಾ ದಳ ಸರಕಾರ ವಿದ್ದಾಗ ನೇಮಿಸಿದ ಸದನ ಸಮಿತಿಯ ಶಿಫಾರಸ್ಸಿನಂತೆ ರೈತರ ಪಂಪಸೆಟ್‌ಗಳಿಗೆ ಹೆಚ್.ಪಿ. ಒಂದಕ್ಕೆ 100 ರೂ. ನಿಗದಿ ಮಾಡಿತ್ತು. ಅಕ್ರಮ ಪಂಪ್‌ಸೆಟ್‌ಗಳಿಗೆ ದಂಡ ಹಾಕಲು ಪರಿವರ್ತನೆ ಮಾಡಿ ವರದಿ ಸಲ್ಲಿಸಿತ್ತು. ಆದರೆ ಅದನ್ನು ಗಣನೆಗೆ ತರದೇ ಪ್ರತಿ ಹೆಚ್.ಪಿ.ಗೆ 300ರೂ. ಏರಿಸುವುದು ಹಾಗೂ ವಿನಾಕಾರಣ ರೈತರಿಗೆ ತೊಂದರೆ ಕೊಡುವುದನ್ನು ಇದೇ ಸಂದರ್ಭದಲ್ಲಿ ವಿರೋಧಿಸಿದರು.

ನಿವೇಶನಕ್ಕಾಗಿ ರೈತರ ಧರಣಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸಮಂದೂರು, ಕರ್ಪೂರು ಗ್ರಾಮ ಪಂಚಾಯಿತಿ ವ್ಯಾಪಿಯ ಹಳ್ಳಿಗಳು ಸೌಲಭ್ಯವಂಚಿತವಾಗಿದ್ದು ಕೂಡಲೇ ಸರ್ಕಾರ ಸಮಸ್ಯೆ ಪರಿಹರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಡಿಸೆಂಬರ್ 9 ರಂದು ತಾಲೂಕು ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ನಿವೇಶನ ರಹಿತರಿಗೆ ನಿವೇಶನ ನೀಡಿ ಹಕ್ಕು ಪತ್ರ ನೀಡಬೇಕು. ಎಲ್ಲಾ ಹಳ್ಳಿಗಳಿಗೆ ಶೌಚಾಲಯ ಒದಗಿಸಬೇಕು, ರಸ್ತೆ ದುರಸ್ಥಿ ನಡೆಸಬೇಕು, ಭಾಗ್ಯಜ್ಯೋತಿ ಯೋಜನೆಯಲ್ಲಿ ಬಡವರಿಗೆ ವಿದ್ಯುತ್ ದೀಪ, ಒಳ ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಆಶ್ರಯ ಯೋಜನೆ ಮತ್ತೆ ಜಾರಿ ಮತ್ತು ಗುಂಡು ತೋಪು, ಗೋಮಾಳ, ಕರೆಯಂಗಳದ ಭೂಮಿ ಕಬಳಿಕೆಯಾಗದಂತೆ ತಡೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಇದೇ ಸಂದರ್ಭದಲ್ಲಿ ಒತ್ತಾಯಿಸಿತು.

ಸಂಸತ್ತಿನಲ್ಲಿ ವಾಜಪೇಯಿ ಮಾತಿನ ಕಸರತ್ತು ತೋರಿದ್ದೇನು?

ರಾಮಮಂದಿರ ಬಿಜೆಪಿಯ ಬಚ್ಚಿಟ್ಟ ಅಜೆಂಡಾದಲ್ಲಿ ಇನ್ನೂ ಇದೆ!!

ಬಿಜೆಪಿಯ ಮೂವರು ಪ್ರಮುಖ ಮುಖಂಡರು - ಒಬ್ಬ ಮುಖ್ಯಮಂತ್ರಿ, ಒಬ್ಬಾಕೆ ಹಾಲೀ ಕೇಂದ್ರ ಮಂತ್ರಿ ಮತ್ತು ಇನ್ನೊಬ್ಬಾಕೆ ಮಾಜಿ ಕೇಂದ್ರ ಮಂತ್ರಿ ಮತ್ತು ಮಾಜಿ ಮುಖ್ಯಮಂತ್ರಿ. ಅಯೋಧ್ಯೆಯ ವಿವಾದಿತ ಪ್ರದೇಶದಲ್ಲಿ ರಾಮಮಂದಿರ ಕಟ್ಟಿಯೇ ತೀರುತ್ತೇವೆ ಎಂಬ ಹೇಳಿಕೆಯನ್ನು ಇಪ್ಪತ್ತನಾಲ್ಕು ಗಂಟೆಗಳ ಅಂತರದಲ್ಲಿ ನೀಡಿರುವುದು ಕೇವಲ ಆಕಸ್ಮಿಕವಲ್ಲ.

ಉತ್ತರ ಪ್ರದೇಶದ ಹಳೆಯ ಉಚ್ಚಾಟಿತ ಬಿಜೆಪಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ತಾನು ಅಯೋಧ್ಯಾ ಪ್ರಶ್ನೆ ಕೈಬಿಟ್ಟಿದ್ದೇನೆ ಎಂದು ಸಾರಿದ ಎರಡು ದಿನಗಳ ನಂತರ ಡಿಸೆಂಬರ್ 12 ರಂದು ಅಯೋಧ್ಯೆಗೆ ಭಾರಿ ಅಬ್ಬರದ ನಡುವೆ ಭೇಟಿ ನೀಡಿದರು. ಕಲ್ಯಾಣ್ ಸಿಂಗ್ ಸರ್ಕಾರದ ಶಾಮೀಲಿನಿಂದ ಇರಿಸಿದ್ದ 'ರಾಮ್‌ಲಲ್ಲಾ' ತಾತ್ಕಾಲಿಕ ಮಂದಿರದಲ್ಲಿ ಅಯೋಧ್ಯೆಯ ಇತರ ಮಂದಿರಗಳಲ್ಲೂ ಪೂಜೆ ಸಲ್ಲಿಸಿ ರಾಮನಾಮದ ಶಾಲು ಹೊದ್ದ ಜನಜಂಗುಳಿಯ ನಡುವೆ ಸಾರಿದರು "ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟುವ ಕೆಲಸ ಎನ್.ಡಿ.ಎ. ದ ಅಜೆಂಡಾದಲ್ಲಿ ಇರಲ್ಲಿಕ್ಕಿಲ್ಲ. ಆದರೆ ಬಿಜೆಪಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅದು ನಮ್ಮ ಅಜೆಂಡಾದಲ್ಲಿ ಖಂಡಿತಾ ಇದೆ" ಇಷ್ಟಕ್ಕೇ ಅವರು ನಿಲ್ಲಲಿಲ್ಲ ಕಾಶಿ, ಮಥುರಾಗಳನ್ನೂ ವಿಮೋಚನೆಗೊಳಿಸೋಣ ಎಂದು ತಮ್ಮ ಸುತ್ತ ನೆರೆದಿದ್ದ ಕಾವಿ ಜಂಗುಲಿಗೆ ಕರೆ ನೀಡಿದರು. ಅದೇ ದಿನ ಕೇಂದ್ರ ಮಂತ್ರಿ ಉಮಾ ಭಾರತಿ ಟಿ.ವಿ. ಕಾರ್ಯಕ್ರಮವೊಂದರಲ್ಲಿ ಹಾಗೂ ಮಾಜಿ ಕೇಂದ್ರ ಮಂತ್ರಿ ದಿಲ್ಲಿಯ ಮಾಜಿ ಮುಖ್ಯಮಂತ್ರಿ ಸುಷ್ಮಾ ಸ್ವರಾಜ್ ಇಂತಹುದೇ ಹೇಳಿಕೆಗಳನ್ನು ನೀಡಿದರು. "ಬಿಜೆಪಿ ರಾಮಮಂದಿರ ಸೇರಿದಂತೆ ತನ್ನ ಯಾವುದೇ ಮೂಲ ಕಾರ್ಯಕ್ರಮಗಳನ್ನು ಕೈಬಿಟ್ಟಿಲ್ಲ" ಎಂದು ಸುಷ್ಮಾ ಸ್ವರಾಜ್ ಭೋಪಾಲದಲ್ಲಿ ಹೇಳಿಕೆ ನೀಡಿದರು.

ಸಹಜವಾಗಿ ಸಂಸತ್ತಿನಲ್ಲಿ ಈ ಬಗ್ಗೆ ಕೋಲಾಹಲವೆದ್ದಿತು. ಹೊರಗೆ ವಿವಿಧ ಬಿಜೆಪಿ ವಕ್ತಾರರು ಕಸರತ್ತು ನಡೆಸಿದಂತೆ ಸಂಸತ್ತಿನಲ್ಲಿ ಪ್ರಧಾನಮಂತ್ರಿಗಳೇ ಮಾತಿನ ಕಸರತ್ತು ನಡೆಸಿದರು. ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಳ್ಳಬೇಕು ತಾನೇ? ಇಂತಹ ಹೇಳಿಕೆ ನೀಡರಲಿಕ್ಕಿಲ್ಲ, ಇಂತಹ ಹೇಳಿಕೆಗಳು ಸರಿಯಲ್ಲ ಎಂದೆಲ್ಲಾ ಹೇಳಿ ಕೊನೆಗೆ 'ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ಇಂತಹ ಹೇಳಿಕೆಯನ್ನು ಅವರು ನೀಡಿಯೇ ಇಲ್ಲ' ಎಂಬ ಶುದ್ಧ ಸುಳ್ಳಿಗೆ ಮೊರೆ ಹೋಗಲೂ ಹಿಂಜರಿಯಲಿಲ್ಲ. ಉತ್ತರ ಪ್ರದೇಶದಜ ಮುಖ್ಯಮಂತ್ರಿಯ ಆ ಹೇಲಿಕೆ ವೀಡಿಯೋ ಟೇಪಿನಲ್ಲಿಮುದ್ರಿತವಾಗಿದೆ. ಇಡೀ ದೇಶ ಅದನ್ನು ಕಂಡಿದೆ ಎಂಬ ಸತ್ಯಾಂಗದ ಪರಿವೆಯೂ ಅವರಿಗಿದ್ದಂತಿರಲಿಲ್ಲ. ಸುಳನ್ನು ಸಾವಿರ ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎಂದು ಬಲವಾಗಿ ನಂಬಿದ ಪಡೆಗಳಿಗೆ ಸೇರಿರುವವರು ತಾನೇ?

ಆದರೆ ಈ ಬಾರಿ ಎನ್.ಡಿ.ಎ. ಯ ಅವರ ಕೆಲವು ಮಿತ್ರರೂ ಸುಮ್ಮನೆ ಕೂರಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹೇಳಿಕೆಗಳು ಅಯೋಧ್ಯೆ ಮತ್ತಿತರ ವಿವಾದಾತ್ಮಕ ವಿಷಯಗಳ ಬಗ್ಗೆ 'ಗೊಂದಲ' ಹುಟ್ಟಿಸಿವೆ ಎಂದು ಅವರೂ ಪ್ರತಿಪಕ್ಷಗಳ ಜತೆ ಈ ಹೇಳಿಕೆಯನ್ನು ಟೀಕಿಸುವುದರಲ್ಲಿ ಜೊತೆಗೂಡಿದರು. 'ಈ ವಿವಾದಾತ್ಮಕ ವಿಷಯಗಳನ್ನು ಎನ್.ಡಿ.ಎ ಕಾರ್ಯಕ್ರಮದಿಂದ ಹೊರಗಿಟ್ಟಿದೆ, ರಾಷ್ಟ್ರಪತಿಗಳೂ ತಮ್ಮ ಭಾಷಣದಲ್ಲಿ ಆ ಬಗ್ಗೆ ಪ್ರಸ್ತಾಪವನ್ನೇ ಮಾಡಲಿಲ್ಲ. ಈಗ ಪ್ರಧಾನ ಮಂತ್ರಿಗಳು ಸ್ಪಷ್ಟನೆ ನೀಡಬೇಕು' ಎಂದು ತೆಲುಗು ದೇಶಂ ನ ಎರ್ರಂ ನಾಯ್ಡು ಹೇಳಿದರೆ ಇಂತಹ ವಿಭಜನಕಾರೀ ಪ್ರಶ್ನೆಗಳನ್ನು ಹೊರಗಿಡುವುದಾಗಿ ಮಾತು ಕೊಡಲಾಗಿದೆ, ಪ್ರದಾನಮಂತ್ರಿಗಳು ಇಂತಹ ಹೇಳಿಕೆಗಳು ಮತ್ತೆ ಬರುವುದಿಲ್ಲ ಎಂದು ಸದನಕ್ಕೆ ಆಶ್ವಾಸನೆ ಕೊಡಬೇಕು ಎಂದು ತೃಣಮೂಲ ಕಾಂಗ್ರೆಸ್ಸಿನ ಸಂದೀಪ್ ಬಂದೋಪಾಧ್ಯಾಯ ಒತ್ತಾಯಿಸಿದರು. ಇನ್ನೊಂದು ಮಿತ್ರಪಕ್ಷ ಜನತಾದಳ(ಸಂಯುಕ್ತ)ದ ಡಿ.ಪಿ.ಯಾದವ್ ಇಂತಹ ವಿಭಜನಕಾರೀ ಪ್ರಶ್ನೆಗಳಿಗೂ ತಮ್ಮ ಪಕ್ಷಕ್ಕೂ ಸಂಬಂಧವಿಲ್ಲ, ಪ್ರಧಾನಮಂತ್ರಿಗಳು ಸ್ಪಷ್ಟನೆ ನೀಡಬೇಕು ಎಂದರು. ಡಿ.ಎಂ.ಕೆ. ಮಾತ್ರ ಲೋಕಸಭೆಯಲ್ಲಿ ಇಂತಹ ಸ್ಪಷ್ಟನೆ ಕೇಳುವಲ್ಲಿ ತನ್ನ ಮಿತ್ರರ ಜತೆಗೂಡೆ ತನ್ನ ಅಪ್ರಮಾಣಿಕತೆಯನ್ನು ಬಯಲು ಮಾಡಿಕೊಂಡಿತು. ನಂತರ ರಾಜ್ಯಸಭೆಯಲ್ಲಿ ಡಿ.ಎಂ.ಕೆ. ಸದಸ್ಯ ವಿರುಂಬಿಯವರು ತಮ್ಮ ಪಕ್ಷ ತಮಿಳುನಾಡಿನಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಅಲ್ಪಸಂಖ್ಯಾತರು ಮತ್ತು ಧರ್ಮನಿರಪೇಕ್ಷತೆಯ ರಕ್ಷಣೆಗೆ ಬದ್ಧವಾಗಿದೆ ಎಂದು ಹೇಳಬೇಕಾಗಿ ಬಂತು.


ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರುವುದಿಲ್ಲ ಎಂಬ ಬಗ್ಗೆ ಯಾವುದೇ ಆಶ್ವಾಸನೆಯನ್ನು ಪ್ರಧಾನಮಂತ್ರಿಗಳು ತಮ್ಮ 'ಸ್ಪಷ್ಟನೆ' ಯೆಂಬ ಕಸರತ್ತಿನಲ್ಲೂ ನೀಡಲಿಲ್ಲ. ಎನ್.ಡಿ.ಎ. ಹಾಗೆ ಮಾಡುವುದಿಲ್ಲ ಎಂದು ಹೇಳಿದರಷ್ಟೆ. ಆದರೆ ಆರ್.ಎಸ್.ಎಸ್. ಮತ್ತು ಅದರ ಅಂಗ ಸಂಘಟನೆಗಳು ಈ ಪ್ರಶ್ನೆ ಎತ್ತಿದಾಗ ಸರಕಾರದಲ್ಲಿ ಉಳಿದುಕೊಂಡು, ಅದರ ಪ್ರಧಾನಿಯಾಗಿ ತಾನು ಮತ್ತು ತನ್ನ ಸರಕಾರದ ಕೃಪಾಪೋಷಣೆ ಅವರಿಗೆ ಸಿಗುತ್ತದೆ ಎಂಬ ಸೂಚನೆಯನ್ನು ಅವರು ನೀಡಿದರು. ಬಾಬ್ರಿ ಮಸೀದಿ ಧ್ವಂಸಕ್ಕೆ ಅವಕಾಶ ಕೊಡುವುದಿಲ್ಲ ಎಂದು ರಾಷ್ಟ್ರೀಯ ಸಮಗ್ರತಾ ಮಂಡಳಿಗೆ, ದೇಶದ ಅತ್ಯುಚ್ಚ ನ್ಯಾಯಾಲಯಕ್ಕೆ ವಚನ ಕೊಟ್ಟು, ಅದನ್ನು ಯಾವಾದೇ ಮುಲಾಜಿಲ್ಲದೆ ಮುರಿದ ಪಕ್ಷದ ಮುಖಂಡರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ.

ಡಿಸೆಂಬರ್ 22 ರಂದು ಬಾಬ್ರಿ ಮಸೀದಿ ಧ್ವಂಸಕ್ಕೆ ಸಂಬಂಧಪಟ್ಟಂತೆ ಅಡ್ವಾಣಿ, ಜೋಷಿ ಮತ್ತು ಉಮಾಭಾರತಿ ಸೇರಿದಂತೆ ಸುಮಾರು 50 ಜನರ ಮೇಲೆ ಆಪಾದನೆಗಳನ್ನು ರೂಪಿಸಲು ಪ್ರಶ್ನೆ ಸಿಬಿಐ ವಿಶೇಷ ನ್ಯಾಯಾಲಯದ ಲಕ್ನೌ ಪೀಠದ ಮುಂದೆ ಬರಲಿದ್ದು ಮೊದಲು ಭಾವೋನ್ಮಾದ ಹರಡಿಸಲು ಸಂಘ ಪರಿವಾರ ನಡೆಸಿರುವ ತಂತ್ರ ಇದು ಎಂಬುದು ಬೆಳಕಿನಷ್ಟು ಸ್ಪಷ್ಟ.

ಸಮರ್ಥ ನೇತಾರನೆನಿಸಿಕೊಳ್ಳ ಬಯಸುವ ವಾಜಪೇಯಿಯವರು ಇಂತಹ ಸ್ಫೋಟಕ ವಿಷಯಗಳನ್ನು ಎದುರಿಸುವಲ್ಲಿ ದೃಢತೆಯನ್ನು ತೋರುವ ಬದಲು, ತನ್ನ ಸಹಯೋಗಿಗಳ ಉದ್ರೇಕಕಾರಿ ಹೇಳಿಕೆಗಳಿಂದ ತನ್ನನ್ನು ದೂರವಿರಿಸಿಕೊಳ್ಳಲು ಪ್ರಯತ್ನಿಸಿದರಷ್ಟೆ. ಹಾವೂ ಸಾಯಬಾರದು, ಕೋಲು ಮುರಿಯಬಾರದು, ಅವರಿಗೆ ಬೇಕಾದ್ದು ಅಷ್ಟೆ. ಇದು 'ಸಮರ್ಥ' ನಾಯಕರ ಲಕ್ಷಣವಂತೂ ಅಲ್ಲ.

ಇದು ನಿಜವಾದ ವಾಸ್ತವತೆಯನ್ನು ಬಿಂಬಿಸುವ ಸಂಗತಿ ಕೂಡಾ. ಸಾರ್ವಜನಿಕವಾಗಿ ಏನೇ ನಟನೆ ಮಾಡಿದರೂ ಆರ್.ಎಸ್.ಎಸ್. ನ ರಾಜಕೀಯ ಅಂಗವಷ್ಟೇ ಆಗಿರುವ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರಲು ಕಟಿಬದ್ಧವಾಗಿದೆ. ಇದು ಭಾರತದ ಗಣತಂತ್ರ ಸ್ವರೂಪಕ್ಕೆ ಹಾಗೂ ಧರ್ಮನಿರಪೇಕ್ಷ ಪ್ರಜಾಪ್ರಭುತ್ವಕ್ಕೆ ಎಂತಹ ಘೋರ ವಿಪತ್ತು ತರುತ್ತದೆ ಎಂಬುದು ಸ್ವಯಂವೇದ್ಯ. ಎಲ್ಲಾ ದೇಶಪ್ರೇಮಿ ಭಾರತೀಯರು ಈ ವಿಪತ್ತನ್ನು ಅಂತು ಕೋಮುವಾದಿ ಅಜೆಂಡಾವನ್ನು ಜಾರಿಗೆ ತರುವ ಪ್ರಯತ್ನವನ್ನು ವಿಫಲಗೊಳಿಸಬೇಕು.

ವಾಜಪೇಯಿಯವರು ತಗೊಳ್ಳಬೇಕಾಗಿದ್ದ ತರಗತಿ ಎನ್‌ಡಿಎ ನ ಅಜೆಂಡಾದ ಕುರಿತು ಆದರೆ ಬೋರ್ಡಿನ ಮೇಲೆ ಜೈ ಶ್ರೀರಾಮ್, ಜೈ ಶ್ರೀರಾಮ್, ಜೈ ಶ್ರೀರಾಮ್ ಘೋಷಣೆಗಳು. -ದಿ ಹಿಂದು ನಲ್ಲಿ ಸುರೇಂದ್ರನ್ ವ್ಯಂಗ್ಯ



ಪ್ರತಿಗಾಮಿ ನೀತಿಗಳ ವಿರುದ್ಧ

ರಾಷ್ಟ್ರೀಯ ಸಮಾವೇಶ: ಜನವರಿ 20

ಬಿಜೆಪಿ ನೇತೃತ್ವದ ಸರ್ಕಾರ ಜನಸಾಮಾನ್ಯರ ಬದುಕಿನ ಮೇಲೆ ದೊಡ್ಡ ಧಾಳಿಗಳನ್ನು ಹರಿಯಬಿಡುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ(ಎನ್.ಪಿ.ಎಂ.ಓ) ಒಂದು ರಾಷ್ಟ್ರವ್ಯಾಪಿ ಹೋರಾಟಕ್ಕೆ ಸಿದ್ಧರಾಗಿ ಎಂದು ಕಾರ್ಮಿಕರು, ರೈತರು, ವಿದ್ಯಾರ್ಥಿ-ಯುವಜನ ಹಾಗೂ ಮಹಿಳೆಯರಿಗೆ ಕರೆ ನೀಡಿದೆ. ಏಳು ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಕೈಗಾರಿಕಾ ಮತ್ತು ನೌಕರರ ಒಕ್ಕೂಟಗಳು, ರೈತರ, ಕೃಷಿ ಕಾರ್ಮಿಕರ, ಮಹಿಳೆಯರ, ವಿದ್ಯಾಥಿ4ಗಳ, ಯುವಜನರ ಸಾಮೂಹಿಕ ಸಂಘಟನೆಗಳು ಸೇರಿ ರಚಿಸಿಕೊಂಡಿರುವ ಈ ವೇದಿಕೆ ಡಿಸೆಂಬರ್ 14 ರಂದು ದಿಲ್ಲಿಯಲ್ಲಿ ಸಭೆ ಸೇರಿ ಅಮೂಲಾಗ್ರ ಚರ್ಚೆ ನಡೆಸಿ ಒಂದು ಹೋರಾಟದ ಕಾರ್ಯಕ್ರಮವನ್ನು ರೂಪಿಸಿದೆ. ಅದು ಹೀಗಿದೆ-

- ಜನವರಿ 20, 2000 ದಂದು ನವದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶ. ದೇಶದೆಲ್ಲೆಡೆಯಿಂದ ವಿವಿಧ ಸಾಮೂಹಿಕ ಸಂಘಟನೆಗಳಿಂದ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.
- ಫೆಬ್ರವರಿ ತಿಂಗಳಿಂದ ರಾಜ್ಯಮಟ್ಟದಲ್ಲಿ ಎನ್.ಪಿ.ಎನ್.ಓ. ಸಮಾವೇಶಗಳು.
- ಸಂಸತ್ತಿನ ಮುಂದೆ ಸಾಮೂಹಿಕ ಸಂಘಟನೆಗಳ ಬೃಹತ್ ರ್‍ಯಾಲಿ - ಬಜೆಟ್ ಅಧಿವೇಶನದ ಮೊದಲ ಘಟ್ಟದಲ್ಲಿ ದಿನಾಂಕವನ್ನು ಮುಂದೆ ಘೋಷಿಸಲಾಗುವುದು
- ಬಜೆಟ್ ಅಧಿವೇಶನದ ಎರಡನೇ ಘಟ್ಟದಲ್ಲಿ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ, ಅದರ ಮೊದಲು ದೇಶವ್ಯಾಪಿ ಸತ್ಯಾಗ್ರಹ, ಪಾದಯಾತ್ರೆಗಳು, ಧರಣೆಗಳು
- ಜನವರಿ 6ರಂದು ಮತ್ತೆ ಸಭೆ ಸೇರಿ ಈ ಬಗ್ಗೆ ವಿವರಗಳನ್ನು ನಿರ್ಧರಿಸಲಾಗುವುದು ಎಂದು ಎನ್.ಪಿ.ಎಂ.ಓ. ವಕ್ತಾರರು ತಿಳಿಸಿದ್ದಾರೆ.

ಎಲ್ಲಾ ವಿಭಾಗಗಳ ದೇಶಪ್ರೇಮಿ ಮತ್ತು ಪ್ರಜಾಪ್ರಭುತ್ವವಾದಿ ಜನಗಳು ಈ ಕಾರ್ಯಕ್ರಮಗಳಲ್ಲಿ ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ ಈ ಸರಕಾರದ ದೇಶ-ವಿರೋಧಿ ಧೋರಣೆಗಳಿಗೆ ತಡೆಯೊಡ್ಡಬೇಕು ಹಾಗೂ ದೇಶದ ಆರ್ಥಿಕವನ್ನು ಮತ್ತು ಜನಗಳನ್ನು ವಿನಾಶದಿಂದ ಉಳಿಸಬೇಕು ಎಂದು ಈ ಸಭೆ ಮನವಿ ಮಾಡಿದೆ.

(ಐ.ಎನ್.ಎಸ್)

ತಿಮಿಂಗಲಗಳ ಬಾಯಿಗೆ ರಾಷ್ಟ್ರೀಕೃತ ಬ್ಯಾ



ಡಿಸೆಂಬರ್ 5, 1999ರ ಐಕ್ಯರಂಗ ಪತ್ರಿಕೆಯು ಬ್ಯಾಂಕ್ ನೌಕರರ ಚಳುವಳಿಯತ್ತ ಹಿನ್ನೋಟ ಬೀರಿದ್ದು ರಾಷ್ಟ್ರೀಕೃತ ಬ್ಯಾಂಕುಗಳನ್ನು ಉಳಿಸಿಕೊಳ್ಳುವ ದೇಶ ಪ್ರೇಮಿ ಹೋರಾಟದಲ್ಲಿ ಬ್ಯಾಂಕ್ ನೌಕರರು ಭಾಗವಹಿಸಬೇಕೆಂದು ಕರೆನೀಡಲಾಗಿತ್ತು.

ಅದರ ಬೆನ್ನ ಹಿಂದೆಯೇ ಇನ್ನೊಂದು ಆಘಾತಕರ ಸುದ್ದಿ 16.12.99ರ ಪತ್ರಿಕೆಗಳಲ್ಲಿ ವರದಿಯಾಗಿದೆ. ವರ್ಮಾ ಸಮಿತಿ ಸೂಚಿಸಿದ ಮೂರು ಬ್ಯಾಂಕುಗಳನ್ನು ಮುಚ್ಚಬೇಕು. ಹಾಗೂ ಲಾಭದಾಯಕವಾದ 4 ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಬೇಕೆಂದು ಕೈಗಾರಿಕಾ ಒಕ್ಕೂಟ (ಸಿ.ಐ.ಐ)ವು ರಚಿಸಿದ 'ಟಾಸ್ಕ್ ಫೋರ್ಸ್'ನ ಮುಖ್ಯಸ್ಥ ಹಾಗೂ ಐ.ಸಿ.ಐಸಿ.ಐನ ವ್ಯವಸ್ಥಾಪಕ ನಿರ್ದೇಶಕರಾದ ಕೆ.ವಿ.ಕಾಮತ್ ನೀಡಿದ ವರದಿಯಲ್ಲಿ ತಿಳಿಸಲಾಗಿದೆ.

ಆಶ್ಚರ್ಯದ ಸಂಗತಿಯೆಂದರೆ ನೌಕರ ವಿರೋಧಿ ವರದಿ ನೀಡಿದ ವರ್ಮಾ ಸಮಿತಿಯನ್ನು ಕೇಂದ್ರ ಸರಕಾರವೇ ರಚಿಸಿತ್ತು. ಆದರ ನಂತರವೂ ಕೈಗಾರಿಕೆಗಳ ಒಕ್ಕೂಟ ನೀಡಿದವರದಿಯನ್ನು ಪಡೆದು ಅದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವುದರ ಮೂಲಕ ಹಣಕಾಸು ಸಚಿವ ಯಶವಂತ್ ಸಿನ್ಹಾ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಜನರ ಮೇಲೆ, ನೌಕರರ ಮೇಲೆ ಒತ್ತಡ ತರುವ ಕುತಂತ್ರ ಮಾಡುತ್ತಿದೆ. ಹಿಂದೆ ಮಾಲಿಕರು ಒತ್ತಾಯಿಸುತ್ತಿದ್ದಾರೆ. ಈ ಕೆಳಗಿನ ಕೋಷ್ಟಕವು ಎಂತಹ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಲು, ಕೈಗಾರಿಕೋದ್ಯಮಿಗಳು ಹಾಗೂ ಕೇದ್ರ ಸರಕಾರ ಬಯಸುತ್ತಿದೆ ಎಂದು ಸ್ಪಷ್ಟವಾಗುತ್ತದೆ.

ಕೋಷ್ಟಕ-1ರಿಂದ ಒಂದು ವಿಷಯ ಸ್ಪಷ್ಟ. ಲಾಭಕಡಿಮೆ ಇರುವ ಅಥವಾ ನಷ್ಟದಲ್ಲಿರುವ ಬ್ಯಾಂಕುಗಳು ಈ ದೇಶದ ತಿಮಿಂಗಲಗಳಿಗೆ ಬೇಕಾಗಿಲ್ಲ. ಲಾಭ ಬರುವ ಬ್ಯಾಂಕುಗಳನ್ನು ತಿಂದು ತೇಗುವ ದುರಾಲೋಚನೆ, ಈ ಕೈಗಾರಿಕೋದ್ಯಮಗಲಿಗೆ ಈ ಹೇಳಿಕೆಯ ಹಿಂದಿರುವ ಇನ್ನೊಂದು ಪ್ರಮುಖವಾದ ಅಂಶವೆಂದರೆ 'ಮ್ಯಾಡ ಕಿನ್ಸೆ' (Mckinsey) ಎನ್ನುವ ವಿದೇಶಿ ಕನ್ಸಲ್ಟೆಂಟ್ ಕಂಪೆನಿಯು ಆರಂಬಿಸಿದ, ಇಂಡಿಯ ವಿಶನ್ 2000ದ ಸಲಹಾ ಸಮಿತಿಯಲ್ಲಿ ಕೆ.ವಿ. ಕಾಮತ್ ಕೂಡ ಪ್ರಮುಖ ಸದಸ್ಯರು. ಇದ್ದರಿಂದ ಕಾಮತ್ ಅವರು ಹಣಕಾಸು ಸಚಿವರಿಗೆ ನೀಡಿದ ವರದಿಯ ಹಿಂದೆ ನಮ್ಮ ದೇಶದ ಕೈಗಾರಿಕೋದ್ಯಮಿಗಳು ಮಾತ್ರವಲ್ಲದೆ ವಿದೇಶಿ ತಿಮಿಂಗಿಲಗಳು ಸೇರಿವೆ. ಅದಕ್ಕಾಗಿಯೇ ನಷ್ಟಧಲ್ಲಿರುವ 3 ಬ್ಯಾಂಕುಗಳನ್ನು ಮುಚ್ಚುವ ಹಾಗೂ ಲಾಭದಲ್ಲಿರುವ 4 ಬ್ಯಾಂಕುಗಳನ್ನು ಖಾಸಗಿಯವರಿಗೆ ತೆರೆದಿಡುವ ಸಲಹೆಯನ್ನು ನೀಡಿದೆ.

ಖಾಸಗೀಕರಣದಲ್ಲಿ ಅತೀ ವಿಶ್ವಾಸ ತೋರಿಸುವ,

ಕೋಷ್ಟಕ - 1

(ಲಾಭ ಕೋಟಿ ರೂ.ಗಳಲ್ಲಿ)

ರಾಷ್ಟ್ರೀಕೃತ ಬ್ಯಾಂಕುಗಳು	1991-92	1994-95	1998-99
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	175.05	715.00	1028.00
ಬ್ಯಾಂಕ್ ಆಫ್ ಬರೋಡ	94.50	176-00	421-00
ಕಾರ್ಪೊರೇಶನ್ ಬ್ಯಾಂಕ್	5.20	73-00	192-00
ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್	26-78	113-00	230-00
ಯುಕೋಬ್ಯಾಂಕ್	20-29	84-00	68-00
ಯುನೈಟೆಡ್ ಬ್ಯಾಂಕ್	6.68	-197-00	15-00
ಇಂಡಿಯನ್ ಬ್ಯಾಂಕ್	**36.50**	**14-00**	**302-00**

ನರಸಿಂಹಂ ಸಮಿತಿ ಹಾಗೂ ವರ್ಮಾ ಸಮಿತಿಗಳ ಶಿಫಾರಸ್ಸುಗಳನ್ನು ಕೇಂದ್ರ ಸರಕಾರ ಅಂಗೀಕರಿಸಿದಾಗ ಇದು ಖಾಸಗೀಕರಣ ಮಾಡುವ ಹುನ್ನಾರ ಎಂಬುದು ಬಯಲಾಗಿತ್ತು. ಬ್ಯಾಂಕ್ ನೌಕರರ ಸಂಘಟನೆಗಳು ಆದರಲ್ಲೂ ಪ್ರಮುಖವಾಗಿ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನ್ ಆಫ್ ಇಂಡಿಯಾ(ಬೆಫಿ) ಇದನ್ನು ತೀವ್ರವಾಗಿ ವಿರೋಧಿಸಿತ್ತು.

ಈಗ ಸಿ.ಐ.ಐ. ವತಿಯಿಂದ ನೀಡಿದ ವರದಿ ಕಣ್ಣಿಗೆ ರಾಚುವಂತೆ, ನೌಕರ ಸಂಘಟನೆಗಳ ಹೇಳಿಕೆಗಳನ್ನು ಪುಷ್ಟೀಕರಿಸಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅತ್ಯಂತ ಲಾಭದಾಯಕವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಕಾರ್ಪೊರೇಷನ್ ಬ್ಯಾಂಕ್ ಮತ್ತು ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಇವುಗಳನ್ನು ಖಾಸಗೀಕರಣ ಗೊಳಿಸಬೇಕೆಂದು ಕೈಗಾರಿಕೆಗಳ 2ನೇ generation ಸುಧಾರಣೆಯನ್ನು ಶೀಘ್ರ ಜಾರಿಗೊಳಿಸುವುದಾಗಿ ಭರವಸೆ ನೀಡಿರುವ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಈ ವರದಿಯನ್ನು ಕೂಡಲೇ ಜಾರಿ ಮಾಡಿದಲ್ಲಿ ಆಶ್ಚರ್ಯವಿಲ್ಲ. ದುರದೃಷ್ಟದ ಸಂಗತಿಯೆಂದರೆ ಬ್ಯಾಂಕುಗಳ ರಾಷ್ಟ್ರೀಕರಣವನ್ನು ಜಾರಿಗೊಳಿಸಿದ ಕಾಂಗ್ರೆಸ್, ತನ್ನದೇ ಸದಸ್ಯರ ವಿರೋಧದ ನಡುವೆಯೂ ಬಿಜೆಪಿಯ ಆರ್ಥಿಕ ನೀತಿಯನ್ನು ಬೆಂಬಲಿಸುತ್ತಲಿದೆ (ಕಾಂಗ್ರೆಸ್ಸಿನ ಅಂದಿನ ಪ್ರಧಾನ ಮಂತ್ರಿ ಹೇಳಿದ ಕುರಿತು ಬ್ಯಾಂಕ್ ರಾಷ್ಟ್ರೀಕರಣದ ಬಗ್ಗೆ ಇನ್ನೊಂದು ಲೇಖನ ಇದೇ ಸಂಚಿಕೆಯಲ್ಲಿದೆ).

ಬ್ಯಾಂಕ್ ರಾಷ್ಟ್ರೀಕರಣದ ಹಿನ್ನೆಲೆ : ಕಾಂಗ್ರೆಸ್ಸಿನ ಒಳಜಗಳ, 9 ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆಭಾರೀ ಸೋಲು, ನೌಕರ ಸಂಘಟನೆಗಳ ಒತ್ತಡ ಇತ್ಯಾದಿ ಅಂಶಗಳು ಬ್ಯಾಂಕ್ ರಾಷ್ಟ್ರೀಕರಣಕ್ಕೆ ಕಾರಣವಾದರೂ ಇನ್ನೊಂದು ಪ್ರಮುಖ ಅಂಶವು ಇದರಲ್ಲಿ ಒಳಗೊಂಡಿದೆ.

ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಲು ಅವಕಾಶಗಳನ್ನು ಕಂಡುಹಿಡಿಯಲು ಸರಕಾರ ವಿಜ್ಞಾನಿಗಳಿಗೆ ಸೂಚಿಸಿತ್ತು. ಉತ್ತಮ ತಳಿಯನ್ನೇನೋ ನಮ್ಮ ವಿಜ್ಞಾನಿಗಳು ಕಂಡು ಹಿಡಿದರು. ಆದರೆ ಆ ತಳಿಯನ್ನು ಭೂಮಿಯಲ್ಲಿ ಬಿತ್ತಿ ಬೆಳೆತೆಗೆಯುವವರು ಯಾರು? ರೈತರು, ಆದರೆ ಅವರ ಕೈಯಲ್ಲಿ ಹಣ ಎಲ್ಲಿದೆ.? ಅದಕ್ಕೊಂದು ರೂಪುರೇಷೆ ಬೇಕಾಗಿತ್ತು. ಇಲ್ಲವಾದಲ್ಲಿ ದೇಶ ಸ್ವಾವಲಂಬನೆಯನ್ನು ಅಮೇರಿಕಕ್ಕೆ ಪಿ.ಎಲ್. 480ರ ಅಡಿಯಲ್ಲಿ ಒತ್ತೆಇಡಬೇಕಾಗಿತ್ತು. ಸಮಗ್ರ ಭೂಸುದಾರಣೆ ಹಾಗೂ ಮಧ್ಯಮ ಮತ್ತು ಬಡರೈತರಿಗೆ ಸಾಲದ ಅವಕಾಶವನ್ನು ಕೃಷಿ ತಂತ್ರಜ್ಞರು ಸೂಚಿಸಿದರು. ಭೂಸುಧಾರಣೆ ಮಾಡಿ ದೊಡ್ಡ ಜಮೀನ್ದಾರರ ವಿರೋಧ ಕಟ್ಟಿಕೊಳ್ಳಲು ಕಾಂಗ್ರೆಸ್ ಪಕ್ಷ ತಯಾರಿರಲಿಲ್ಲ. ಖಾಸಗಿ ಬ್ಯಾಂಕುಗಳಿಗೆ ಎಷ್ಟೇ ಒತ್ತಾಯಿಸಿದರೂ ರೈತರಿಗೆ ಸಾಲ ನೀಡಲು ಮುಂದೆ ಬರುತ್ತಿರಲಿಲ್ಲ. ಆದ್ದರಿಂದ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ, ಆದ್ಯತಾವಲಯಕ್ಕೆ ಶೇ 40ರಷ್ಟು ಸಾಲ ಆದರಲ್ಲೂ ಕೃಷಿ ಕ್ಷೇತ್ರಕ್ಕೆ ಕಡ್ಡಾಯವಾಗಿ ಶೇ 18ರಷ್ಟು ಕಡಿಮೆ ಬಡ್ಡಿಯಲ್ಲಿ ಸಾಲ ನೀಡಲು ಕಾನೂನು ತಂದಿತು. ಅದರಿಂದಾಗಿಯೇ ಕೃಷಿ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾದಿಸಲು ಸಾಧ್ಯವಾಯಿತು ಎಂಬುದನ್ನು ಗಮನಿಸಬೇಕು. ಮಾರ್ಚ್ 1999ರ ವೇಳೆಗೆ ಬ್ಯಾಂಕುಗಳ ಒಟ್ಟು ಸಾಲ ನೀಡಿಕೆ 3.5 ಲಕ್ಷಕೋಟಿ ರೂ.ಗಳಾದರೆ, ಕೃಷಿ ವಲಯಕ್ಕೆ 54,000 ಕೋಟಿ ರೂ.ಗೂ ಹೆಚ್ಚು ಸಾಲ ನೀಡಿದೆ. ವಿದೇಶಿ ಬ್ಯಾಂಕುಗಳು ಈ ವಲಯಕ್ಕೆ ಯಾವುದೇ ಸಾಲ ನೀಡಿಲ್ಲ. ಖಾಸಗಿ ಬ್ಯಾಂಕುಗಳ ಪಾತ್ರ ನಗಣ್ಯ. ಇದೀಗ ಕೃಷಿ ಕ್ಷೇತ್ರಕ್ಕೆ ಆದ್ಯತಾವಲಯಕ್ಕೆ ಸಾಲದ ಹಂಚಿಕೆಯನ್ನು ಕಡಿಮೆ ಮಾಡಿದುದರಿಂದ ರೈತರಿಗೆ ಬ್ಯಾಂಕಿನ ಸಾಲ ಸಿಗದೆ, ಭೂಮಿ ಬೀಳು ಬಿಡುವುದನ್ನು ಕಾಣುತ್ತಿದ್ದೇವೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿ: ಬ್ಯಾಂ

ಕೋಷ್ಟಕ

1994-95 ರಲ್ಲಿ ವಿದೇಶಿ ಬ್ಯಾಂಕುಗಳು ... ರಾಷ್ಟ್ರೀಕೃತ ಬ್ಯಾ...

	ಶಾಖೆ	
ಸ್ಟೇಟ್ ಬ್ಯಾಂಕ್ ಗುಂಪು	12848	
ರಾಷ್ಟ್ರೀಕೃತ ಬ್ಯಾಂಕುಗಳು	30831	
	43679	8
ಖಾಸಗಿ ಬ್ಯಾಂಕುಗಳು	4066	
ವಿದೇಶಿ ಬ್ಯಾಂಕುಗಳು	151	
	421	

ರಾಷ್ಟ್ರೀಕರಣಕ್ಕೆ ಇನ್ನೊಂದು ಪ್ರಮುಖ ಕಾರ... ಹಿಂದುಳಿದ ಪ್ರದೇಶಗಳ ಅಭಿವೃದ್ಧಿ. ಖಾಸ... ಬ್ಯಾಂಕುಗಳು ಆ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುತ್ತಿರಲಿಲ್ಲ. ಲಾಭ ಕಡಿಮೆ, ಸಾಲ ವಾಪಸ್ ಬರುವುದು ಕಷ್ಟ. ರಾಷ್ಟ್ರೀಕೃತ ಬ್ಯಾಂಕುಗಳು ಈ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿವೆ. 65,000 ಕ್ಕೂ ಹೆಚ್ಚು ಬ್ಯಾಂಕು ಶಾಖೆಗಳಲ್ಲಿ ಅರ್ಧಾಂಶದಷ್ಟು ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಗ್ರಾಮೀಣ ಪ್ರದೇಶದ ಜನರಿಗೆ ಆ... ಪ್ರಯೋಜನವನ್ನು ಗಮನದಲ್ಲಿರಿಸಿ ಹಾಗೂ ... ಪ್ರದೇಶದ ಜನರ ಹಣ ಸಂಚಯಿತವಾಗಲು (Capital Formation) ಅನುಕೂಲವಾಗುವಂತೆ 1970-... ರ ದಶಕದಲ್ಲಿ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯ್ತು.

ಹಿಂದುಳಿದ ಪ್ರದೇಶಗಳ ಅಬಿವೃದ್ಧಿಗೆ ಇನ್ನೊಂದು ಪ್ರಮುಖ ಉದಾಹರಣೆ ಈಶಾನ್ಯ ರಾಜ್ಯಗಳು. ಇದೀಗ ನಷ್ಟವನ್ನು ಎದುರಿಸುತ್ತಿರುವ, ಮು... ಬೇಕೆಂದು ಕೈಗಾರಿಕೋದ್ಯಮಿಗಳು ಒತ್ತಾಯಿಸುತ್ತಿರು... ಯುಕೋ ಭ್ಯಾಂಕ್ ಹಾಗೂ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದ ಶೇ 30 ರಷ್ಟು ಶಾಖೆಗಳು ಈಶಾನ್ಯ ರಾಜ್ಯಗಳಲ್ಲಿವೆ. ಸಣ್ಣ ಉದ್ದಿಮೆಗಳಿಗೆ, ಚಹಾ ತೋಟಗಳಿಗೆ, ಕೃಷಿ, ಕೈಗಾರಿಕೆಗಳಿಗೆ ಮಾತ್ರವಲ್ಲ ಸರಕಾರದ ಕಾಮಗಾರಿ ಯೋಜನೆ ಗಳಿಗೆ ... ಬ್ಯಾಂಕುಗಳು ಸಾಲ ನೀಡುತ್ತಿವೆ. ಆ ಪ್ರಕಾರ ಯುನೈಟೆಡ್ ಬ್ಯಾಂಕ್ ಮಣಿಪುರ ಸರಕಾರಕ್ಕೆ ನೀಡಿರುವ 30 ಕೋಟಿ ಸಾಲ ವಾಪಸು ಬರುತ್ತಿಲ್ಲ. ಅದನ್ನು ವಾಪಸು ಕೊಡಿ ಎಂದು ಬ್ಯಾಂಕ್ ಒತ್ತಾಯಿಸು ತ್ತಿದ್ದರೆ, ಉಗ್ರವಾದಿ ಚಟುವಟಿಕೆ ಗಳಿಂದ ಆವೃತವಾಗಿರುವ ಮಣಿಪುರ ದಲ್ಲಿ ಪೋಲೀಸು ಅರೆಸೈನಿಕ ಪಡೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಅಲ್ಲಿನ ಸರಕಾರ ಬೆದರಿಕೆ ಹಾಕುತ್ತಿದೆ. ಯಾ... ಪರಿಸ್ಥಿತಿಯಲ್ಲಿ ಈ ಬ್ಯಾಂಕುಗಳು, ನೌಕರರು ಕೆಲ... ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಇಂತಹ ಪ್ರದೇಶಗಳಲ್ಲಿ ಖಾಸಗಿ ಬ್ಯಾಂಕುಗಳು ವಿದೇ... ಬ್ಯಾಂಕುಗಳು ಕಾರ್ಯನಿರ್ವಹಿಸಲು ತಯಾರಿದ್ದಾವೆಯೇ?

ಬ್ಯಾಂಕುಗಳು ಆರಂಭವಾದದ್ದು ಹೇಗೆ?

ಹಿಂದೆ ಕೈಗಾರಿಕೋದ್ಯಮಿಗಳಿಗೆ ತಮ್ಮ ಕೈಗಾರಿಕೆಗಳನ್ನು ನಡೆಸಲು ಹಣದ ಅವಶ್ಯಕತೆ ಇತ್ತು. ಆದರೆ ಜನರು ನೇರವಾಗಿ ಹಣ ನೀಡಲು ಅಥವಾ ಶೇರುಗಳನ್ನು ಪಡೆಯಲು ಮುಂದೆ ಬರುತ್ತಿರಲಿಲ್ಲ. ಕೈಗಾರಿಕೆಗಳು ಉಳಿಯುವುದೇ ಎನ್ನುವ ಆತಂಕ ಅವರಲ್ಲಿತ್ತು. ಆದ್ದರಿಂದ ಬ್ಯಾಂಕುಗಳನ್ನು ಸ್ಥಾಪಿಸಿ ಆ ಮೂಲಕ ಜನರ ಹಣವನ್ನು ಸಂಗ್ರಹಿಸಿ ಅದನ್ನು ತಮ್ಮ ಕೈಗಾರಿಕೆಗಳ ಅಭಿವೃದ್ಧಿಗೆ ಉಪಯೋಗಿಸುತ್ತಿದ್ದರು.

ಬ್ಯಾಂಕುಗಳಿಗೆ ನೌಕರರನ್ನು ನೇಮಿಸಿಕೊಳ್ಳುವಾಗ ಅವರ ವಿದ್ಯಾಬ್ಯಾಸ ಅಥವಾ ಪರಿಣತಿ ಅರ್ಹತೆ ಆಗಿರಲಿಲ್ಲ. ಬದಲಾಗಿ ಇಷ್ಟು ಠೇವಣಿ ಸಂಗ್ರಹಿಸಬೇಕೆಂದು ಕೋಟಾ ನೀಡುತ್ತಿದ್ದರು. ಆ ಕೋಟಾವನ್ನು ಭರ್ತಿಮಾಡಿದವರನ್ನು ಮಾತ್ರ ಕೆಲಸದಲ್ಲಿ ಖಾಯಂ ಮಾಡುತ್ತಿದ್ದರು. ಉಳಿದವರನ್ನು ಯಾವುದೇ ಸಂಕೋಚವಿಲ್ಲದೆ ಕೆಲಸದಿಂದ ಕಿತ್ತುಹಾಕುತ್ತಿದ್ದರು.

ಇಂದು ಮುಚ್ಚಬೇಕೆಂದು ಶಿಫಾರಸು ಮಾಡಿರುವ ಯುಕೋ ಬ್ಯಾಂಕ್‌ನ್ನು ಬಿರ್ಲಾ ಕಂಪನಿಯವರೂ, ಯುನೈಟೆಡ್‌ಭ್ಯಾಂಕ್‌ನ್ನು ಟಾಟಾರವರೂ, ಇಂಡಿಯನ್ ಬ್ಯಾಂಕ್‌ನ್ನು ತಮಿಳುನಾಡಿನ ಚೆಟ್ಟಿಯಾರ್ ಕುಟುಂಬದವರೂ ಆರಂಭಿಸಿದರು. ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ತಮ್ಮ ಕೈಗಾರಿಕೆಗಳಿಗೆ, ವ್ಯಾಪಾರಕ್ಕೆ ಉಪಯೋಗಿಸುವುದಕ್ಕೆ ಹಾಗೂ ಮಿಗಿಲಾದ ಹಣವನ್ನು ತಮ್ಮ ಬಂಧು ಬಾಂಧವರಿಗೆ ಸಾಲದ ರೂಪದಲ್ಲಿ ನೀಡಲು ಉಪಯೋಗಿಸಿದರೇ ಹೊರತು ಸಾರ್ವತ್ರಿಕವಾದ ಬೆಳವಣಿಗೆಗೆ ಯಾವುದೇ ಗಮನ ನೀಡಲಿಲ್ಲ. ಆದ್ದರಿಂದಲೇ ಉತ್ತಮ ಆಡಳಿತ (Management) ನಡೆಸಲು ಬೇಕಾದ ಕ್ರಮ ಕೈಗೊಳ್ಳಲಿಲ್ಲ.

ಕರ್ನಾಟಕದಲ್ಲಿರುವ 4 ರಾಷ್ಟ್ರೀಕೃತ ಬ್ಯಾಂಕುಗಳ ಪೈಕಿ (ಸ್ಟೇಟ್ ಬ್ಯಾಂಕ್ ಬಿಟ್ಟು) ಟಿ.ಎಂ.ಎ ಪೈ ಯವರು ಅವರು ಸ್ಥಾಪಿಸಿದ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಲು ಸಿಂಡಿಕೇಟ್ ಬ್ಯಾಂಕ್‌ನ್ನು ಉಪಯೋಗಿಸಿದರು. ಸಣ್ಣ ವ್ಯಾಪಾರಸ್ಥರಿಂದ ರೈತರಿಂದ ಸಂಗ್ರಹಿಸುತ್ತಿದ್ದ ಪಿಗ್ಮಿ ಯೋಜನೆ ಬ್ಯಾಂಕಿನ ಠೇವಣಿಯ ಪ್ರಮುಖ ಬಾಗವಾಗಿತ್ತು. ಕೊಂಕಣಿ ಜನಾಂಗದ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಬಿ. ಸುಬ್ರಯ ಪೈ ಅವರು ಕೆನರಾ ಬ್ಯಾಂಕನ್ನು ಸ್ಥಾಪಿಸಿದರೆ, ಬಂಟ ಜನಾಂಗದ ಜಮೀನ್ದಾರರಿಗೆ ಅನುಕೂಲವಾಗುವಂತೆ ವಿಜಯಾ ಬ್ಯಾಂಕನ್ನು ಸ್ಥಾಪಿಸಲಾಯಿತು. ಆ ಜನಾಂಗಕ್ಕೆ ಸೇರಿದ ಹೋಟೆಲು ಉದ್ಯಮಿಗಳು ಸಹಾಯ ಮಾಡಿದರು. ಇನ್ನೊಂದು ಪ್ರಮುಖ ಬ್ಯಾಂಕ್ ಕಾರ್ಪೊರೇಶನ್ ಬ್ಯಾಂಕು. ಮುಸ್ಲಿಂ ವ್ಯಾಪಾರಿ ಆರಂಭಮಾಡಿದ್ದರು.

ರಾಷ್ಟ್ರೀಕರಣ ಮಾಡುವಾಗಲೇ ತೀವ್ರ ಪ್ರತಿರೋಧ ಒಡ್ಡಿದ ಕೈಗಾರಿಕೋದ್ಯಮಿಗಳು, ದೊಡ್ಡ ವ್ಯಾಪಾರಸ್ಥರು ರಾಷ್ಟ್ರೀಕರಣವಾದ ನಂತರ ಉನ್ನತ ಮಟ್ಟದ ಅಧಿಕಾರಿಗಳನ್ನು ಅದಲುಬದಲು ಮಾಡದಂತೆ ನೋಡಿಕೊಂಡರು. ಏಕೆಂದರೆ ಬ್ಯಾಂಕುಗಳ ಸರಕಾರಕೆ ಸೇರಿದರೂ ಬ್ಯಾಂಕಿನ ಹಣ ಸರಾಗವಾಗಿ ಅವರಿಗೆ ಹೋಗಬೇಕು! ಉನ್ನತ ಮಟ್ಟದ ಅಧಿಕಾರಿಗಳನ್ನು ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ವರ್ಗಾವಣೆ ಮಾಡಬೇಕೆಂದು ನೌಕರ ಸಂಘಟನೆಗಳು ಬಹಳ ಕಾಲದಿಂದಲೂ ಒತ್ತಾಯಿಸುತ್ತಿದ್ದರು. ಆದರೆ ಸರ್ಕಾರ ಗಮನ ನೀಡಲಿಲ್. ಇತ್ತೀಚೆಗಷ್ಟೆ ಉನ್ನತ ಅಧಿಕಾರಿಗಳನ್ನು ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆ ಆರಂಭಗೊಂಡಿದೆ.

ಂಕುಗಳು



ಸರಕಾರಿ ಬ್ಯಾಂಕುಗಳು ಮತ್ತು ಖಾಸಗಿ ಬ್ಯಾಂಕುಗಳು: ಸರಕಾರಿ ಬ್ಯಾಂಕು ಗಳಲ್ಲಿ (ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ) ಲೋಪ ದೋಷಗಳು ಇಲ್ಲವೆಂದಲ್ಲ. ಆದರೆ ಖಾಸಗೀಕರಣ ಅದಕ್ಕೆ ಪರಿಹಾರವಲ್ಲ. ಕೋಷ್ಟಕ -2 ನೋಡಿ

ಬ್ಯಾಂಕುಗಳು ಹಾಗೂ

ಲಾಭ ಕೊ.ರೂ ಗಳಲ್ಲಿ	ಆದ್ಯತಾ ವಲಯಕ್ಕೆ ಸಾಲ
847-00	17627.00
269.00	34776-00
1116,00	52,403-00
358.38	3905.72
605.38	3320.61
963.76	7226.33

ಆದ್ಯತಾ ವಲಯದ ಸಾಲ ಎಂದು ಗುರುತಿಸಿದ್ದರೂ ಅದು ರಫ್ತು ವ್ಯವಹಾರಕ್ಕೆ ನೀಡುವ ಸಾಲವಾಗಿದ್ದು ಲಾಭದಾಯಕವಾಗಿರುತ್ತದೆ. ಆದರೆ ರಾಷ್ಟ್ರೀಕೃತ ಬ್ಯಾಂಕುಗಳು ಡಿ.ಆರ್.ಐ., ರೋಜಗಾರ್, ಕೃಷಿ ಇತರೆ ಕ್ಷೇತ್ರಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತಿವೆ.

1994-95 ರಲ್ಲಿ ಸರಕಾರಿ ಬ್ಯಾಂಕುಗಳು 43,679 ಶಾಖೆಗಳ ಮೂಲಕ(ಅರ್ಧಕ್ಕೂ ಹೆಚ್ಚು ಗ್ರಾಮೀಣ ಪ್ರದೇಶಗಳಲ್ಲಿ) 9 ಲಕ್ಷ ಜನರಿಗೆ ಉದ್ಯೋಗ ನೀಡಿದರೆ ಖಾಸಗಿ ಬ್ಯಾಂಕುಗಳು, 68 ಸಾವಿರ ಜನರಿಗೆ ಮಾತ್ರ ಉದ್ಯೋಗ ನೀಡಿವೆ. ಲಾಭದಲ್ಲಿ ತೀರ ವ್ಯತ್ಯಾಸವಿಲ್ಲ. ಯಾಕೆಂದರೆ ಸರಕಾರಿ ಬ್ಯಾಂಕುಗಳ ಆದ್ಯತಾ ವಲಯಕ್ಕೆ ಅದರಲ್ಲೂ ಕೃಷಿ ಕ್ಷೇತ್ರಕ್ಕೆ, ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡಬೇಕಾಗುತ್ತದೆ. (52,403 ಕೋಟಿ ರೂ) ಆದರೆ ವಿದೇಶಿ ಮತ್ತು ಖಾಸಗಿ ಬ್ಯಾಂಕುಗಳ ನೀಡಿದ ಸಾಲ 7226.33 ಕೋಟಿ ಮಾತ್ರ. ಅದೂ ಕೂಡಾ ಕೃಷಿ ಕ್ಷೇತ್ರಕ್ಕಲ್ಲ. ಯಾಕೆಂದರೆ ಗ್ರಾಮೀಣ, ಪ್ರದೇಶದಲ್ಲಿ ಅವುಗಳ ಶಾಖೆಗಳೇ ಇಲ್ಲ. ವಿದೇಶಿ ಮತ್ತು ಖಾಸಗಿ ಬ್ಯಾಂಕುಗಳು ಆದ್ಯತೆ ವಲಯಕ್ಕೆ ನೀಡಿದ ಸಾಲ ರಫ್ತು ಮಾಡುವುದಕ್ಕೆ ಮಾತ್ರ. ಅಂದರೆ ದೊಡ್ಡ ಕಂಪನಿಗಳಿಗೆ ಮಾತ್ರ. ಹೆಚ್ಚಿನ ಬಡ್ಡಿಯಲ್ಲಿ.

ಕೋಷ್ಟಕ - 3 ರಲ್ಲಿ ಹೇಳಿದಂತೆ ರಾಷ್ಟ್ರೀಕೃತ ಬ್ಯಾಂಕುಗಳು ಸಾರ್ವಜನಿಕ ಉದ್ದಿಮೆಗಳಿಗೆ ನೀಡಿದ ಸಾಲ ಹೆಚ್ಚಾಗುತ್ತಾ ಹೋದರೆ ಖಾಸಗಿ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕು ಸಾರ್ವಜನಿಕ ಉದ್ದಿಮೆಗಳಿಗೆ ನೀಡಿದ ಸಾಲ ಕಡಿಮೆಯಾಗುತ್ತಾ ಬಂದಿದೆ. ಈ ಬ್ಯಾಂಕುಗಳಿಗೆ ದೇಶದ ಬಗ್ಗೆಯಾಗಲೀ, ಜನರನ ಬಗ್ಗೆಯಾಗಲೀ ಯಾವುದೇ ಕಾಳಜಿ ಇಲ್ಲ. ಕಾಳಜಿ ಲಾಭಕ್ಕಾಗಿ ಮಾತ್ರ.

ಇದೀಗ ಗೋವಿನ ಹಾಲನ್ನು ಕುಡಿದು ಪುಷ್ಟಿಯಾದ ನಂತರ ಹಾಲು ಬರಿದಾಗಿದೆ ಎಂದು ನೆಪ ನೀಡಿ ಗೋವನ್ನೇ ಕಡಿದು ಹಾಲು ಮಾಡಿ ತಿನ್ನಬೇಕೆಂದು ಬಯಸುವ ಕೈಗಾರಿಕೋದ್ಯಮಿಗಳ ವಿರುದ್ಧ, ಗೋಪೂಜೆಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಗೋಮುಖ ವ್ಯಾಘ್ರ ವಾಜಪೇಯಿ ನೇತೃತ್ವದ ಸರಕಾರದ ವಿರುದ್ಧ ಬ್ಯಾಂಕ್ ನೌಕರರು ಮಾತ್ರವಲ್ಲ, ಇಡೀ ಜನ ಸಮೂಹವೇ ಸಂಘಟಿತರಾಗಿ ಹೋರಾಟ ಮಾಡಬೇಕಾಗಿದೆ.

ಕೋಷ್ಟಕ 3
ಸಾರ್ವಜನಿಕ ಉದ್ದಿಮೆಗಳಿಗೆ ಸಾಲ

	1991-92	1994-95
ಸ್ಟೇಟ್ ಬ್ಯಾಂಕ್ ಗುಂಪು	7358-95	8343.00
ರಾಷ್ಟ್ರೀಕೃತ ಬ್ಯಾಂಕ್	6866.08	12499.00
ಖಾಸಗೀ ಬ್ಯಾಂಕ್‌ಗಳು	671.01	285.04
ವಿದೇಶಿ ಬ್ಯಾಂಕುಗಳು,	788.49	177.55

(ಮೂಲ: ಐಬಿಎ ಬುಲೇಟಿನ್, ವಿಶೇಷ ಸಂಚಿಕೆ 1995-96)

ಬ್ಯಾಂಕ್ ಖಾಸಗೀಕರಣವನ್ನು ಕೇವಲ ಬ್ಯಾಂಕ್ ನೌಕರರಷ್ಟೇ ವಿರೋಧಿಸಿದರೆ ಸಾಕೆ?

ಭಾರತದ 14 ಪ್ರಧಾನ ವಾಣಿಜ್ಯ ಬ್ಯಾಂಕುಗಳನ್ನು ಜುಲೈ 19, 1969ರಂದು ರಾಷ್ಟ್ರೀಕರಣ ಮಾಡುತ್ತಾ ಅಂದಿನ ಪ್ರಧಾನ ಮಂತ್ರಿಗಳು ಮಾಡಿದ ಭಾಷಣದ ತುಣುಕು ಈ ರೀತಿ ಇದೆ ನೋಡಿ

"ಕೆಲವು ಸಮಯದ ಹಿಂದೆ ನಾವು ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿಯನ್ನು 'ಸೋಷಿಯಲ್ ಕಂಟ್ರೋಲ್ ಓವರ್ ಬ್ಯಾಂಕ್ಸ್' ಅಂಗೀಕರಿಸಿದೆವು. ಪ್ರಧಾನ ಬ್ಯಾಂಕುಗಳನ್ನು ರಾಷ್ಟ್ರೀಕರಿಸುವ ಪ್ರಸ್ತುತ ನಿರ್ಣಯದ ಮೂಲಕ ಸಾಧಿಸಬೇಕೆಂದಿರುವ ಅಂಶವೆಂದರೆ ನಮ್ಮ ಗುರಿಗಳ ಸಾಧನೆಯನ್ನು ತ್ವರಿತಗೊಳಿಸುವುದು ಆದ್ಯತಾ ಕ್ಷೇತ್ರಗಳಿಗೆ ಬ್ಯಾಂಕ್ ಸಾಲದ ವಿಸ್ತರಣೆಯನ್ನು ಇದುವರೆವಿಗೂ ನಿರ್ಲಕ್ಷಿಸಲಾಗಿದೆ. ಅಷ್ಟೇ ಅಲ್ಲದೇ ಕೇವಲ ಕೆಲವರ ಹತೋಟಿಯನ್ನು ಇಲ್ಲವಾಗಿಸುವುದು ಕೃಷಿ ಸಣ್ಣ ಕಸುಬುದಾರರು, ಸಣ್ಣ ಉದ್ದಿಮೆ, ಸಣ್ಣವ್ಯಾಪಾರ, ಗುಡಿ ಕೈಗಾರಿಕೆ, ಸ್ವ-ಉದ್ಯೋಗ, ಕಡುಬಡತನದಲ್ಲಿರುವವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿ ಬಡತನದ ರೇಖೆಯಿಂದ ಮೇಲೆತ್ತುವ ಕಾರ್ಯ ಇನ್ನೂ ಸಾಗಬೇಕಿದೆ. ರಾಷ್ಟ್ರರಕ್ಷಣೆಗೆ ಸಾಕಷ್ಟು ಸಾಲ ಒದಗಿಸುವುದು, ಬ್ಯಾಂಕ್ ನಿರ್ವಹಣೆಗೆ ಒಂದು ವೃತ್ತಿಪರತೆ ಒದಗಿಸುವುದು ಉದ್ಯಮಿಗಳ ಹೊಸ ವರ್ಗಗಳಿಗೆ ಪ್ರೋತ್ಸಾಹ ನೀಡುವುದು, ಬ್ಯಾಂಕ್ ಸಿಬ್ಬಂದಿಗೆ ಸೂಕ್ತ ತರಬೇತಿ, ಹಾಗೂ ಸೇವಾ ಶರತ್ತುಗಳು ಒದಗಿಸುವುದು ಇವೆಲ್ಲಾ ಇನ್ನೂ ಉಳಿದಿವೆ. ಇವನ್ನೆಲ್ಲಾ ದೀರ್ಘಾವಧಿಯವರೆಗೆ ಒಂದು ಸತತ ಪ್ರಯತ್ನ ಮಾಡಬೇಕಾಗಿದೆ. ಎಂದು ಹೇಳುತ್ತಾ 14 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು.

1980 ರಲ್ಲಿ ಪುನ: ಮತ್ತೆ ಇನ್ನೂ 6 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ಇದರೊಂದಿಗೆ ಸ್ಟೇಟ್ ಬ್ಯಾಂಕು ಮತ್ತು ಅದರ ಸಹಯೋಗಿ ಬ್ಯಾಂಕುಗಳನ್ನು ಸೇರಿಸಿ ಸಾರ್ವಜನಿಕ ವಲಯದಲ್ಲಿನ ಬ್ಯಾಂಕುಗಳ ಸಂಖ್ಯೆ 27 ಆಯಿತು.

1969ರ ಮುನ್ನ (ಆರ್‌ಬಿಐ 1997 ರ ಅಕೇಷನಲ್ ಪೇಪರ್ಸ್‌ನ 18 ನೇ ಪುಟದಲ್ಲಿ ತಿಳಿಸಿದಂತೆ) ನಮ್ಮ ದೇಶದಲ್ಲಿ 1370 ಕ್ಕೂ ಹೆಚ್ಚು ಬ್ಯಾಂಕುಗಳು ದಿವಾಳಿಯಾದವು. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವ ಮುನ್ನ 1969 ರಲ್ಲೂ ಸಹ 89 ಬ್ಯಾಂಕುಗಳು ದಿವಾಳಿಯಾದವು. ಇದರಿಂದಾಗಿ ಠೇವಣಿದಾರರು ನಷ್ಟ ಹೊಂದಬೇಕಾಯಿತು. ಆದರೆ, 1969 ರ ನಂತರ ರಾಷ್ಟ್ರೀಕರಣವಾದ ಬಳಿಕ ಒಂದೂ ಬ್ಯಾಂಕ್ ಸಹ ದಿವಾಳಿಯಾಗಿದ್ದು ಕಾಣಬಂದಿಲ್ಲ. ಠೇವಣಿದಾರ ಅತ್ಯಂತ ಸುವ್ಯವಸ್ಥಿತತೆಯಲ್ಲಿದ್ದಾನೆ ಎಂದೂ ಹೇಳಬಹುದು.

1969ರಲ್ಲಿ ಬ್ಯಾಂಕುಗಳ ಶಾಖೆ 7799 ಇದ್ದದ್ದು 1998-99ಕ್ಕೆ 65,000 ಕ್ಕೂ ಹೆಚ್ಚು ಬ್ಯಾಂಕುಗಳ ಶಾಖೆ ಇವೆ. ರಾಷ್ಟ್ರದಲ್ಲಿ ಹೆಚ್ಚಿನ ಪಾಲು ಶೇಕಡ 70ಕ್ಕೂ ಜಾಸ್ತಿ ಹಳ್ಳಿಗಳಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಸೇವೆ ಸಲ್ಲಿಸುತ್ತಿವೆ ಎಂದರೆ ತಪ್ಪಾಗಲಾರದು.

ಸಾಲ ನೀಡುವಲ್ಲೂ ಸಹ ರಾಷ್ಟ್ರೀಕೃತ ಬ್ಯಾಂಕುಗಳ ಕಾರ್ಯವೈಖರಿ ಶ್ಲಾಘಿಸುವಂತಿದೆ. 1979-80ರಲ್ಲಿ 3285ಕೋಟಿ ರೂ. ಗಳಾಗಿದ್ದು, 1990-91ರಲ್ಲಿ 115412 ಕೋಟಿ ರೂಗಳು ಇದರಲ್ಲಿ ಕೃಷಿ ಹಾಗೂ ಆದ್ಯತೆ ಸಾಲಗಳ ಪಾಲು 1990-91ರಲ್ಲಿ 38649ಕೋಟಿ ರೂಗಳಾಗಿದ್ದುವು ಖಾಸಗಿ ಬ್ಯಾಂಕುಗಳಿಗಾಗಲಿ ಅಥವಾ ವಿದೇಶಿ ಬ್ಯಾಂಕುಗಳಿಗಾಗಲಿ ಈ ಕಾರ್ಯ ಅಸಾಧ್ಯವೇ ಸರಿ.

ರಾಷ್ಟ್ರೀಕೃತ ಬ್ಯಾಂಕುಗಳ ಗಮನಾರ್ಹ ಸಂಗತಿ ಎಂದರೆ ಮೂಲೆ ಮೂಲೆಗಳಲ್ಲೂ ದುರ್ಗಮ ಪ್ರದೇಶಗಳಲ್ಲೂ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಶಾಖೆಗಳನ್ನು ತೆರೆದವು. ಅಸಂಖ್ಯಾತ ಜನರ ಅದರಲ್ಲೂ ಮಧ್ಯಮ ವರ್ಗದವರ ಸಣ್ಣ ಉಳಿತಾಯವನ್ನು ಈ ಬ್ಯಾಂಕುಗಳು ಕ್ರೋಢೀಕರಿಸಿ ಇವುಗಳ ದೊಡ್ಡ ಭಾಗವನ್ನು ಗ್ರಾಮೀಣ ಅಭಿವೃದ್ಧಿಗೆ ಒದಗಿಸಿದವು. ಮುಖ್ಯವಾಗಿ ಬ್ಯಾಂಕ್ ಸೇವೆ ಹಾಗೂ ಸಾಲದ ವಿಸ್ತರಣೆಯಿಂದಾಗಿ ದೇಶದ ಕೃಷಿ ಉತ್ಪನ್ನದಲ್ಲಿ ಒಂದು ದೀರ್ಘಾವಧಿಯ ಬದಲಾವಣೆ ತರಲು ಸಾಧ್ಯವಾಯಿತು.

1969ರಲ್ಲಿ 4623 ಕೋಟಿಗಳ ಠೇವಣಿ ಸಂಗ್ರಹಿಸಿದ್ದ ಬ್ಯಾಂಕುಗಳು ರಾಷ್ಟ್ರೀಕರಣದ ನಂತರದಿಂದ 1990-91ರ ಹೊತ್ತಿಗೆ 185827 ಕೋಟಿ ರೂಗಳನ್ನು ಸಂಗ್ರಹಿಸಿ ದಾಖಲೆ ಮಾಡಿದ್ದವು.

ಆರ್ಥಿಕ ಸುಧಾರಣೆಗಳು ಮತ್ತು 'ಜಾಗತೀಕರಣ' ಎಂಬ ಹೆಸರಿನಲ್ಲಿ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕ್ ಇವುಗಳು ಮುಂಚೆಯೇ ತಿಳಿಸಿದಂತೆ ರಾಷ್ಟ್ರೀಕೃತ ವಲಯಗಳನ್ನು ಮುಚ್ಚಿಸುವುದು ಅಥವಾ ಖಾಸಗೀಕರಿಸುವುದು. ವಿದೇಶಿ ಬಂಡವಾಳಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ಯಾವುದೇ ಹತೋಟಿ ಇಲ್ಲದೇ ಪ್ರವೇಶಾವಕಾಶ. ದೇಶೀಯ ವಲಯಗಳನ್ನು ಕುಗ್ಗಿಸುವುದು ಉದಾರೀಕರಣದ ಹೆಸರಿನಲ್ಲಿ ಎಲ್ಲ ಹತೋಟಿಗಳನ್ನು ದುರ್ಬಲ ಗೊಳಿಸುವುದು - ಇದು ಯಾವ ಪುರುಷಾರ್ಥಕ್ಕಾಗಿ? ಯಾರಿಗಾಗಿ? ಇದರ ವಿರುದ್ಧ ಹೆಚ್ಚಾಗಿ ಸಾರ್ವಜನಿಕರು ರೈತರು, ವ್ಯಾಪಾರಿಗಳು, ದೇಶ ಪ್ರೇಮಿಗಳು ಹೋರಾಡಬೇಕಾಗಿದೆ ಇದು ಈಗ ಅತ್ಯಂತ ಅನಿವಾರ್ಯ ಕೂಡ.

ರಾಷ್ಟ್ರೀಕೃತ ಬ್ಯಾಂಕುಗಳ ಮರುಪಾವತಿಯಾಗಲಾರದ ಅನುತ್ಪಾದಿತ ಆಸ್ತಿಗ (ಎನ್‌ಪಿಎ)ಳಿಂದಾಗಿ ಕೆಟ್ಟ ಸಾಲಗಳು : ಮರುಪಾವತಿಯಾಗಲಾರದ ಸಾಲ 46000 ಕೋಟಿ ರೂ.ಗಳು. ಇದರ ಬಗ್ಗೆ ನಮ್ಮ ಘನ ಸರ್ಕಾರ ಬ್ಯಾಂಕ್ ಆಡಳಿತ ವರ್ಗ, ನರಸಿಂಹಂ ಸಮಿತಿಯ ವರದಿಗಳು ವರ್ಮಾ ಸಮಿತಿ ವರದಿಗಳು ಇವು ಯಾವುವೂ ಸಹ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸದೇ ಇದರ ಬಗ್ಗೆ ಚಕಾರ ಎತ್ತದೆ ಇರುವುದು ವಿಷಾದಕರ ಸಂಗತಿ. ಬದಲಾಗಿ ಬ್ಯಾಂಕುಗಳ ಶಾಖೆಗಳ ಕಡಿತ (ಏತಕ್ಕಾಗಿ?) ಬ್ಯಾಂಕ್ ನೌಕರರ ಮೇಲೆ ಗೂಬೆ ಕೂರಿಸಿ ನೌಕರರ ಸಂಬಳದಲ್ಲಿ ಕಡಿತ ನೌಕರರನ್ನು ತೆಗೆದುಹಾಕುವಿಕೆ ಸ್ವಯಂ ನಿವೃತ್ತಿ ವೇತನ ಇತ್ಯಾದಿ ಇತ್ಯಾದಿ, ವಿಷಯಗಳನ್ನು ತಿಳಿಸಿದೆ.

ರಾಷ್ಟ್ರದ ಬೆನ್ನೆಲುಬೆನಿಸಿದ ಕೃಷಿ ತತ್ಸಂಬಂಧಿತ ಕಾರ್ಯ ಚಟುವಟಿಕೆಗಳಿಗೆ, ಸ್ವ-ಉದ್ಯೋಗ ಸಣ್ಣ ವ್ಯಾಪಾರಸ್ತರು ಇನ್ನಿತರ ಆದ್ಯತಾ ವಲಯಗಳಿಗೆ ಈಗ ಸಿಗುತ್ತಿರುವ ಬ್ಯಾಂಕ್ ಸಾಲಗಳ ವಿಸ್ತರಣೆಯಲ್ಲಿ "ಗಣನೀಯ ಕಡಿತಾ" ಮಾಡಬೇಕೆಂದು ತಿಳಿಸಿದೆ.


ರಾಷ್ಟ್ರೀಕೃತ ಬ್ಯಾಂಕ್‌ಗಳ 46 ಸಾವಿರ ಕೋಟಿ ರೂ.ಗಳ ಪಾವತಿಯಾಗಲಾರದ ಸಾಲದ ಮೊತ್ತದಲ್ಲಿ, ಬಹುತೇಕ ಅಂದರೆ ಶೇ 80ಕ್ಕೂ ಹೆಚ್ಚು ದೊಡ್ಡ ದೊಡ್ಡ ಕಂಪನಿಗಳು ಬಂಡವಾಳ ದಾರರಾಗಿದ್ದು, ಅವರುಗಳ ಹೆಸರುಗಳನ್ನು ಸಾರ್ವಜನಿಕರಿಗೆ ಬಹಿರಂಗ ಪಡಿಸಬೇಕೆಂದು ಬ್ಯಾಂಕ್ ನೌಕರರ ಸಂಘಟನೆ ಕೇಳಿದ್ದರೂ ಸಹ ಭರವಸೆಯಲ್ಲೆ ಕಾಲ ಕಳೆದು ಈಗ ಬರಿ ಬ್ಯಾಂಕ್ ನೌಕರರ ಹಾಗೂ ಅಧಿಕಾರಿಗಳ ಮೇಲೆ ಗದಾ ಪ್ರಹಾರ ಮಾಡಿರುವುದು ನಿಜಕ್ಕೂ ಖಂಡನೀಯ.


ರಾಷ್ಟ್ರೀಕೃತ ಬ್ಯಾಂಕುಗಳು 1980ರ ದಶಕದಲ್ಲಿ ಪ್ರತಿ ವರ್ಷ 25-30 ಸಾವಿರ ವಿದ್ಯಾವಂತ ಯುವಕರಿಗೆ ಉದ್ಯೋಗ ಕಲ್ಪಿಸಲಾಗುತ್ತಿತ್ತು ಎಂಬಂಶ ಸತ್ಯ. 1990ರ ದಶಕದಲ್ಲಿ ಹೊಸ ಆರ್ಥಿಕ ನೀತಿಯು ಜಾರಿಗೆ ಬಂದನಂತರ ಬ್ಯಾಂಕಿಂಗ್ ಉದ್ದಿಮೆಯಲ್ಲಿ ಉದ್ಯೋಗಾವಕಾಶಗಳು ಖಂಡಿತಾ ನಿಂತುಹೋಗಿವೆ. ಈ ನಿಟ್ಟಿನಲ್ಲಿ ನರಸಿಂಹಂ ಸಮಿತಿ ಬಹುಕಟುವಾಗಿದ್ದು ಹೊಸ ಉದ್ಯೋಗಾವಕಾಶಗಳು ಇರಬಾರದೆಂದೂ ಸೂಚಿಸಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬ್ಯಾಂಕ್ ವ್ಯವಹಾರದಿಂದಾಗಿ ಹೊಸ ನೇಮಕಾತಿ ಸ್ಥಗಿತದಿಂದಾಗಿ (ಸೇವಾ ಮನೋಭಾವವಿರುವ ರಾಷ್ಟ್ರೀಕೃತ ಬ್ಯಾಂಕುಗಳು) ಈಗಿರುವ ಬ್ಯಾಂಕ್ ನೌಕರರ ಮೇಲೆ ಖಂಡಿತವಾಗಿಯೂ ಕೆಲಸದ ಒತ್ತಡ ಹೆಚ್ಚಿದೆ. ವಿದೇಶಿ ಬ್ಯಾಂಕುಗಳು ರಾಷ್ಟ್ರದಲ್ಲಿ 180 ಇದ್ದು ಅವುಗಳಿಗೆ "ಸೂಪರ್ ಪ್ರಾಫಿಟ್" ಮಾಡುವುದೇ ಗುರಿಯಾಗಿದೆ. ಇಂತಹ ಬ್ಯಾಂಕುಗಳು ಕೆಳದರ್ಜೆ ಮಧ್ಯಮ ವರ್ಗದ ಜನರಿಗೆ ಖಂಡಿತ ಸೇವೆ ಒದಗಿಸದು ಎಂದು ಹೇಳಲೇಬೇಕಾಗುತ್ತದೆ ಹಾಗೂ ಈ ವಿದೇಶೀ ಬ್ಯಾಂಕುಗಳು ನಮ್ಮ ರಾಷ್ಟ್ರದ ಬೆನ್ನೆಲುಬು ಎಂಬಂತೆ ಚಿತ್ರಿಸಲಾಗುತ್ತಿದೆ. ಕೃಷಿಗೆ ಮತ್ತು ಆದ್ಯತಾ ವಲಯಗಳಿಗೆ ಸಾಲ ಕೊಡುವುದಿರಲಿ, ಹಳ್ಳಿ ಗುಡ್ಡಗಾಡುಗಳಲ್ಲಿ ಖಂಡಿತಾ ಶಾಖೆಗಳನ್ನು ತೆರೆಯುವುದಿಲ್ಲ ಎಂಬ ಸತ್ಯಾಂಶ ಸಾರ್ವಜನಿಕರಿಗೆ ಗೊತ್ತಾಗಬೇಕು. ವಿದೇಶಿ ಬ್ಯಾಂಕುಗಳು ಅತ್ಯಂತ ಶ್ರೀಮಂತ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿವೆ. ನಿವೃತ್ತಿ ವೇತನ ಉಪಾಧ್ಯಾಯರುಗಳ ಮಾಸಿಕ ಸಂಬಳ ಇತ್ಯಾದಿ ಸೇವೆಗಳು ರಾಷ್ಟ್ರೀಕೃತ ಬ್ಯಾಂಕುಗಳಿಂದ ಮಾತ್ರ ಲಭ್ಯ. ರಾಷ್ಟ್ರದ ಮತ್ತು ಜನರ ಜೀವನಾಳದಂತಿರುವ ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣ ಮಾಡುವ ಹುನ್ನಾರದಿಂದ ಮುಕ್ತಿಗೊಳಿಸುವುದು ಖಂಡಿತಾ ಅನಿವಾರ್ಯ. ಇಂಡೋನೇಷಿಯ, ಜಪಾನ್ ದೇಶಗಳಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಗುತ್ತಿದೆ ಎಂದಾಗ ನಮ್ಮ ದೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀ ವಲಯಕ್ಕೆ ಒಪ್ಪಿಸುವುದು ಯಾವ ದುರುದ್ದೇಶಕ್ಕಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಸಾಮಾಜಿಕ ಸುಭದ್ರತೆಗೆ ನಿರುದ್ಯೋಗ ನಿವಾರಣೆಗೆ ಕೃಷಿ ಉತ್ಪಾದನೆಗೆ ಖಂಡಿತಾ ಮಾರಕವಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ನಿಟ್ಟಿನಲ್ಲಿ ಬ್ಯಾಂಕ್ ನೌಕರರೇ ಪ್ರತಿಭಟಿಸಬೇಕೇ? ಈ ಪ್ರತಿಗಾಮಿ ಕ್ರಮವನ್ನು ಸಾರ್ವಜನಿಕರು ಪತ್ರಿಕಾರಂಗ, ದೇಶಪ್ರೇಮಿಗಳು, ರಾಜಕೀಯ ಧುರೀಣರು, ಸಮಾಜದ ಎಲ್ಲಾ ವರ್ಗಗಳ ಜನರು ವಿರೋಧಿಸಬೇಕಲ್ಲವೇ?

ಆರ್.ಎನ್. ಗುರುರಾಜರಾವ್





ಗುಲ್ಬರ್ಗ ಜಿಲ್ಲೆಯಲ್ಲಿ ಪ್ರತಿಗಾಮಿ ಸಿದ್ಧಾಂತಗಳು

ಕೃಷ್ಣೆ-ಭೀಮೆಯರು ಕಲ್ಪಿಸಿಕೊಟ್ಟಿರುವ ಐಸಿರಿಯನ್ನು ಬಳಸುವ ಕನಸು ಹೊತ್ತುನಿಂತಿರುವ ಗುಲ್ಬರ್ಗಾ ಒಂದು ದೊಡ್ಡ ಜಿಲ್ಲೆಯೂ ಹೌದು,ಹಿಂದುಳಿದ ಜಿಲ್ಲೆಯೂ ಹೌದು.. ಜಮೀನ್ದಾರಿ ಶಕ್ತಿಗಳ ಪ್ರಾಬಲ್ಯದಿಂದಾಗಿ ಪ್ರತಿಗಾಮಿ ಸಿದ್ಧಾಂತಗಳು ಬೇರು ಬಿಟ್ಟಂತಿರುವ ಪ್ರದೇಶ. ಆದರೆ ಇಲ್ಲೂ ಬದುಕುವ ಹಕ್ಕಿಗಾಗಿ ಕಿಡಿಗಳು ಸಿಡಿದಿವೆ. ಈ ಜಿಲ್ಲೆಯ ಸನ್ನಿವೇಶದ ಒಂದು ಪರಿಚಯ ಇಲ್ಲಿದೆ.

ನೀಲಾ ಕೆ.

ಕೃಷ್ಣೆ-ಭೀಮೆಯುವರು ಕಲ್ಪಿಸಿಕೊಟ್ಟಿರುವ ಐಸಿರಿಯನ್ನು ಬಳಸುವ ಕನಸು ಹೊತ್ತುನಿಂತಿರುವ ಗುಲ್ಬರ್ಗಾ ಒಂದು ದೊಡ್ಡ ಜಿಲ್ಲೆಯೂ ಹೌದು,ಹಿಂದುಳಿದ ಜಿಲ್ಲೆಯೂ ಹೌದು.. ಜಮೀನ್ದಾರಿ ಶಕ್ತಿಗಳ ಪ್ರಾಬಲ್ಯದಿಂದಾಗಿ ಪ್ರತಿಗಾಮಿ ಸಿದ್ಧಾಂತಗಳು ಬೇರು ಬಿಟ್ಟಂತಿರುವ ಪ್ರದೇಶ. ಆದರೆ ಇಲ್ಲೂ ಬದುಕುವ ಹಕ್ಕಿಗಾಗಿ ಕಿಡಿಗಳು ಸಿಡಿದಿವೆ. ಈ ಜಿಲ್ಲೆಯ ಸನ್ನಿವೇಶದ ಒಂದು ಪರಿಚಯ ಇಲ್ಲಿದೆ.

ಗುಲಬರ್ಗಾ ಜಿಲ್ಲೆ ಹತ್ತು ತಾಲ್ಲೂಕುಗಳನ್ನು ಹೊಂದಿದ ಅತ್ಯಂತ ದೊಡ್ಡ ಜಿಲ್ಲೆಯಾಗಿದೆ. ಇದು ಶರಣಬಸಪ್ಪ ಅಪ್ಪ ಅವರ ದಾಸೋಹಕ್ಕೆ ಹೆಸರಾದ ನಾಡು. ಇಲ್ಲಿ ಖಾಜಾ ಬಂದೇ ನವಾಜ ದರ್ಗಾ ಪ್ರಸಿದ್ಧವಾಗಿದೆ. ಅಂತೆಯೇ ಪರಸ್ಪರ ಕೋಮು ಸಾಮರಸ್ಯಕ್ಕೂ ಎತ್ತಿದ ಕೈಯಾಗಿದೆ.

ಈ ಜಿಲ್ಲೆಯ ಒಡಲೊಳಗೆ ಕೃಷ್ಣೆ- ಭೀಮೆ ಮೈದುಂಬಿ ಹರಿದು ಐಸಿರಿಯ ಅವಕಾಶ ಕಲ್ಪಿಸಿದ್ದಾರೆ. ಕಾಗಿಣಾ, ಕಮಲಾವತಿ, ಅಮರ್ಜಾ, ಬೆಣ್ಣೆತೊರಾ, ಗಂಡೋರಿ ನಾಲಾ, ಭೀಮಾ, ಭೀಮಾ ಫ್ಲೋ ಮುಲ್ಲಮಾರಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿದಲ್ಲಿ ಮುಂದೊಮ್ಮೆ ಬಂಗಾರದ ಬೆಳೆಯಿಂದ ಗುಲಬರ್ಗಾದ ಉಡಿ ತುಂಬುವ ಕನಸಿಗಾಗಿ ಕಾಯುತ ನಿಂತಿವೆ. ಸುಮಾರು ಲಕ್ಷ ಎಕರೆ ಭೂಮಿ ಈಗಾಗಲೇ ನೀರಾವರಿಯಾಗಿದೆ.

ಕೃಷಿ ಕಾರ್ಮಿಕರ ಬಡ ರೈತರ ಬವಣೆಯ ಬದುಕು:

ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಒಟ್ಟು ಜನ ಸಂಖ್ಯೆಯ ಶೇಕಡ 50 ರಷ್ಟು ಜನ ಭೂಹೀನರಾಗಿದ್ದು ಭೂಮಾಲಿಕರ ಹೊಲದಲ್ಲಿ ಚಾಕರಿ ಮಾಡಿ ಹೊಟ್ಟೆ ಹೊರೆಯುವವರಿದ್ದಾರೆ. ಬಿತ್ತುವ, ರಾಶಿ ಮಾಡುವ ಕಸ ತೆಗೆವ ದಿನಗಳಲ್ಲಿ ಊರಲಿದ್ದು ಉಳಿದ (ಸರಿ ಸುಮಾರು 8 ತಿಂಗಳು) ಹೊಟ್ಟೆ ಹೊರೆಯಲು ಕೂಲಿಗಾಗಿ ಬೊಂಬಾಯಿ, ಪುಣೆ, ಬೆಂಗಳೂರಂತ ಮಹಾನಗರಗಳಿಗೆ ವಲಸೆ ಹೋಗುತ್ತಾರೆ. ಬೇಸಿಗೆಯ ತಿಂಗಳುಗಳಲ್ಲಿ ಯಾವ ಗ್ರಾಮಕ್ಕೆ ಹೋದರೂ ಗುಡಿಸಲುಗಳಲ್ಲಿ ಇಲ್ಲವೆ ಮುರುಕು ಮನೆಗಳಲ್ಲಿ ನಮಗೆ ಕಾಣಸಿಗುವುದು ಐದು-ಆರು ವರ್ಷದ ಕೂಸುಗಳು ಮತ್ತು ಹಣ್ಣು ಹಣ್ಣು ವಯಸ್ಸಾದವರು ಮಾತ್ರ. ಅಲ್ಲೊಬ್ಬ ಇಲ್ಲೊಬ್ಬ ತುಂಬಿದ ಬಸುರಿಯರು, ಬಾಣಂತಿಯರು. ಹತ್ತು ವರ್ಷದ ಹಸುಗೂಸಿನಿಂದ ಹಿಡಿದು ಹರೆಯದವರು ಮತ್ತು ಇನ್ನೇನು ದುಡಿಯಲು ಸಾಧ್ಯವೇ ಇಲ್ಲ ಅನ್ನುವ ಮುಪ್ಪಿನ ಅಂಚಿನವರೆಗೂ ದುಡಿಯುತ್ತಿರುವ ಯಜಮಾನರುಗಳವರೆಗೆ ಎಲ್ಲರೂ 'ಚೂರು ಗಂಜಿಗಾಗಿ, ಒಂದಿಷ್ಟು ಅನ್ನದ ಅಗುಳಿಗಾಗಿ' ಕೂಲಿ ಹೆಚ್ಚು ಸಿಗುವ ನಾಡು ಯಾವುದಾದರೇನು ಹೊರಟೇ ಬಿಡುವರು.

ಬದುಕಿನುದ್ದಕ್ಕೂ ಗೇಣು ಹೊಟ್ಟೆ ತುಂಬಿಸಿಕೊಳ್ಳಲು ಧಡಧಡ ಬಿಡುವ ಬಡರೈತ ಮತ್ತು ಕೃಷಿಕೂಲಿಕಾರರ ಜೀವನ ಕಷ್ಟಕೋಟಲೆಗಳ ಮಡುವಾಗಿರುತ್ತದೆ. ಮೂಢನಂಬಿಕೆ, ಅನಕ್ಷರತೆಯನ್ನು ಖಾಯಮ್ಮಾಗಿ ಇವರ ನಡುವೆ ಇದ್ದುಬಿಡುವಂತೆ ಏನು ಮಾಡಬೇಕೋ ಆ ಎಲ್ಲಾ ವ್ಯವಸ್ಥೆಯನ್ನು ಜಮೀನ್ದಾರಿ ಶಕ್ತಿಗಳು ಮಾಡಿವೆ. ಸಾಕ್ಷರತೆಯ ಪ್ರಮಾಣ ಕೇವಲ 10 ರಿಂದ 15 ಇದೆ. ಎಷ್ಟೋ ಕೂಲಿಕಾರ ಕುಟುಂಬಗಳಲ್ಲಿ ಇಂದಿಗೂ ಹೆಣ್ಣು ಮಕ್ಕಳಿಗೆ ಶಿಕ್ಷಣದ ಪ್ರಮಾಣ ಸೊನ್ನೆಯಿದೆ.

-ಹೀಗೆ ವಲಸೆ ಹೋಗುವವರಲ್ಲಿ ಬಡರೈತರೂ ಹೆಚ್ಚಿನ ಸಂಖ್ಯೆಯಲ್ಲಿರುವವರು. ಎರಡರಿಂದ 8-10 ಎಕರೆ ಭೂಮಿಯಲ್ಲಿ ವರ್ಷಕ್ಕೆ ಬೇಕಾಗುವಷ್ಟು ಆದಾಯ ಬರಲು ಸಾಧ್ಯವೇ ಇಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ನೀರಿದ್ದಲ್ಲಿ ಕಬ್ಬು, ಜೋಳ ಬೆಳೆದರೆ ನೀರಿಲ್ಲದಲ್ಲಿ ತೊಗರಿ ಬೆಳೆವರು. ಕಳೆದ ಎಂಟು ವರ್ಷದಿಂದೀಚೆಯಿಂದ ತೊಗರಿ ಬೆಳೆಯಲು ಹೂಡುವ ಬಂಡವಾಳದ ಕಾಲು ಭಾಗದಷ್ಟೂ ಬೆಲೆ ಸಿಗದ ಕಾರಣ ತೊಗರಿ ಬೆಳವ ರೈತ ಕಂಗಾಲಾಗುತ್ತಿದ್ದಾನೆ. ಶಹಾಪುರ ತಾಲೂಕಿನ ಕೆಲವು ಪ್ರದೇಶ ನೀರಾವರಿಯಾಗಿದೆ. ಆದರೂ ಸಹ ಅಲ್ಲಿನ ಬಡರೈತ ಒಂದೊ ಜಮೀನ್ದಾರರ ಹೊಲಕ್ಕೆ ಕೂಲಿಗೆ ಹೋಗುವನು, ಇಲ್ಲವೇ ಬಾಂಬೆ-ಪುಣೆಗೆ ಕೆಲಸ ಅರಸಿ ಹೊರಡುವನು. ಈಗಲೂ ಸಹ ನೀರಾವರಿ ನಾಡಾದ ಶಹಾಪುರ-ಸುರಪುರ ತಾಲೂಕುಗಳಲ್ಲಿ ಕೂಲಿಯ ಬೆಲೆ ಅತಿ ಕಡಿಮೆ ಇದೆ. ಗಂಡಾಳಿಗೆ ರೂ. 25-35 ಹೆಣ್ಣಾಳಿಗೆ ರೂ. 10 ರಿಂದ 20. ಈ ಅತ್ಯಲ್ಪ ಕೂಲಿಗೆ ಈ ದುಬಾರಿ ದಿನಗಳಲ್ಲಿ ಬದುಕು ನಡೆಸುವುದು ಸಾಧ್ಯವೇ ಇಲ್ಲವೆಂದಾದಾಗ ವಲಸೆ ಬಿಟ್ಟರೆ ಬೇರೆ ಮಾರ್ಗವೇನಿದೆ? ಇತ್ತೀಚೆಗೆ ಶಹಾಪುರ-ಸುರಪುರನಲ್ಲಿ ಶೇಂಗಾ ಸೆಟ್ ಹೋಯಿತು(ಅಂದರೆ ಮೊಳಕೆಯಲ್ಲಿಯೇ ಕಮರಿತು). ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಹಾನಿಗೊಳಗಾಗಿ ಮೂಲೆ ಹಿಡಿಯಬೇಕಾದ ಸ್ಥಿತಿ ಬಡ ರೈತನದಾಯಿತು. ಹೂಡಿದ ಬಂಡವಾಳವೂ ಕೈಗೆ ಬರಲಿಲ್ಲ. ಮಾಡಿದ ಸಾಲಕ್ಕೆ ಚಕ್ರಬಡ್ಡಿ ತಪ್ಪಲಿಲ್ಲ. ಈಗ ಗುಲ್ಬರ್ಗ ಜಿಲ್ಲೆಯಾದ್ಯಂತ ಬಂಪರ್ ತೊಗರಿಯ ಹಳದಿ ಹೂವುಗಳು ನಳನಳಿಸುವ ದಿನಗಳು. 15 ದಿನಗಳ ಹಿಂದೆ ರೈತರ ಮುಖದ ಮೇಲೆ ಮುಗಿಲಗಲ ಖುಷಿ ಲಾಸ್ಯವಾಡುತ್ತಿತ್ತು. ಆದರೆ ಈಗ ಖುಷಿ ಹಾರಿಹೋಗಿ ಚಿಂತೆ ಮನೆ ಮಾಡಿದೆ. ಕಾರಣವೇನೆಂದರೆ ಅರ್ಧಕ್ಕೂ ಹೆಚ್ಚು ತೊಗರಿ ಹೂವುಗಳು ಉದುರಿ ನೆಲಕಚ್ಚಿವೆ. ತೊಗರಿಕಾಯಾಗಿ-ಬೆಳೆ ಬರುವುದಾದರೂ ಹೇಗೆ? ಇಂತಹ ಸಂದರ್ಭದಲ್ಲಿ ರೈತರ ಸಹಾಯಕ್ಕೆ ಬರಬೇಕಾದ ಸರ್ಕಾರ ವಿಧಾನಸೌಧದ ಮೂಲೆಯಲ್ಲಿ ಅಡಿಗಿಕೊಂಡಿರುತ್ತದೆ. ಆದರೆ ಬಡರೈತರ ಹೊಟ್ಟೆ ಕೇಳುವುದೇ? ಸಾಲಗಾರ ನಿಲ್ಲುವನೇ...? ಆಗ ಕೂಲಿ ಸಿಗದ ಕೂಲಿಕಾರ ಮತ್ತು ಅಲ್ಪ ಭೂಮಿಯಲ್ಲಿ ಸ್ವಲ್ಪವೂ ಬೆಳೆ ಕಾಣದ ಬಡ ರೈತ ಇಬ್ಬರೂ ಹೊಟ್ಟೆಯನ್ನು ಅಂಗೈಯಲ್ಲಿ ಹಿಡಿದು ಕೂಲಿ ಅರಸಿ ಹೊರಡುತ್ತಾರೆ.

ಹೀಗೆ ಬದುಕಿನುದ್ದಕ್ಕೂ ಗೇಣು ಹೊಟ್ಟೆ ತುಂಬಿಸಿಕೊಳ್ಳಲು ಧಡಧಡ ಬಿಡುವ ಬಡರೈತ ಮತ್ತು ಕೃಷಿಕೂಲಿಕಾರರ ಜೀವನ ಕಷ್ಟಕೋಟಲೆಗಳ ಮಡುವಾಗಿರುತ್ತದೆ. ಮೂಢನಂಬಿಕೆ, ಅನಕ್ಷರತೆಯನ್ನು ಖಾಯಮ್ಮಾಗಿ ಇವರ ನಡುವೆ ಇದ್ದುಬಿಡುವಂತೆ ಏನು ಮಾಡಬೇಕೋ ಆ ಎಲ್ಲಾ ವ್ಯವಸ್ಥೆಯನ್ನು ಜಮೀನ್ದಾರಿ ಶಕ್ತಿಗಳು ಮಾಡಿವೆ. ಸಾಕ್ಷರತೆಯ ಪ್ರಮಾಣ ಕೇವಲ 10 ರಿದ 15 ಇದೆ. ಎಷ್ಟೋ ಕೂಲಿಕಾರ ಕುಟುಂಬಗಳಲ್ಲಿ ಇಂದಿಗೂ ಹೆಣ್ಣು ಮಕ್ಕಳಿಗೆ ಶಿಕ್ಷಣದ ಪ್ರಮಾಣ ಸೊನ್ನೆಯಿದೆ. ಒಟ್ಟು 5 ರಿಂದ 8% ಮಾತ್ರ. ಕೂಲಿಕಾರರ ಜಗತ್ತಿನಲ್ಲಿ ದಲಿತ ಹಿಂದುಳಿದವರ ಪ್ರಮಾಣವೇ ಹೆಚ್ಚಿರುತ್ತದೆ. ಭಾನಾಮತಿ, ಮಾಟ ಮಂತ್ರಗಳ ವಿಷಯದಲ್ಲಿ ಅತ್ಯಧಿಕ ನಂಬಿಕೆ ಹಲವಾರು ಕಡೆ ನೋಡಸಿಗುತ್ತದೆ. ಗುಲಬರ್ಗ ಜಿಲ್ಲೆಯಲ್ಲಿ ಇರುವ ದೇವದಾಸಿಯರೆಲ್ಲ ವಾಸ್ತವದಲ್ಲಿ ಕೃಷಿಕೂಲಿಕಾರರೇ ಆಗಿರುವವರು. ಚಿಂಚನೂರು, ಇಟಗಾ, ನೀಲೂರು, ಹಡಗಲಿಯಂತ ಅನೇಕ ಕಡೆ ದೇವದಾಸಿಯರು ಇರುವರು. ವಿಶೇಷವಾಗಿ ಇಟಗಾದಲ್ಲಿ ಈಗಲೂ ಬೆತ್ತಲೆ ಸೇವೆ ನಡೆಯುತ್ತದೆ. ಅನೇಕ ಪ್ರಗತಿಪರ ಸಂಘಟನೆಗಳು ಇದನ್ನು ತಡೆವ ಕುರಿತು ಚಿಂತಿಸಿವೆ. ಮತ್ತು ಕಾರ್ಯಮುಖವೂ ಆಗಿವೆ. ಆದರೆ ಈ ಜಿಲ್ಲೆಯ ಜಮೀನ್ದಾರಿ ಮತ್ತು ಪಾಳೇಗಾರಿ ಶಕ್ತಿಗಳು ಈ ವ್ಯವಸ್ಥೆ ಮುಂದುವರೆಯಲಿಕ್ಕೆ ಬೇಕಾದ ಎಲ್ಲಾ ತಂತ್ರಗಳನ್ನೂ ಮಾಡುತ್ತಿವೆ.

ಜ್ವರ, ಮತ್ತಿತರೆ ಹೋಗ ರುಜಿನಗಳು ಬಂದಾಗ ತಾಯಿತ ಕಟ್ಟಿಸಿ ಕೊಳ್ಳುವುದು, ಮಂತ್ರಿಸಿದ ನೀರು ಸೇವಿಸುವುದು ಇಲ್ಲಿ ಸಾಮಾನ್ಯವಾಗಿದೆ. ಮತ್ತು ಈ ಬಡಜನತೆ ವೈಜ್ಞಾನಿಕ ಚಿಂತನೆಯ ಕಡೆಗೆ ಮುಖ ಮಾಡದಂತೆ ತಡೆಯಲು 'ಮುತ್ಯಾ'ಗಳು ಮತ್ತು ಸಾಂಪ್ರದಾಯಿಕ ಶಕ್ತಿಗಳು ನಿರಂತರ ಶ್ರಮಿಸುವ ವ್ಯವಸ್ಥೆಯೂ ಇದೆ. ಹೆಜ್ಜೆಗೊಂದು ಮುತ್ಯಾನ ಆಶ್ರಮಗಳು, ಬಹುಶಃ ಗುಲಬರ್ಗಾ ಜಿಲ್ಲೆಯಲ್ಲಿರುವಷ್ಟು ಮುತ್ಯಾ(ಧಾರ್ಮಿಕ ಗುರುಗಳಂತವರು) ಇನ್ನೆಲ್ಲೂ ಇರಲಿಕ್ಕಿಲ್ಲ. ಅಮವಾಸೆ ಹುಣ್ಣಿಮೆಗಳ ಸಂದರ್ಭದಲ್ಲಿ ಸಾಮೂಹಿಕ ಸನ್ನಿಯ ಭಕ್ತ ಸಮೂಹ ಗಾಣಗಾಪುರದ ದತ್ತ ಮಂದಿರದಲ್ಲಿ ಸೇರಿರುತ್ತದೆ. ಅಫ್ಜಲಪುರ ತಾಲೂಕಿನ ಘತ್ತರಗಿ ಭಾಗಮ್ಮ ದೇವಿಗೆ ಸಿಡಿ ಆಡಿ ಹರಕೆ ಸಲ್ಲಿಸುವಂತಹ ಭಯಂಕರ ಭಕ್ತಾದಿಗಳಿಗೂ ಕೊರತೆಯಿಲ್ಲ. ಎಷ್ಟೋ ಸಾರಿ ಅತ್ಯಂತ ಅಪಾಯದ ಭಕ್ತಿ ಸಮರ್ಪಿಸುವ ಭಕ್ತಾದಿಗಳು ಬಡ ರೈತರ ಮತ್ತು ಕೂಲಿಕಾರರ ನಡುವಿನಿಂದ ಬಂದವರಾಗಿರುತ್ತಾರೆ.

ಕೃಷಿ ಕಾರ್ಮಿಕರು ಮತ್ತು ಬಡ ರೈತರು ತಮ್ಮ ಗಂಡು ಮಕ್ಕಳನ್ನು ಶಾಲೆಗೆ ಸೇರಿಸಿ ವಯಸ್ಸಾದ ಆಯಿ-ಮುತ್ಯ (ಅಜ್ಜ-ಅಜ್ಜಿ)ಂದಿರ ಹತ್ತಿರ ಬಿಟ್ಟು ದುಡಿಯಲು ಹೋಗಿರುತ್ತಾರೆ. ಹೀಗೆ ಶಿಕ್ಷಣ ಪಡೆದ ಗಂಡು ಮಕ್ಕಳಲ್ಲಿ ಹತ್ತನೆಯ ಈಯತ್ತೆ ಅಥವಾ ಪಿ.ಯು.ಸಿ. ವರೆಗೆ ಮಾತ್ರ ಓದಿರುವವರು ಪ್ರಮಾಣ 90% ಇರುತ್ತದೆ. ಅನಂತರ ಶಾಲೆ ಬಿಡಿಸಿ-ಬದುಕಿನ ಭಾರ ಹೊರಲು ದುಡಿಮೆಯ ನೊಗಕ್ಕೆ ಹೆಗಲು ಕೊಡಲು ಬೊಂಬಾಯಿ-ಪುಣೆ ನಗರಗಳಿಗೆ ಹೋಗಬೇಕಾಗುತ್ತದೆ. ಹೀಗೆ ಆಯಾ ಮಹಾನಗರಗಳಿಗೆ ವಲಸೆ ಹೋದ ಕೂಲಿಕಾರರ ಸ್ಲಂ (ಕೊಳಚೆ ಪ್ರದೇಶಗಳು) ಗಳು ನಿರ್ಮಾಣಗೊಂಡಿವೆ. ಬೆಂಗಳೂರಿನಲ್ಲಿ ಗುಲಬರ್ಗ ಸ್ಲಂ ಇರುವುದು ಒಂದು ಉದಾಹರಣೆ ಮಾತ್ರ. ಚುನಾವಣೆಯ ಸಂದರ್ಭದಲ್ಲಿ ಬಂಡವಾಳಶಾಹಿ ಪಕ್ಷಗಳು ಓಟು ಹಾಕಿಸಿಕೊಳ್ಳಲು ಬೊಂಬಾಯಿ-ಬೆಂಗಳೂರುಗಳಂಥ ನಗರಗಳಿಂದ ಬಂದು ಹೋಗುವ ಪ್ರಯಾಣ ವೆಚ್ಚ ಕೊಟ್ಟು ಕರೆಯಿಸಿಕೊಳ್ಳುವುದೂ ಇದೆ. ಗುಲಬರ್ಗ ಜಿಲ್ಲೆಯಲ್ಲಿರುವ ಬಹುತೇಕ ಲಂಬಾಣಿಗಳಲ್ಲಿ ಪ್ರತಿಶತ 90% ಜನವೆಲ್ಲ Seasonwise ವಲಸೆ ಹೋಗಿ ಬರುವವರೇ. ಗೇಣು ಹೊಟ್ಟೆ ತುಂಬಿಸಿಕೊಳ್ಳಲು ಪೃಥ್ವಿ ಸುತ್ತುವ ಇವರ ನೋವಿನ ಕಥೆಗೆ ಇನ್ನೂ ಹಲವಾರು ಮುಖಗಳಿವೆ. ಸಾಮಾಜಿಕ ಭದ್ರತೆ, ಕಾನೂನು ನೆರವು, ಆರ್ಥಿಕ ಪರಿಸ್ಥಿತಿ, ಇತ್ಯಾದಿ ಅನೇಕಾನೇಕ ಪ್ರಶ್ನೆಗಳಿವೆ. ಅದರಲ್ಲೂ ಪ್ರಮುಖವಾಗಿ ಮಹಿಳಾ ಕೃಷಿ ಕಾರ್ಮಿಕರ ಜೀವನದ ಗತಿ-ಸ್ಥಿತಿ ಏನು ಎಂಬುದು ಅಗಾಧವಾದ ಚಿಂತನೆಯ ವಿಷಯವೂ ಹೌದು. ಗ್ರಾಮೀಣ ಪ್ರದೇಶದಲ್ಲಿ ಅತ್ಯಾಚಾರಕ್ಕೆ ಮತ್ತು ಹಲ್ಲೆಗೆ ಒಳಗಾಗುವವರಲ್ಲಿ ನೂರಕ್ಕೆ 99 ಭಾಗ ಕೃಷಿ ಕೂಲಿಕಾರ ಮತ್ತು ಬಡ ಮಹಿಳೆಯರೇ ಒಳಗಾಗಿರುತ್ತಾರೆ. ಅಪ್ರಾಪ್ತ ಬಾಲಕಿಯರ ಮೇಲಿನ ಬಲತ್ಕಾರಗಳನ್ನು ಬೆಳಕಿಗೆ ಬರದಂತೆ ತಡೆಯಲಾಗುತ್ತದೆ. ಕಟುಕ ಮತ್ತು ಕ್ರೂರ ಗಂಡಂದಿರ ಹೊಡೆತದಿಂದ ಸಂಭವಿಸುವ ಸಾವುಗಳು ಪೋಲೀಸ್ ಲೆಕ್ಕದಲ್ಲಿ ಆತ್ಮಹತ್ಯೆಗಳಾದರೆ ವಾಸ್ತವದಲ್ಲಿ ಅವು ಕೊಲೆಗಳೇ ಆಗಿರುತ್ತವೆ. ಮತ್ತು ಒಟ್ಟು ಕೃಷಿ ಕೂಲಿಕಾರರಲ್ಲಿ ಶೇಕಡ 75 ರಷ್ಟು ಮಹಿಳಾ ಕೃಷಿ ಕೂಲಿಕಾರರೇ ಆಗಿರುತ್ತಾರೆ.

ಭೂ ಸಂಬಂಧಗಳು

ಗುಲಬರ್ಗ ಜಿಲ್ಲೆಯ ಒಟ್ಟು ಭೂಮಿಯು ವಿಸ್ತೀರ್ಣದಲ್ಲಿ ಸಾಗುವಳಿಯೋಗ್ಯ ಭೂಮಿ 40,25,000 ಎಕರೆಯಾಗಿದೆ. ಇದರಲ್ಲಿ 34,83,377 ಎಕರೆ ಒಟ್ಟುಸಾಗುವಳಿ ಮಾಡಿದ ಭೂಮಿ. ಜಿಲ್ಲೆಯಲ್ಲಿ ಒಟ್ಟು ಹನ್ನೆರಡು (ದೊಡ್ಡ ಸಣ್ಣ ಸೇರಿದ) ನೀರಾವರಿ ಯೋಜನೆಗಳಿದ್ದು ಈವರೆಗೆ ನೀರಾವರಿಯಾದ ಜಮೀನು ಸುಮಾರು 5 ಲಕ್ಷದಷ್ಟು. ಎಲ್ಲ ನೀರಾವರಿ ಯೋಜನೆಗಳು ಪೂರ್ಣಗೊಂಡಲ್ಲಿ ಇನ್ನು 10 ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತದೆ. ಇದು ಒಟ್ಟು ಭೂಮಿಯ ಕಿರು ಪರಿಚಯ. ಈಗ ಈ ಭೂಮಿ ಯಾರ ಯಾರ ಕೈಯಲ್ಲಿ ಎಷ್ಟು ಇದೆ ಎನ್ನುವುದರ ಮೇಲೆಯೇ ಒಟ್ಟು ಜಿಲ್ಲೆಯ ಬಹುಸಂಖ್ಯಾತರ ಅಭಿವೃದ್ಧಿ ಅಡಗಿದೆ. ಅಷ್ಟೇ ಅಲ್ಲ ಈ ಪ್ರದೇಶದ ಅಭಿವೃದ್ಧಿಯೂ ಅಡಗಿದೆ. ಏಕೆಂದರೆ ನೆಲ ಮತ್ತು ಜನ ಎರಡೂ ಮಾನವನ ಬದುಕನ್ನು ಸುಂದರಗೊಳಿಸಿಕೊಳ್ಳಲು ಬೇಕಾದ ಮೂಲ ಸಂಪನ್ಮೂಲ, ಭೂಮಿ ದುಡಿವ ಜನರ ಉಸಿರು, ಭೂಮಿ ಚರಾಚರ ಜೀವಿಗಳನ್ನೆಲ್ಲ ಮಾನವ ಜೀವಿಗಳನ್ನೆಲ್ಲ ಹೊತ್ತು ನಿಂತ ಏಕೈಕ ಆಧಾರ-ಹಿಡಿ ಭೂಮಿಯಾದರೂ ಸರಿ ಮನುಷ್ಯನನ್ನು ತಲೆ ಎತ್ತಿ ನಿಲ್ಲುವಂತಹ ಸ್ವಾಭಿಮಾನದ ಮೂಲ ಹುಡಿ. ಕಣ್ಣೊರೆಸುವ ಸರಕಾರದ ಹಿಕಮತಿನ ಸೌಲಭ್ಯಗಳನ್ನು ಬದಿಗೊತ್ತಿ 'ನಮಗೆ ಭೂಮಿ ಬೇಕು ಭೂಮಿ ಕೊಡಿ' ಎಂಬ ಕೆಚ್ಚಿನ ದಂಗೆಗಳು ಭಾರತದ ನೆಲದ ಮೇಲೆ ಎಷ್ಟೊಂದು ನಡೆದುಹೋಗಿದೆ. ಇಂತಹ ಭೂಮಿ ದುಡಿವವನ ಕೈಯಲ್ಲಿದ್ದರೆ ತನ್ನ ಮೈಯ ಬೆವರು ಹರಿಸಿ ಬಂಗಾರದ ಬೆಳೆ ತೆಗೆದು ಇಡೀ ನಾಡಿನ ಜನತೆಯ ಹೊಟ್ಟೆ ತುಂಬಿಸುವ ತಾಕತ್ತು ರೈತನಿಗಿರುತ್ತದೆ. ಭೂಮಿಯ ಮಣ್ಣನ್ನು ತನ್ನ ರಕ್ತದಷ್ಟೇ [illegible] ರೈತನಿಗೆ ಒದಗಿದ ದುಃಸ್ಥಿತಿಗೆ ಕಾರಣಗಳೇನು ಎಂಬುದನ್ನು ಹುಡುಕಲು ಮತ್ತೆ ನಾವು ಭೂಮಿಯ ಕಡೆಗೆ ಮುಖ ಮಾಡಬೇಕಿದೆ. ದುಡಿಯದೇ ಕುಂತುಣ್ಣುವವನ ಕೈಯಲ್ಲೆಷ್ಟು ಭೂಮಿ, ಕಷ್ಟ ಪಟ್ಟು ದುಡಿವ-ಶ್ರಮಿಕನ ಕೈಯಲ್ಲೆಷ್ಟು ಭೂಮಿ ಎಂಬುದರ ಮೇಲೆ ಆ ಪ್ರದೇಶದ ಸಂಪೂರ್ಣ ಅಭಿವೃದ್ಧಿ ಅಡಕವಾಗಿರುತ್ತದೆ.

ಗುಲಬರ್ಗ ಜಿಲ್ಲೆಯ ಜಮೀನ್ದಾರಿ ಪಾಳೇಗಾರಿ ಪ್ರಭುಗಳು ತಮ್ಮ -ತಮ್ಮೊಳಗೆ ಐಕ್ಯಮತ ಉಳಿಸಿಕೊಳ್ಳುವ ಸೂಕ್ಷ್ಮ ಗ್ರಾಹಿಗಳೂ ಹೌದು. ಒಂದು ಕಡೆ ಶಿಕ್ಷಣ ಸಂಸ್ಥೆಗಳನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಂಡು ಜನಸಾಮಾನ್ಯರನ್ನು, ಕಡು ಬಡವರನ್ನು ಅಕ್ಷರಲೋಕದಿಂದ ದೂರವಿಟ್ಟರು. ಇನ್ನೊಂದು ಕಡೆ ಚುನಾಯಿತ ಸ್ಥಾನಗಳನ್ನು ಆಡಳಿತ ಕೇಂದ್ರಗಳನ್ನು ಆಕ್ರಮಿಸಿ ಕನಿಷ್ಠ ನಾಗರೀಕ, ಸೌಲಭ್ಯಗಳಿಂದಲೂ ಜನರನ್ನು ವಂಚಿತರನ್ನಾಗಿಸಿದರು.

ಗುಲಬರ್ಗ ಜಿಲ್ಲೆಯ ಒಕ್ಕಲಿಗರಲ್ಲಿ 1,94,000 ಜನ ಬಡರೈತರೆಂದು ಗುರುತಿಸಲಾಗಿದ್ದು ಇವರಲ್ಲಿ 2,33,299 ಹೆಕ್ಟೆರ್ ಭೂಮಿ ಇದೆ. ಒಟ್ಟು ಭೂಮಿಯಲ್ಲಿ 20% ರಷ್ಟು ಭೂಮಿಯು ಶೇಕಡ 47% ರಷ್ಟು ಒಕ್ಕಲಿಗರಲ್ಲಿ ಹಂಚಲ್ಪಟ್ಟಿದೆ. 4% ರಷ್ಟು (ಕೇವಲ 25 ಸಾವಿರ ಕುಟುಂಬಗಳ) ಜನರು ಒಟ್ಟು ಭೂಮಿಯ ಶೇಕಡ 25 ರಿಂದ 27 ರಷ್ಟು ಭೂಮಿಯ ಮೇಲೆ ತಮ್ಮ ಒಡೆತನ ಸ್ಥಾಪಿಸಿದ್ದಾರೆ. ಶೇಕಡ 45 ರಿಂದ 55 ಜನ ಭೂಹೀನರಾಗಿರುವವರು.

ಪಾಳೇಗಾರಿ ಪ್ರಭುಗಳ ಹುನ್ನಾರಗಳು

ಈ ಮೇಲಿನ ಅಂಕೆಸಂಖ್ಯೆ ಏನು ತೋರಿಸುತ್ತದೆ ಎಂಬುದು ನಮಗೆಲ್ಲ ಸ್ಪಷ್ಟವಿದೆ. ಶೇಕಡ 4 ರಷ್ಟು ಜನರ ಕೈಯಲ್ಲಿರುವ ಭೂಮಿ(27% ರಷ್ಟು) ಯಲ್ಲಿ ನಿಜವಾಗಿಯೂ ಉತ್ತುವ, ಬಿತ್ತುವ, ರಾಗಿಮಾಡುವ,

(ಮುಂದಿನ ಪುಟಕ್ಕೆ)

ಧಾನ್ಯ ಚೀಲ ತುಂಬುವ, ತುಂಬಿದ ಧಾನ್ಯಗಳ ಚೀಲಗಳನ್ನು ಎತ್ತಿ ಬಂಡಿಗಳಲ್ಲಿ ಹೇರಿಕೊಂಡು ಬಂದು ಗೋದಾಮಿನಲ್ಲಿ ಪೇರಿಸಿಡುವ ಕೆಲಸವೆಲ್ಲ ಮಾಡುವುದು ಬಡ ರೈತರು ಮತ್ತು ಶೇಕಡ 50 ರಷ್ಟಿರುವ ಕೃಷಿ ಕೂಲಿಕಾರ್ಮಿಕರು ಮತ್ತು ಶೇಕಡ 4 ಜನ ಕೇವಲ ಭೂಮಿಯ ಮೇಲಿನ ಒಡೆತನ ಹೊಂದಿದವರು ಮಾತ್ರ ಅಲ್ಲ. ಇವರ ಯಜಮಾನಿಕೆಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು, ದಾಲ್(ಬೇಳೆ) ಮಿಲ್‌ಗಳು, ಧವಸ ಧಾನ್ಯಗಳನ್ನು ಖರೀದಿಸುವ ಮಧ್ಯವರ್ತಿ ಅಂಗಡಿಗಳು ನಡೆಯುತ್ತಿರುತ್ತವೆ. ಪ್ರಮುಖ ವ್ಯಾಪಾರದ ಮಳಿಗೆಗಳ ಮಾಲೀಕತ್ವ ಶೇಕಡ 4 ರಷ್ಟು ಜನರದ್ದೇ ಅಧಿಕವಾಗಿರುತ್ತದೆ. ಅಲ್ಲದೆ ಚುನಾಯಿತ ಸ್ಥಳೀಯ ಸಂಸ್ಥೆಗಳಲ್ಲಿ ಬ್ಯಾಂಕುಗಳಲ್ಲಿ, ಅಧಿಕಾರವನ್ನು ಹೊಂದಿದವರಿರುತ್ತಾರೆ. ನೀತಿ ನಿರೂಪಣಾ ಸ್ಥಾನಗಳಲ್ಲಿ, ಉತ್ಪಾದನಾ ಸಾಧನಗಳ ಇತರ ವಿಭಾಗಗಳಲ್ಲಿ ಪ್ರಮುಖ ಆಡಳಿತ ಚುಕ್ಕಾಣಿಯಲ್ಲಿ ಇದೇ ಜನರ ಪ್ರಾಬಲ್ಯವಿದೆ. ಇನ್ನೂ ಮುಂದುವರೆದ ಈ ಯಜಮಾನರುಗಳು ತಾವು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ, ಡಿಸ್ಟಿಲರಿಗೆ, ಇತರೆ ಅಕ್ರಮ ದಂಧೆಗಳಿಗೆ ಸಿಕ್ಕಿ ಹಾಕಲು ಸರಳ ಪರವಾನಗಿ ದೊರೆಯಲು ಶಾಸನ ಸಭೆ ಮತ್ತು ಸಂಸತ್ತುಗಳಿಗೂ ತಮಗೆ ಬೇಕಾದ ವ್ಯಕ್ತಿಯನ್ನು ಮಾತ್ರ ಆರಿಸಿಕಳಿಸುತ್ತಾರೆ ಮತ್ತು ತಮ್ಮ ಬಹಿರಂಗ ಕಳ್ಳ ವ್ಯಾಪಾರಕ್ಕೆ, ಕುತಂತ್ರದ ಕಾರಸ್ಥಾನಕ್ಕೆ ಜನಸಾಮಾನ್ಯರು ಅಡ್ಡಿಯಾಗಬಾರದು ಎನ್ನುವುದಕ್ಕಾಗಿ ಜನರ ನಡುವೆ ಧಾರ್ಮಿಕ ಅಂಧಾಭಿಮಾನ, ಭಾವನಾತ್ಮಕ ಸಂಗತಿಗಳನ್ನು ಹುಟ್ಟುಹಾಕಿ ಜನರನ್ನು ಕೆರಳಿಸುವಂತಹ ಹುನ್ನಾರುಗಳನ್ನು ನಿರಂತರ ಮಾಡುತ್ತಾ ಬಂದಿದ್ದಾರೆ. ಅನೇಕ ಮೂಢನಂಬಿಕೆಗಳನ್ನು ಹುಟ್ಟುಹಾಕಿ ಈವರೆಗೂ ಬೆಳೆಸುತ್ತಾ ಬಂದಿದ್ದಾರೆ. 'ದೇವದಾಸಿ ಪದ್ಧತಿ' ಅಂಥವುಗಳಲ್ಲೊಂದು.

ಒಂದು ಲೆಕ್ಕದಲ್ಲಿ ಗುಲಬರ್ಗ ಜಿಲ್ಲೆಯ ಜಮೀನ್ದಾರಿ ಪಾಳೇಗಾರಿ ಪ್ರಭುಗಳು ತಮ್ಮ-ತಮ್ಮೊಳಗೆ ಐಕ್ಯಮತ ಉಳಿಸಿಕೊಳ್ಳುವ ಸೂಕ್ಷ್ಮ ಗ್ರಾಹಿಗಳೂ ಹೌದು. ಒಂದು ಕಡೆ ಶಿಕ್ಷಣ ಸಂಸ್ಥೆಗಳನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಂಡು ಜನಸಾಮಾನ್ಯರನ್ನು, ಕಡು ಬಡವರನ್ನು ಅಕ್ಷರಲೋಕದಿಂದ ದೂರವಿಟ್ಟರು. ಇನ್ನೊಂದು ಕಡೆ ಚುನಾಯಿತ ಸ್ಥಾನಗಳನ್ನು ಆಡಳಿತ ಕೇಂದ್ರಗಳನ್ನು ಆಕ್ರಮಿಸಿ ಕನಿಷ್ಟ ನಾಗರೀಕ, ಸೌಲಭ್ಯಗಳಿಂದಲೂ ಜನರನ್ನು ವಂಚಿತರನ್ನಾಗಿಸಿದರು. ಉತ್ತರ ಕರ್ನಾಟಕವನ್ನು ಅಭಿವೃದ್ಧಿ ಮಾಡಲು H.K.D.B.(Hyderabad Karnataka Development Board) ಯಲ್ಲಿ ಇದ್ದ ನೂರಾರು ಕೋಟಿ ಹಣ ಒಂದೋ ಕೊಳ್ಳೆ ಹೊಡೆದು ಮನೆ ತುಂಬಿಸಿಕೊಳ್ಳಲಾಗಿದೆ. ಇಲ್ಲವೇ ಅದೇ ಹಣದಿಂದ ಜನರನ್ನು ಇನ್ನಷ್ಟು ಅಂಧಾಭಿಮಾನಕ್ಕೆ (ಭಕ್ತಿ ಹೆಸರಲ್ಲಿ) ತಳ್ಳಿ ಜನರ ಚಿಂತನೆಯನ್ನು ಬೇರೆಡೆ ತಿರುಗಿಸಲು ಅಸಂಖ್ಯಾತ ಗುಡಿಗಳನ್ನು ಕಟ್ಟಿಸಿರುವ H.K.D.B ಯಲ್ಲಿನ ಹಣವನ್ನು ಜನತೆಯ ಬದುಕಿನ ಅವಶ್ಯಕತೆಗಳನ್ನು ಪೂರೈಸಲಿಕ್ಕಾಗಿ ಮಾತ್ರ ಬಳಸ ಬೇಕು ಎಂದು H.K.D.B.ಯಲ್ಲಿ ನಿರ್ದೇಶನವಿದೆ. ಆದಾಗ್ಯೂ ಈ ಜಮೀನ್ದಾರಿ ಪಾಳೇಗಾರಿ ಯಜಮಾನರುಗಳು ತಮ್ಮ ಚುನಾಯಿತ ಮತ್ತು ಅಧಿಕಾರದ ಸ್ಥಾನವನ್ನು ದುರುಪಯೋಗಿಸಿಕೊಂಡು 'ಗುಡಿ' ಕಟ್ಟುವಲ್ಲಿ ಶ್ರಮಿಸಿದ್ದು ತಮ್ಮ ಸ್ವಾರ್ಥಕ್ಕೆ ವಿನಃ ಜನತೆಯ ಬದುಕು ಹಸನಾಗಲು ಅಲ್ಲ ಎಂಬುದು ಸಾಮಾನ್ಯ ಪ್ರಜ್ಞಾವಂತರೆಲ್ಲರ ಅರಿವಿಗೂ ಬರುತ್ತದೆ.

ಜನಸಾಮಾನ್ಯರ ಭಾವನೆಗಳನ್ನು ಕೆರಳಿಸಿ ಅವರ ತಿಳುವಳಿಕೆಯನ್ನು ಅಡ್ಡ ದಾರಿಗೆಳೆದು ಪ್ರತಿಗಾಮಿ ಮತ್ತು ಜನವಿರೋಧಿ ಕಾಯಕಕ್ಕೆ ದೂಡಿದ ಘಟನೆಗಳು ಬೇಕಾದಷ್ಟಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಅವಲೋಕಿಸೋಣ.

ಪ್ರತ್ಯೇಕತೆಗಾಗಿ ಪ್ರಚೋದನೆ: ಹೈದರಾಬಾದ್ ಕರ್ನಾಟಕ(ಬೀದರ, ಗುಲಬರ್ಗ, ರಾಯಚೂರು ಮತ್ತು ಬಳ್ಳಾರಿ) ಹಿಂದುಳಿದಿದೆ. ಆದ್ದರಿಂದ ಇದನ್ನು ಮುಂದೆ ತರಲಿಕ್ಕಾಗಿ ಸರಕಾರ ಇನ್ನಷ್ಟು ಹಣ ಕೊಡಬೇಕು ಇಲ್ಲದಿದ್ದರೆ ಹೈದರಾಬಾದ್ ಕರ್ನಾಟಕ ಪ್ರತ್ಯೇಕ ರಾಜ್ಯ ಮಾಡಬೇಕೆಂದು ಕಾಂಗ್ರೆಸ್, ಬಿಜೆಪಿ, ಜನತಾದಳ ಹೀಗೆ ಈ ಬಂಡವಾಳಶಾಹಿ ಪಕ್ಷಗಳ ಮುಖಂಡರುಗಳು ಒಂದು ಚಳುವಳಿಯನ್ನೇ ಶುರು ಮಾಡಿ ಜನಸಾಮಾನ್ಯರನ್ನು ಪ್ರಚೋದಿಸತೊಡಗಿದರು. ಆದರೆ ವಾಸ್ತವವೇನು? ಹೀಗೆ ಕೇಳುತ್ತಿರುವವರೆಲ್ಲಾ ಕಳೆದ ಐವತ್ತು ವರ್ಷಗಳಿಂದ ಅಧಿಕಾರದ ಗದ್ದುಗೆ ಹಿಡಿದವರು!! ಅಭಿವೃದ್ಧಿಯ ಹೆಸರಿನಲ್ಲಿ ಬಂದ ಹಣವನ್ನೆಲ್ಲಾ ಇಡಿ ಇಡಿಯಾಗಿ ನುಂಗಿ ನೀರು ಕುಡಿದವರು. ಹಾಗಾದರೆ ಈಗೇಕೆ ಈ ಗುಲ್ಲು? ಇವರಿಗೆ ನಿಜವಾಗಿಯೂ ಉತ್ತರ ಕರ್ನಾಟಕದ ಅಭಿವೃದ್ಧಿಯ ಕಾಳಜಿ ಇದೆಯೇ? ಖಂಡಿತ ಕಾಳಜಿ ಇಲ್ಲ. ತಮ್ಮ ಮೋಸದ ಹೂರಣ ಬಯಲಿಗೆ ಬರಬಾರದು. ಬಂದರೂ ಜನ ಈ ಕಡೆ ನೋಡಬಾರದೆನ್ನುವ ಸಲುವಾಗಿ 'ಪ್ರತ್ಯೇಕತೆ'ಯ ಕೂಗೆಬ್ಬಿಸತೊಡಗಿದ್ದರು.

ಶರಣ ನಾಡಿನಲ್ಲೇ ಶರಣ ತತ್ವ ವಧೆಯ ಕುತಂತ್ರಗಳು

12ನೇ ಶತಮಾನವು ಮನುಕುಲಕ್ಕೆ ಹೊಸ ಬೆಳಕಿನ ಕಿರಣಗಳನ್ನು ಪರಿಚಯಿಸಿದ ಶತಮಾನ. ದುಡಿವ ಜನತೆಯನ್ನು ಅನುಭವ ಮಂಟಪಕ್ಕೆ ಕರೆತಂದು ಚಿಂತನ-ಮಂಥನಗಳಿಗೆ ಚಾಲನೆ ನೀಡಿದ ದಿನಗಳವು. ನವ ಸಮಾಜದ ನಿರ್ಮಾಣಕ್ಕೆ ತುಡಿದ-ಮಿಡಿದ ಮನಸ್ಸುಗಳು ಅಲ್ಲಿದ್ದವು. ಅರಿವಿನ ಲೋಕದ ಬಾಗಿಲು ತೆರೆದು ಸಮತೆಯ ನಕ್ಷತ್ರವನ್ನು ಹುಡುಕತೊಡಗಿದ ಮತ್ತು ಅಂಥದೊಂದು ಸುಂದರ-ಸಮಾನತೆಯ ದಿನ ಬರುವುದಕ್ಕಾಗಿ ಎಂಥ ತ್ಯಾಗ ಬಲಿದಾನಕ್ಕೂ ಸಿದ್ಧವಾಗಿದ್ದ ಶರಣಾದಿ ಪ್ರಮಥ(ಶ್ರಮ ಜೀವಿಗಳ) ರು 'ವೈದಿಕ ತತ್ವವನ್ನು, ಮನುವಾದವನ್ನು ಧಿಕ್ಕರಿಸಿದ್ದರು. ಶೋಷಣೆಯ ಸಮಾಜದ ವಿರುದ್ಧ ಚಳುವಳಿಯ ಗಂಟೆ ಮೊಳಗಿಸಿದ್ದರು. ಕಂಡ ದೇವರಿಗೆ ಕೈ ಮುಗಿದವರನ್ನು ಭಂಡರೆಂದು ಕರೆದರು. ಹೆಣ್ಣು ಕೀಳು, ಗಂಡು ಶ್ರೇಷ್ಠವೆಂದು ಭೇದ ಮಾಡುವುದನ್ನು ಖಂಡ-ತುಂಡವಾಗಿ ಖಂಡಿಸಿದರು. ಚಾತುರ್ವರ್ಣ್ಯ ವ್ಯವಸ್ಥೆಯನ್ನು ಕಾಲಲ್ಲಿ ಹೊಸಕಿ ಮನುಕುಲದ ಕಹಳೆ ಊದಿದರು.

> **ಚರಿತ್ರೆಯನ್ನು ತಿರುಚಿ ಇಲ್ಲಿನ ಜಮೀನ್ದಾರಿ ಶಕ್ತಿಗಳು ಮೊದಲು ಮಾಡಿರುವ ಕೆಲಸವೆಂದರೆ ಬಸವಣ್ಣನನ್ನೇ ಒಂದು ಕಲ್ಲು ಮೂರ್ತಿಯಾಗಿಸಿ ಗುಡಿ ಕಟ್ಟಿದರು. ಬಸವಾದಿ ಶರಣರು ಧಿಕ್ಕರಿಸಿದ ವೈದಿಕ ತತ್ವವನ್ನು ಮತ್ತೆ ಪುನರುಜ್ಜೀವಿಸಿದರು. ಇವನಾರವ ಇವನಾರವ ಎನ್ನದಿರಯ್ಯ ಇವ ನಮ್ಮವ ಅನ್ನಿ ಎಂದು ಶರಣರು ಹೇಳಿರುವುದನ್ನು ಮೂಲೆಗೆ ತಳ್ಳಿ ಲಿಂಗಾಯಿತರನ್ನೆಲ್ಲ ಬಸವ ದಳದ ಹೆಸರಿನಲ್ಲಿ ಏಕೀಕರಿಸಿ ಕೋಮುವಾದಿ ತತ್ವಗಳನ್ನು ಜಾರಿಗೊಳಿಸತೊಡಗಿದರು.**

ಇಂತಹ ಅಮೋಘ ಚರಿತ್ರೆಯನ್ನು ತಿರುಚಿ ಇಲ್ಲಿನ ಜಮೀನ್ದಾರಿ ಶಕ್ತಿಗಳು ಮೊದಲು ಮಾಡಿರುವ ಕೆಲಸವೆಂದರೆ ಬಸವಣ್ಣನನ್ನೇ ಒಂದು ಕಲ್ಲು ಮೂರ್ತಿಯಾಗಿಸಿ ಗುಡಿ ಕಟ್ಟಿದರು. ಬಸವಾದಿ ಶರಣರು ಧಿಕ್ಕರಿಸಿದ ವೈದಿಕ ತತ್ವವನ್ನು ಮತ್ತೆ ಪುನರುಜ್ಜೀವಿಸಿದರು. ಇವನಾರವ ಇವನಾರವ ಎನ್ನದಿರಯ್ಯ ಇವ ನಮ್ಮವ ಅನ್ನಿ ಎಂದು ಶರಣರು ಹೇಳಿರುವುದನ್ನು ಮೂಲೆಗೆ ತಳ್ಳಿ ಲಿಂಗಾಯಿತರನ್ನೆಲ್ಲ ಬಸವ ದಳದ ಹೆಸರಿನಲ್ಲಿ ಏಕೀಕರಿಸಿ ಕೋಮುವಾದಿ ತತ್ವಗಳನ್ನು ಜಾರಿಗೊಳಿಸತೊಡಗಿದರು. ಎಚ್.ಎಸ್.ಶಿವಪ್ರಕಾಶ್ ಬರೆದ 'ಮಹಾಚೈತ್ರ' ರದ್ದು ಮಾಡಬೇಕೆಂಬ ಬೇಡಿಕೆ ಇಟ್ಟು ಲಿಂಗಾಯಿತರನ್ನೆಲ್ಲಾ ಪ್ರಚೋದಿಸಿದರು. ಭಾವೋದ್ರೇಕಗಳಿಗೊಳಗಾದ ಸಾಮಾನ್ಯರೂ ಈ ಹೋರಾಟದಲ್ಲಿ ಪಾಲ್ಗೊಂಡರು. ಇದರಿಂದ ಸಾಧಿಸಿದ್ದೇನು? ಶರಣ ತತ್ವದ ವಧೆ ಮತ್ತು ತನ್ಮೂಲಕ ತಮ್ಮ ಮೋಸದ ವ್ಯವಹಾರಗಳನ್ನು ಮುಚ್ಚಿಕೊಳ್ಳುವ ತಂತ್ರ. ಅಲ್ಲದೆ ಇಂಥವುಗಳ ಮೂಲಕ ಜನರ ನಡುವೆ ಕಷ್ಟಪಡದೆ ಕೋಮುವಾದಿ ಭಾವನೆಗಳನ್ನು ಹುಟ್ಟುಹಾಕುವುದು. ಈ ಕುಟಿಲ ಕಾರಸ್ಥಾನ ಕೇವಲ ಮೇಲ್ಜಾತಿಗಳಲ್ಲಿ ಮಾತ್ರವಲ್ಲ ಕೆಳಜಾತಿಗಳಲ್ಲೂ ಇಂಥ ಪ್ರತಿಗಾಮಿ ವಿಷ ಹರಡಿಸುವ ಕಾರ್ಯ ನಡೆಸುತ್ತಿದ್ದಾರೆ. ಬೊಂಬಾಯಿಯಲ್ಲಿ ಅಂಬೇಡ್ಕರ್ ಪುತ್ಥಳಿಗೆ ಯಾರೋ ದುಷ್ಕರ್ಮಿಗಳು ಅವಮಾನ ಮಾಡಿದರೆ ಕೂಡಲೇ ಗುಲಬರ್ಗದಲ್ಲಿ ದಲಿತರ ಚಳುವಳಿ ಪ್ರಾರಂಭವಾಗುತ್ತದೆ. ಇದ್ದಕ್ಕಿದ್ದಂತೆ 'ಧರ್ಮಕಾರಣ' ಪುಸ್ತಕ ರದ್ದಾಗಿಸಬೇಕೆಂಬ ಚಳುವಳಿಗೆ ಕಾವೇರುತ್ತದೆ. ಆದರೆ ಮಾತೆ ಮಹಾದೇವಿಯು ಕೂಡಲಸಂಗಮ ಅಂಕಿತ ನಾಮ ಹೊಡೆದು ಹಾಕಿ 'ಲಿಂಗದೇವ' ಎಂದು ಬದಲಾಯಿಸಿದರೂ ಅವರ ವಿರುದ್ಧ ಪ್ರತಿಭಟನೆಗೆ ಬಿಸಿಯೇ ಬರುವುದಿಲ್ಲ!! ಹೇಗಿದೆ ನೋಡಿ ಇವರ ಬಸವ ತತ್ವ ಪ್ರೀತಿ!?

ಅಷ್ಟೇ ಅಲ್ಲ, ಗುಲಬರ್ಗದಲ್ಲೊಂದು ಗುಲಬರ್ಗ ವಿಶ್ವ ವಿದ್ಯಾಲಯವಿದೆ. 1996 ರ ಸಂಸತ್ ಚುನಾವಣೆ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ವೀರಶೈವರರೊಳಗಿನ ಕೆಲವರು ಸಂಘಟಿತರಾಗಿ ಗುಲಬರ್ಗಾ ವಿ.ವಿ.ಗೆ ಬಸವಣ್ಣನ ಹೆಸರಿಡಬೇಕೆಂಬ ಚಳುವಳಿ ಧಿಢೀರಂತ ಎದ್ದು ಬಂದಿತು. ಲಿಂಗವಂತರ ಓಟೆಲ್ಲಾ ಸಂಘ ಪರಿವಾರದ ರಾಜಕೀಯ ಪಕ್ಷದ ಮಡಿಲಿಗೆ ಹಾಕಿಸುವ ಒಪ್ಪಂದ ಮಾಡಿಕೊಂಡ ಮಾತೆ ಮಹಾದೇವಿಗೆ ಇದ್ದಕ್ಕಿದ್ದಂತೆ ವಿ.ವಿ.ಯ ಕಲ್ಲು ಮಣ್ಣಿನ ಗೋಡೆಗೆ ಬಸವಣ್ಣನ ಹೆಸರು ಇಟ್ಟು ಪುನೀತಳಾಗುವ ಭಕ್ತಿ ಉಕ್ಕಿ ಹರಿದು ಚಳುವಳಿಗೆ ಲೀಡರ್‌ಶಿಪ್ ಕೊಟ್ಟಳು. ಈ ಚಳುವಳಿಯ ಅಂತರಂಗದಲ್ಲಿ ಕೋಮು ಮನಸಿನ ಪಾಳೇಗಾರಿ ಲಿಂಗವಂತರ ಬೆಂಬಲವಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಅಂತರಂಗದ ಮರ್ಮ ಏದುರು ಪಕ್ಷವಾದ ಜನತಾದೊಳಗಿನ ಬಂಡವಾಳಿಗ-ಜಮಿನ್ದಾರಿಗಳು ಅರಿತು ಪ್ರತ್ಯಸ್ತ್ರ ಚಲಾಯಿಸಿದರು, ಆ ಮಾತು ಬೇರೆ. ಅಂಬೇಡ್ಕರ್ ಹೆಸರಿಡಬೇಕೆಂದು ಅತ್ತ ದಲಿತ ಚಳುವಳಿಯೂ ಶುರುವಾಯಿತು.

ಕಳೆದೆರಡು ವರ್ಷಗಳ ಹಿಂದೆ ಸಂಘ ಪರಿವಾರದ ಆಜುಬಾಜು ಇರುವ ಸಂಘ-ಸಂಸ್ಥೆಗಳು ವಿಕೃತ ಬುದ್ದಿಯ ಭಂಡರುಗಳೆಲ್ಲ ಸೇರಿಕೊಂಡು ಹೈದರಾಬಾದ ಕರ್ನಾಟಕದ ವಿಮೋಚನೆಯ ಆಚರಣೆ ಮಾಡಲು ಹೊರಟರು. ಹೈದರಾಬಾದ್ ಸಂಸ್ಥಾನದ ವಿಲೀನೀಕರಣವನ್ನು 'ವಿಮೋಚನೆ' ಎಂದು ಉಚ್ಚರಿಸುವ, ತಿರುಚುವ ಮೂಲಕ ಹಿಂದೂಗಳೊಳಗೆ ಕೋಮು ಕಿಚ್ಚು ಜ್ವಲಿಸುವಂತೆ ಮಾಡುವ ಹುನ್ನಾರ ಈ ಉದ್ದೇಶದೊಳಗೆ ಅಡಗಿತ್ತು. ಪ್ರತೀ ಸೆಪ್ಟೆಂಬರ್ 18 ಬಂತೆಂದರೆ ಜನರ ಭಾವನೆ ಕೆರಳಿಸಿ ಜನಾಂಗೀಯ ಭಾವ ಹುಟ್ಟು ಹಾಕಲು ಅವಿರತ ಪ್ರಯತ್ನ ಇದೇ ಪಾಳೇಗಾರಿ ಪ್ರಭುಗಳು ಅವಿಶ್ರಾಂತವಾಗಿ ಮಾಡಲು ಸಜ್ಜಾಗಿ ನಿಂತಿರುತ್ತಾರೆ.

ಹೀಗೆ ವರ್ಷದುದ್ದಕ್ಕೂ ಒಂದಿಲ್ಲ ಒಂದು ಭಾವನಾತ್ಮಕ ಮತ್ತು ಪ್ರಚೋದನಾತ್ಮಕ ಸಂಗತಿಗಳನ್ನು ಕೈಗೆತ್ತಿಕೊಂಡು ಪ್ರಚಾರ ಚಳುವಳಿ ನಡೆಸುವ ಈ ಧಣಿಗಳು, ಒಮ್ಮೆಯಾದರೂ ತೊಗರಿಗೆ ಬೆಂಬಲ ಬೆಲೆ ಬೇಕೆಂದು ಕೇಳುವುದಿಲ್ಲ. ಒಟ್ಟು ಜಿಲ್ಲೆಯ ನೂರಾರು ಹಳ್ಳಿಗಳಿಗೆ ಕುಡಿವ ನೀರು,ರಸ್ತೆ, ಶಾಲೆ ಬೇಕೆಂದು ಚಳುವಳಿ ನಡೆಸುವುದಿಲ್ಲ. ನೀರಾವರಿ ಯೋಜನೆಗಳಿಗೆ ಹಣ ಕೊಡಿ ಎಂಬ ಮಾತಂತೂ ಇವರು ಆಡುವುದೇ ಇಲ್ಲ.

ಬದಲಿಗೆ ಇವರು ಮಾಡುವ ಕೆಲಸವೇನು.....? ಒಂದೋ ತಾವಂತು ಜನತೆಯ ಪರವಾಗಿ ಒಂದೇ ಒಂದು ಮಾತಾಡುವುದಿಲ್ಲ. ಆದರೆ ಜನತೆಯನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ, ದಿನ ನಿತ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ನಾಗರೀಕ ಸೌಲಭ್ಯಗಳಿಗಾಗಿ-ನಿಜವಾದ ಅಭಿವೃದ್ಧಿಗಾಗಿ ದನಿ ಎತ್ತುವವರ ವಿರುದ್ಧ ಅತ್ಯಂತ ವ್ಯವಸ್ಥಿತವಾಗಿ ಅಪಪ್ರಚಾರದ ಕೆಲಸ ಮಾಡುವುದೂ ಈ ಜಮೀನ್ದಾರಿ-ಪಾಳೇಗಾರಿ ಧಣಿಗಳೇ. ಒಂದು ಗ್ರಾಮದಲ್ಲಿ ರೈತರೆಲ್ಲ ಒಂದಾಗಿ ಸಂಘ ಕಟ್ಟಿಕೊಂಡು ತೊಗರಿಗೆ ಬೆಂಬಲ ಬೆಲೆ ಬೇಕು ಎಂಬ ಚಳುವಳಿ ಮಾಡಿದ ಕೂಡಲೇ ಈ ಧಣಿಯು ತಾನೇ ಅಡತಿ ಬಜಾರಿನಲ್ಲಿ ತೊಗರಿ ಖರೀದಿಯ ಬೆಲೆಯನ್ನು ಕಡಿಮೆ ಮಾಡಿರುತ್ತಾನೆ; ಆದರೆ ಗ್ರಾಮದ ರೈತ ಸಂಘದ ಒಬ್ಬಿಬ್ಬರನ್ನು (ಹೊಸಬರನ್ನು) ಕರೆದು 'ನೋಡಿ ರೈತ ಸಂಘ ಚಳುವಳಿ ಮಾಡಿರುವುದಕ್ಕೆ ನಿಮ್ಮಿಂದ ಖರೀದಿಸುವ ತೊಗರಿಯ ಬೆಲೆ ಇಳಿದಿದೆ" ಎಂಬ ಅಪಪ್ರಚಾರದ ಕೆಲಸ ಮಾಡಿರುತ್ತಾನೆ. ಅಂದರೆ ಅತ್ಯಂತ ವ್ಯವಸ್ಥಿತವಾಗಿ ಜನತೆಯ ಸಂಘಟಿತ ಶಕ್ತಿಯನ್ನು ಮುರಿಯುವುದು ಮತ್ತು ಎಂದಿಗೂ ಒಗ್ಗಟ್ಟಾಗದಂತೆ ಇತರೆ ಪ್ರತಿಗಾಮಿ, ಕೋಮುವಾದಿ ದಿಕ್ಕಿಗೆ ಎಳೆಯುವುದು - ಈ ಧಣಿಗಳ ದಿನನಿತ್ಯದ ಕಾಯಕ ಕಲ್ಬುರ್ಗಿ ಜಿಲ್ಲೆಯಲ್ಲಿ ನಡೆಯುತ್ತಿರುತ್ತದೆ.

ಬದುಕುವ ಹಕ್ಕಿಗಾಗಿ ಸಿಡಿದ ಕಿಡಿಗಳು

ಆದರೆ ಪಾಳೇಗಾರಿ-ಜಮೀನ್ದಾರಿ ಪ್ರಭುಗಳ ಈ ಅಟ್ಟಹಾಸವನ್ನು ಮೆಟ್ಟಿ-ಮೀರಿ ಎಲ್ಲಾ ತರದ ಗುಲಾಮಗಿರಿಯ ಶೃಂಖಲೆಗಳನ್ನು ತುಂಡರಿಸಿ ಆಕಾಶಕ್ಕೆ ಚಿಮ್ಮಿದ ಅನೇಕ ಹೋರಾಟಗಳೂ ಗುಲಬರ್ಗ ಜಿಲ್ಲೆಯಲ್ಲಿ ನಡೆದಿವೆ. ಧಣಿಗಳ ಕುತಂತ್ರಗಳನ್ನು ಬಯಲುಗೊಳಿಸಿ ಸತ್ಯದ ಬೆಳಕಿಗೆ ದಿಕ್ಕು ತೆರೆದಿವೆ.

ಪ್ರಮುಖವಾಗಿ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಿಗೆ ಸರಕಾರ ಹಣ ಒದಗಿಸಬೇಕು ಮತ್ತು ತೀವ್ರವಾಗಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಬೇಕೆಂದು ಧೀರೋದಾತ್ತ ಚಳುವಳಿ ಪ್ರಾಂತ ರೈತ ಸಂಘದಿಂದ ನಡೆದಿದೆ. ಈ ಹೋರಾಟಕ್ಕೆ ದೀರ್ಘವಾದ ಧೀರ ಸಂಗ್ರಾಮದ ಭೂಮಿಕೆ ಸಜ್ಜುಗೊಳಿಸಿ ಚಳುವಳಿಗಳನ್ನು ಸಂಘಟಿಸಿರುವುದಕ್ಕೆ ಜಿಲ್ಲೆಯಲ್ಲಿ 5 ಲಕ್ಷ ಎಕರೆ ಭೂಮಿಯಾದರೂ ನೀರಾವರಿಯಾಗಿದೆ.

ಚೌಕಿ ಥಾಂಡಾದಲ್ಲಿ ಬಡ ರೈತರು ಅನೇಕ ವರ್ಷಗಳಿಂದ ತಾವು ಉತ್ತಿ ಬಿತ್ತಿ ಬೆಳೆಯುತ್ತಿರುವ ಭೂಮಿಯನ್ನು ಅರಣ್ಯಅಧಿಕಾರಿಗಳು ಕಿತ್ತುಕೊಳ್ಳಲು ಬಂದಾಗ ಜೀವದ ಹಂಗು ತೊರೆದು ಹೋರಾಡಿ ಭೂಮಿಯನ್ನು ದಕ್ಕಿಸಿಕೊಂಡ ಹೋರಾಟವೂ ನಡೆದಿದೆ.

ಚಂದಾಪುರದಲ್ಲಿನ ನಿವೇಶನ ರಹಿತ ಬಡಜನರಿಗೆ ಹಂಚಬೇಕಾದ ಆಶ್ರಯ ಮನೆಗಳು ಸಿರಿವಂತರ ಹೆಸರಲ್ಲಿ ಬಂದಾಗ, ರೊಚ್ಚಿಗೆದ್ದ ಬಡಜನತೆ ಸರಕಾರಿ ಆಶ್ರಯ ಮನೆಗಳನ್ನು ಕಬ್ಜಾ ಮಾಡಿ, ಹಕ್ಕು ಪತ್ರಕ್ಕಾಗಿ ಹೋರಾಡಿ ಗೆದ್ದ ಘಟನೆಯೂ ಇಲ್ಲಿ ಈ ಜಿಲ್ಲೆಯಲ್ಲಿ ಆಗಿ ಹೋಗಿದೆ.

ಮಡಕೆಯಲ್ಲಿ ಮನೆಯಿಲ್ಲದವರಿಗೆ ಮನೆಗಳನ್ನು ಕೊಡಬೇಕೆಂಬ ಚಳುವಳಿ ದಿನ ಕಳೆದಂತೆ ಕಾವೇರಿ - ಎದುರಿನವರ ಎದೆ ನಡುಗಿಸಿದಾಗ ಸರಕಾರವು ಮಠದ ಜಾಗವನ್ನೇ ಪಡೆದು ಹಂಚಿದ ಪ್ರಸಂಗಗಳು ಜನರನ್ನು 'ನ್ಯಾಯಕ್ಕಾಗಿ ಹೋರಾಟ' ದೆಡೆಗೆ ಗಟ್ಟಿಗೊಳಿಸಿವೆ.

'ತೊಗರಿ ಬೋರ್ಡ್' ರಚಿಸಬೇಕು. ಬೆಂಬಲ ಬೆಲೆ ಕೊಡಬೇಕು. ತೊಗರಿ ಬೆಳೆ ನಾಶವಾಗಿರುವುದಕ್ಕೆ ಪರಿಹಾರ ಧನಕ್ಕೆ ಒತ್ತಾಯಿಸಿ ನಡೆಸಿದ ವಿರೋಚಿತ ಹೋರಾಟಗಳು, ಪಾಳೇಗಾರಿ ಅಧಿಕಾರಶಾಹಿ ಪ್ರಭುಗಳ ಎದೆಗುಂಡಿಗೆಯಲ್ಲಿ ಭಯ ಹೊಕ್ಕಿಸಿದೆ. ಐದು ವರ್ಷದ ಹಿಂದಿನ ಕಾಂಗ್ರೆಸ್ ಸರಕಾರದ ಮಂತ್ರಿ ಮಹಾನ್ಯರುಗಳಿಗೆ ಸಿಂಹ ಸ್ವಪ್ನವಾಗಿದ್ದರು ಚಳುವಳಿಗಾರರು. ಚಳುವಳಿಯ ಪ್ರಖರತೆಗೆ ಮಣಿದ ಕಾಂಗ್ರೆಸ್ ಸರಕಾರ 3 ಕೋಟಿ ಪರಿಹಾರಧನ ಕೊಡಬೇಕಾಯಿತು. ತೊಗರಿ ಬೆಂಬಲ ಬೆಲೆಗೆ ಒತ್ತಾಯಿಸಿ ನಡೆಸಿದ 'ಗುಲಬರ್ಗ ಬಂದ್' ಹೋರಾಟದ ಪರಂಪರೆಯಲ್ಲಿ ಪ್ರಮುಖವಾದದ್ದು.

ಹೀಗೆ ಜಿಲ್ಲೆಯುದ್ದಕ್ಕೂ ಹತ್ತು ಹಲವು ಹೋರಾಟಗಳು ಸಿಡಿದು ಬಂದಿವೆ. ರೇಷನ್ ಕಾರ್ಡ್‌ಗಾಗಿ, ನೀರು-ರಸ್ತೆಗಾಗಿ, ಭೂಮಿ-ನೀರಾವರಿಗಾಗಿ, ಒಂದೇ ಎರಡೇ..... ವರ್ಷದುದ್ದಕ್ಕೂ ಬಡರೈತರನ್ನು ಸಂಘಟಿಸುವ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಆದರೆ ಗೇಣು ಹೊಟ್ಟೆಗಾಗಿ ಊರೂರು ಅಲೆಯುವ ಕೃಷಿ ಕಾರ್ಮಿಕರನ್ನು ಸಂಘಟಿಸಬೇಕಾದ ಹೊಣೆಯೂ ಪ್ರಜ್ಞಾವಂತರ ಹೆಗಲ ಮೇಲಿದೆ. ಒಟ್ಟು ಶ್ರಮಜೀವಿ ಸಮುದಾಯವನ್ನು ಸಂಘಟಿಸುವ ಪ್ರಕ್ರಿಯೆಯೊಂದಿಗೆ ನಡೆಯಬೇಕಾದ ಗಂಭೀರ ಕಾಳಜಿ ಇದು. ಹೀಗಾದಾಗ ಮಾತ್ರ ಗುಲಬರ್ಗ ಜಿಲ್ಲೆಯನ್ನು ಕೋಮುವಾದಿಗಳ ಕಪಿಮುಷ್ಟಿಯಿಂದ, ಧಣಿಗಳ ಅಟ್ಟಹಾಸದಿಂದ ವಿಮುಕ್ತಗೊಳಿಸಲು ಸಾಧ್ಯ. ಅಂಥದ್ದೊಂದು ದಿನಕ್ಕಾಗಿ ಹೃದಯದ ಹಣತಿಯೊಳಗೆ ಕಾರ್ಯಮುಖತೆಯ ದೀಪ ಬೆಳಗಿಸೋಣ.

ಕಣ್ಣೂರು ಗಲಭೆಗಳ ಹಿಂದೆ....

EKN ರಾಜನ್-ಮೆಲ್ಬ್ಣೋರ್

ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಪರಿಶ್ರಮದ ಫಲವಾಗಿ ಕಣ್ಣೂರಿನ ಅಶಾಂತವಾದ ಪರಿಸ್ಥಿತಿ ಬದಲಾಗಿದೆ. ಶಾಂತಿ ನೆಲೆಯೂರಲು ಎಲ್ಲಾ ರೀತಿಯಲ್ಲಿ ಸಹಕರಿಸುವ ನಿಲುಮೆಯನ್ನು ಸಿಪಿಐ(ಎಂ) ಪಕ್ಷ ತೆಗೆದುಕೊಂಡಿದೆ. ಕಣ್ಣೂರಿನಲ್ಲಿ ನಡೆದ ಎಲ್ಲಾ ಪಕ್ಷಗಳ ಶಾಂತಿ ಸಭೆಯಲ್ಲಿ ಪರಸ್ಪರ ಟೀಕೆಟಿಪ್ಪಣಿ ಮಾಡದೆ ಕಣ್ಣೂರಿನಲ್ಲಿ ಶಾಂತಿ ನೆಲೆಯೂರಿಸಲು ಎಲ್ಲಾ ರೀತಿಯಲ್ಲಿ ಸಂಪೂರ್ಣ ಬೆಂಬಲ ಕೊಡಲು ಪಕ್ಷ ತಯಾರಾಗಿದೆ.

ಶಾಂತಿ ಮತ್ತು ಸೌಹಾರ್ದಪೂರ್ಣವಾದ ಪರಿಸ್ಥಿತಿಯಲ್ಲಿ ರಾಜಕೀಯ ಕೆಲಸ ಮಾಡಲು ಆಗ್ರಹಿಸುವ ಪಕ್ಷವಾಗಿದೆ ಸಿಪಿಐ(ಎಂ). ಕೊಲೆ ನಡೆಸಿ, ಜನರ ಬೆಂಬಲ ಹೆಚ್ಚು ಮಾಡಿಕೊಳ್ಳುತ್ತೇವೆ ಎಂದು ತಿಳಿದು ಕೊಂಡಿರುವ ಚಳುವಳಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ. ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಕೊಂದು ಕಮ್ಯುನಿಸ್ಟ್ ಚಳುವಳಿಯನ್ನು ಸರ್ವನಾಶ ಮಾಡಬಹುದು ಎಂಬ ವ್ಯಾಮೋಹವಿಟ್ಟುಕೊಂಡು ಹಲವರು ಹಲವಾರು ಸಂದರ್ಭಗಳಲ್ಲಿ ಕಣ್ಣೂರಿನಲ್ಲಿ ಕಾಣಿಸಿಕೊಂಡಿದ್ದರು. ಕಮ್ಯುನಿಸ್ಟ್‌ನಾಗಿರುವ ಒಂದೇ ಕಾರಣದಿಂದ ಹಲವು ಸಂಗಾತಿಗಳನ್ನು ಪೈಶಾಚಿಕವಾಗಿ ಹಲವ ಸಂದಭ4ಗಳಲ್ಲಿ ಕೊಲೆ ಮಾಡಲಾಗಿದೆ. ಈ ಕಾರ್ಯಗಳಿಗಾಗಿ ಒಂದು ಪಡೆಯನ್ನು ಕಮ್ಯುನಿಸ್ಟ್ ವಿರೋಧಿಗಳು ತಯಾರು ಮಾಡಿದ ಸಂದರ್ಭವಿತ್ತು. ನ್ಯಾಯಾಂಗ ಬಂಧನದಲ್ಲಿರುವ ಕಮ್ಯುನಿಸ್ಟ್ ಕಾರ್ಯಕರ್ತರನ್ನು ನಕಲಿ ಜಾಮೀನಿನಲ್ಲಿ ಬಿಡಿಸಿ ಗುಂಡಿಟ್ಟು ಕೊಲೆ ಮಾಡಿರುವ ದುರ್ಘಟನೆಗಳನ್ನು ಹಾಗೂ ಕಮ್ಯುನಿಸ್ಟರನ್ನು ಬಹಿಷ್ಕಾರ ಮಾಡಿರುವುದನ್ನು ಎದುರಿಸಿಯೇ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳೆದುಬಂದಿದೆ. ಈ ನಡುವೆ ಸಾಮರ್ಥ್ಯವಂತರಾದ ಹಲವಾರು ಕಮ್ಯುನಿಸ್ಟ್ ಕಾರ್ಯಕರ್ತರು ಹಾಗೂ ಮುಖಂಡರು ಹುತಾತ್ಮರಾಗಿರುತ್ತಾರೆ. ಸ್ವತಂತ್ರ ಹೋರಾಟದ ಕಾಲದಲ್ಲಿಯೂ ಆ ನಂತರವೂ ಆಡಳಿತವನ್ನು ಕೈಯಲ್ಲಿಟ್ಟುಕೊಂಡ ಕಾಂಗ್ರೆಸ್ ಕೂಡ ಕಮ್ಯುನಿಸ್ಟರನ್ನು ಮುಖ್ಯ ಶತ್ರುವಾಗಿ ಕಂಡಿರುತ್ತಾರೆ. ಪಕ್ಷವನ್ನು ಸಂಪೂರ್ಣವಾಗಿ ನಿರ್ಮೂಲನೆ ಾಮಡುವ ಸಾರ್ವಜನಿಕ ಧೋರಣೆಯನ್ನು ಒಂದು ಕಾಲದಲ್ಲಿ ಕಾಂಗ್ರೆಸ್‌ನವರು ಅಂಗೀಕರಿಸಿದ್ದರು. "ನಾವು ಕಮ್ಯುನಿಸ್ಟರನ್ನುಹೊಡೆದು ಇಲ್ಲದಂತೆ ಮಾಡಿದ್ದೇವೆ. ಇನ್ನು ಕೆಂಬಾವುಟ ಇಲ್ಲ" ಎಂದು ಕಾಂಗ್ರೆಸ್ ನಾಯಕರು ಅಹಂಕಾರದಲ್ಲಿ ಹೇಳಿಕೊಂಡಿದ್ದರು.

ಆದರೆ ಇಂದು ಕಾಂಗ್ರೆಸ್ ಹಲ್ಲು ಕಳೆದುಕೊಂಡಂತಾಗಿದೆ. ಹಳೆಯ ಪಡೆಯಾಗಲೀ, ಹೊಸ ಕಾರ್ಯಕರ್ತರಾಗಲಿ ಎದ್ದು ನಿಲ್ಲಲು ಕಾಂಗ್ರೆಸ್ ಶಕ್ತಿರಹಿತವಾಗಿದೆ. ಇವರಿಗೆ ಬದಲಾಗಿ ಇಂದು ಕಮ್ಯುನಿಸ್ಟ್ ಪಕ್ಷವನ್ನು ಇಲ್ಲವಾಗಿಸಲು ಹೊರಟಿರುವವರು ಆರ್.ಎಸ್.ಎಸ್. ನವರು. ಕಳೆದ ಮೂರು ದಶಕಗಳಿಂದ ಕೇರಳದಲ್ಲಿ ವಿಶೇಷವಾಗಿ ಉತ್ತರ ತಲ್ಲಚೇರಿ ಪ್ರದೇಶಗಳಲ್ಲಿ ಆರ್.ಎಸ್.ಎಸ್. ಮಾಡುವ ಕೆಲಸ ಸಿಪಿಐ(ಎಂ) ನ್ನು ನಿರ್ಮೂಲನ ಮಾಡುವ ಪ್ರಯತ್ನ. ಮೊದಲು ಕಾಂಗ್ರೆಸ್‌ಗೆ ಕೊಟ್ಟ ಪ್ರಚಾರವನ್ನೇ ಇಂದು ಮಾರ್ಕ್ಸಿಸ್ಟ್ ವಿರೋಧಿ ಪ್ರಸಾರ ಮಾಧ್ಯಮಗಳು ಆರ್.ಎಸ್.ಎಸ್. ಗೆ ಕೊಡುತ್ತಿವೆ. ಈ ಕೇರಳವನ್ನು ಹಿಂದೂ ಮತಾಂಧ ಶಕ್ತಿಗಳ ಆಟದ ಮೈದಾನವಾಗಿ ಮಾರ್ಪಾಡು ಮಾಡಲು ಸಂಘ ಪರಿವಾರದ ನಿಗೂಢ ಯೋಜನೆ ತಲ್ಲಚೇರಿಯಿಂದ ಆರಂಭವಾಗಿದೆ. ಇದನ್ನು ತಿಳಿದೂ ತಿಳಿಯದಂತೆ ಕೆಲವು ಮಾಧ್ಯಮಗಳು, ಕಾಂಗ್ರೆಸ್ ಹಾಗೂ ಇತರೆ ಆತರದ ಕೆಲವು ರಾಜಕೀಯ ಪಕ್ಷಗಳು ಮಾರ್ಕ್ಸಿಸ್ಟ್ ವಿರೋಧ ವಿಷವನ್ನು ಹರಡುತ್ತಿರುವುದಗು ವಿಷಾದಕರ ಸಂಗತಿಯಾಗಿದೆ.

ತಲ್ಲಚೇರಿಯಲ್ಲಿ ಸಿಪಿಐ(ಎಂ) ಹಾಗೂ ಆರ್.ಎಸ್.ಎಸ್. ನಡುವೆ ಘರ್ಷಣೆಗಳು ನಡೆಯುತ್ತಿವೆ ಎಂದು ಕೆಲವು ಮಾಧ್ಯಮಗಳು ಪ್ರಚಾರ ನಡೆಸುತ್ತಿರುವುದು ಸತ್ಯಕ್ಕೆ ದೂರವಾಗಿದೆ. ಜನರ ಬಗ್ಗೆ ಹಾಗೂ ರಾಯದ ಬಗ್ಗೆ ಜವಾಬ್ದಾರಿ ಇಲ್ಲದಂತಹ ಕೆಲವು ಸಮಾಜಘಾತುಕರ ಒಂದು ಸಂಘದ ನಿರಂತರವಾದ ಆಕ್ರಮಣಗಳಿಗೆ ತಲ್ಲಚೇರಿಯಲ್ಲ ಸಿಪಿಐ(ಎಂ) ಬಲಿಯಾಗಿದೆ. ಸಿಪಿಐ(ಎಂ) ಕಾರ್ಯಕರ್ತರು ಮಾತ್ರವಲ್ಲ, ಯಾವುದೇ ಪಕ್ಷಕ್ಕೆ ಸೇರದವರನ್ನು ಇತರೆ ಕೆಲವು ರಾಜಕೀಯ ಪಕ್ಷದವರನ್ನು ಆರ್.ಎಸ್.ಎಸ್. ನವರು ಕೊಲೆ ಮಾಡಿರುತ್ತಾರೆ. ಆದರೆ ಮಾರ್ಕ್ಸಿಸ್ಟ್ ವಿರೋಧವನ್ನು ತಲೆಯಲ್ಲಿಟ್ಟುಕೊಂಡ ಕಾಂಗ್ರೆಸ್ ಮುಖಂಡರು ಹಾಗೂ ಅವರ ಬೆಂಬಲಿತ ಮಾಧ್ಯಮಗಳು ಈ ಸತ್ಯವನ್ನು ತಿಳಿಯದೆ ಆರ್.ಎಸ್.ಎಸ್.ಗಿಂತ ಸಿಪಿಐ(ಎಂ) ಭೀಕರವೆಂದು ಪ್ರಚಾರ ಮಾಡುತ್ತಿದ್ದಾರೆ. ಕಣ್ಣೂರು ಜಿಲ್ಲೆಯಲ್ಲಿರುವ ತಲ್ಲಚೇರಿಯಲ್ಲಿ ಈಗ ನಡೆಯುತ್ತಿರುವ ಘರ್ಷಣೆಗಳ ಬಗ್ಗೆ ಸ್ವಲ್ಪ ಹಿಂದಕ್ಕೆ ಯೋಚಿಸಿ ನೋಡಬೇಕಾಗಿದೆ. ಅವಿಭಜಿತ ಕಣ್ಣೂರು ಜಿಲ್ಲೆಯ ಮೂರು ದಶಕಗಳ ಮೊದಲು ಸಾವಿರಾರು ಜನರು ದುಡಿಯುತ್ತಿದ್ದ ಸಂಸ್ಥೆ ಮಂಗಳೂರು ಗಣೇಶ ಬೀಡಿ ಆಗಿತ್ತು. ದಿಡೀರನೆ ಮಂಗಳೂರು ಗಣೇಶ ಬಿಡಿಯ ಘಟಕಗಳನ್ನು ಒಂದೇ ದಿನ ಆಡಳಿತ ವರ್ಗದವರು ಮುಚ್ಚಿದ್ದರು. ಸಾವಿರಾರು ಕಾರ್ಮಿಕರು ಬೀದಿ ಪಾಲಾದರು. ಈ ಅನ್ಯಾಯಕ್ಕೆ ಎದುರಾಗಿ ಕಾರ್ಮಿಕರು ಸಂಘಟಿತವಾಗಿ ಪ್ರಕ್ಷೋಭೆಗೆ ಇಳಿದರು. ಕಾರ್ಮಿಕರ ಈ ಸಂಘಟಿತ ಪ್ರಕ್ಷೋಭೆಯನ್ನು ಒಡೆಯಲು ಮಂಗಳೂರು ಗಣೇಶ್ ಬೀಡಿಯ ಮಾಲೀಕರು ಆರ್.ಎಸ್.ಎಸ್. ಹೆಸರಿನಲ್ಲಿ ಗೂಂಡಾಗಳನ್ನು ಬಳಸಿದರು. ಇವರ ಕನಿಷ್ಟ ಕಾರ್ಯಕ್ರಮ ಕಾರ್ಮಿಕರನ್ನು ಒದ್ದೋಡಿಸುವುದು, ಮಾಲಿಕನಿಗೆ ಕಾರ್ಮಿಕ ಸಂಘ ಮೂರ್ಖರಾಗಿ ಕೆಲಸ ಮಾಡುವುದು ಆಗಿತ್ತು.

ಉತ್ತರ ಭಾರತದಲ್ಲಿ ಗಟ್ಟಿಯಾಗಿ ಕಾಲೂರಲು ಬಳಸಿದ ತಂತ್ರವನ್ನೇ ತಲ್ಲಚೇರಿಯಲ್ಲಿ ಆರ್.ಎಸ್.ಎಸ್. ನವರು ಪ್ರಯೋಗಿಸಿದರು. ಇದೇ 1979ರಲ್ಲಿ ನಡೆದ ತಲ್ಲಚೇರಿ ಮತೀಯ ಗಲಭೆ. ಮತೀಯ ಗಲಭೆ ನಡೆಸಲೇ ಬೇಕು ಎಂಬ ಪೂರ್ವತಂತ್ರದೊಡನೆ ಆರ್.ಎಸ್.ಎಸ್.ನವರು ನಡೆಸಿದ ಈ ಗಲಭೆ ಅವರು ತಿಳಿದ ರೀತಿಯಲ್ಲಿ ನಡೆಯಲಿಲ್ಲ.

ಆದರೆ ಕೊಳ್ಳೆ, ಬೆಂಕಿಹಚ್ಚುವುದು, ಅಲ್ಪಸಂಖ್ಯಾತರನ್ನು ಸಾಯಿಸುವುದನ್ನು ತಡೆದು ನಿಲ್ಲಿಸಲು ಸಿ.ಪಿ.ಐ (ಎಂ) ಕಾರ್ಯಕರ್ತರು ಅಂದು ಪ್ರಾಣತ್ಯಾಗ ಮಾಡಿದರು. ಆರ್.ಎಸ್.ಎಸ್.ನ ಯೋಜಿತ ಈ ಗಲಭೆಯನ್ನು ತಡೆಯಲು ಮುಂಚೂಣಿಯಲ್ಲದ ಸಿಪಿ(ಎಂ) ಕಾರ್ಯಕರ್ತರ ಮನೆಗಳನ್ನು ಲೂಟಿ ಮಾಡಲಾಯಿತು. ಅನೇಕ ಕಾರ್ಯಕರ್ತರು ಗಾಯಗೊಂಡರು. ಸಿಪಿಐ(ಎಂ) ಮುಕಂಡ ಕುಂಜಿರಾಮನ್‌ರವರನ್ನು ಕೊಲೆ ಮಾಡಲಾಯಿತು. ಹಲವಾರು ಮುಸ್ಲಿಂ ಪ್ರಾರ್ಥನಾ ಸ್ಥಳಗಳನ್ನು ಹಾಗೂ ಮನೆಗಳನ್ನು ನೆಲಸಮ ಮಾಡಲಾಯಿತು. ಇದನ್ನು ವಿರೋಧಿಸಿ ನಿಂತ ಸಂಗಾತಿ ಕುಂಜಿರಾಮಾನ್‌ರವರನ್ನು ಕೊಲೆ ಮಾಡಲಾಯಿತು.

ತಲ್ಲಬೇರಿ ಮತೀಯ ಗಲಭೆಯನ್ನು ಮಾಡಿದ ಆಕ್ಕಿ ಎಸ್.ಎಸ್ ಗೆ ಇದರಲ್ಲಿ ಸೋಲುಂಟಾಯಿತು. ಅವರು ಮನಗಂಡ ರೀತಿಯಲ್ಲಿ ಗಲಭೆಯನ್ನು ಯಶಸ್ವಿ ಮಾಡಬೇಕಾದರೆ ಸಿ.ಪಿ.ಐ (ಎಂ) ಶಕ್ತಿಯನ್ನು ಮುರಿಯಬೇಕು ಎಂದು ಅವರು ತೀರ್ಮಾನಿಸಿದರು.

ಅಂದಿನಿಂದ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ನಿರಂತರ ಹಲ್ಲೆ ಮಾಡುವ ಪದ್ಧತಿಗೆ ನಾಂದಿಹಾಡಿದರು.

ಕಣ್ಣೂರು ಜಿಲ್ಲೆಯಲ್ಲಿ ಶಕ್ತಿಯುತ ದೊಡ್ಡ ರಾಜಕೀಯ ಪಕ್ಷವಾಗಿದೆ. ಸಿಪಿಐ(ಎಂ) ಜಿಲ್ಲೆಯ ಎಲ್ಲಾ ಪ್ರದೇಶಗಳಲ್ಲಿ ಪಕ್ಷಕ್ಕೆ ದೊಡ್ಡ ರೀತಿಯ ನೆಲೆ ಇದೆ. ತಲ್ಲಬೇರಿ ತಾಲ್ಲೂಕಿನಲ್ಲಿ ಮಾತ್ರ ಸಿಪಿಐ(ಎಂ) ಆರ್.ಎಸ್.ಎಸ್. ಘರ್ಷಣೆಗಳು ನಡೆಯುತ್ತಿವೆ ಎಂದು ಕೆಲವು ಮಾಧ್ಯಮಗಳು ಪ್ರಚಾರ ಮಾಡುತ್ತಿವೆ. ಈ ಬಗ್ಗೆ ಸರಿಯಾದ ಅಧ್ಯಯಂನ ಮಾಡಿದರೆ ಮಾತ್ರ ಆರ್.ಎಸ್.ಎಸ್.ನ ಜನ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಮುಖವನ್ನು ಸರಿಯಾಗಿ ಕಾಣಬಹುದು. ತಮಗೆ ಸ್ವಾಧೀನವಿರುವ ಪ್ರದೇಶವನ್ನು ತಮಗೆ ಸ್ವಾಯತ್ತತೆ ಇರುವ ರೀತಿಯಲ್ಲಿ ಮಾರ್ಪಾಟು ಮಾಡಲು ಆರ್.ಎಸ್.ಎಸ್.ನವರು ಎಲ್ಲಾ ರೀತಿಯ ಸಮಾಜ ವಿರೋಧಿ ಕೆಲಸಗಳನ್ನು ಮಾಡಿಕೊಂಡು ಬಂದಿರುತ್ತಾರೆ.

ಕುರುಡು ಮಾರ್ಕ್ಸಿಸ್ಟ್ ವಿರೋಧಿ ನೀತಿ ಇಟ್ಟಿರುವ ಕೆಲವು ರಾಜಕೀಯ ಪಕ್ಷಗಳು ಎಲ್ಲಾ ರೀತಿಯಲ್ಲಿಯೂ ಸಿ.ಪಿ.ಐ(ಎಂ) ಅನ್ನು ನಾಶಮಾಡುವ ಒಂದು ಉದ್ದೇಶವಿಟ್ಟುಕೊಂಡು ಆರ್.ಎಸ್.ಎಸ್. ಮಾಡುವಂತಹ ಕೊಲೆ ಮತ್ತು ಲೂಟಿಯನ್ನು ಮುಚ್ಚಿಡುತ್ತಿದ್ದಾರೆ. ಸಿಪಿಐ(ಎಂ)ನ ಜಿಲ್ಲಾ ಮುಖಂಡ ಕಾ|| ಜೈರಾಜ್‌ರವರು ಆರ್.ಎಸ್.ಎಸ್.ನ ಭೀಕರ ದಾಳಿಯಿಂದ ಕಷ್ಟಪಟ್ಟು ಬದುಕುಳಿದಿದ್ದಾರೆ. ಈ ಘಟನೆಯನ್ನು ಕಾಂಗ್ರೆಸ್ನ ಕೆ. ಕರುಣಾಕರನ್ ಸೇರಿದಂತೆ, ಕೆಲವು ರಾಜಕೀಯ ಪಕ್ಷಗಳು ಹಾಗೂ ಮಾಧ್ಯಮಗಳು ಒಂದು ಸಾಮಾನ್ಯ ಹೊಡೆದಾಟವೆಂದು ಬಣ್ಣಿಸಿದರು. ಈ ಆರ್.ಎಸ್.ಎಸ್.ನ ಪ್ರವೃತ್ತಿಗಳನ್ನು ತೀರಾ ಸಾಮಾನ್ಯವೆಂದು ಕಾಣುವುದು, ಸಿಪಿಐ(ಎಂ)ನವರನ್ನು ಆಕ್ರಮಣಕಾರರೆಂದು ಪ್ರಚಾರ ಮಾಡುವುದು, ಈ ಪ್ರಚಾರ ಮಾಡುವವರು ಕೇರಳ ರಾಜ್ಯದಲ್ಲಿ ಶಾಂತಿ ಇರಬೇಕು ಎಂದು ಆಗ್ರಹಿಸುವವರಲ್ಲ. ಇವರ ಉದ್ದೇಶ ಸಿಪಿಐ(ಎಂ)ನ ನೇತೃತ್ವದಲ್ಲಿರುವ ಎಡ ಪ್ರಜಾಪ್ರಭುತ್ವ ಸರಕಾರವನ್ನು ಕೆಳಗಿಳಿಸುವ ತಂತ್ರವಾಗಿದೆ.

1971ರ ನಂತರವೇ ತಲ್ಲಚೇರಿ ಪ್ರದೇಶದಲ್ಲಿ ಆರ್.ಎಸ್.ಎಸ್. ಆಕ್ರಮಣಗಳು ಹೆಚ್ಚಾಗಿವೆ.




ಮೃಗೀಯವಾದ ಆಕ್ರಮಣಗಳಿಂದ ಆ ಪ್ರದೇಶದಲ್ಲಿ ಭೀತಿಯ ವಾತಾವರಣ ಸೃಷ್ಟಿ ಮಾಡುವುದು, ಇವರ ಪ್ರದೇಶಗಲಿಗೆ ಸಾಮಾನ್ಯ ಜನರು ಪ್ರವೇಶಿಸಿದಂತೆ ತಡೆಯುವುದು, ಸಮಾಜ ವಿರೋಧಿ ಮನಷ್ಕ ಯುವಕರಿಗೆ ಬೇಕಾದ ಪ್ರೋತ್ಸಾಹಕೊಟ್ಟು ಅವರನ್ನು ಸಂಘ ಪರಿವಾರದ ಜೊತೆ ಕರೆದುಕೊಳ್ಳುವುದು ಹಾಗೂ ಈ ಯುವಕರ ಮುಖಾಂತರ ಕೊಲೆ, ಸುಲಿಗೆ ನಡೆಸುವುದು, ನಂತರ ಇದಕ್ಕೆ ತದ್ವಿರುದ್ಧ ಪ್ರಚಾರ ಮಾಡುವ ಒಂದು ಶೈಲಿಯನ್ನು ಆರ್.ಎಸ್.ಎಸ್. ನವರು ಅಳವಡಿಸಿಕೊಂಡು ಬಂದಿದ್ದಾರೆ. ಕ್ರಿಮಿನಲ್ ಕೇಸ್‌ಗಳಲ್ಲಿ ಇರುವವರನ್ನು ಬಿಡುಗಡೆ ಮಾಡಲು ಸಾಕ್ಷಿಗಳನ್ನು ಇಲ್ಲವಾಗಿಸುವ ಒಂದು ಕಾರ್ಯ ಯೋಜನೆ ರೂಪಿಸಿಕೊಂಡು ಬಂದಿರುತ್ತಾರೆ. ತಲ್ಲಚೇರಿಯಲ್ಲಿ ಇತ್ತೀಚಿಗೆ ನಡೆದ ಭೀಕರ ಗಲಭೆಗಳ ರೀತಿಯಲ್ಲಿ ಈ ಹಿಂದೆಯೂ ಆರ್. ಎಸ್.ಎಸ್. ನವರು ಗಲಭೆ, ಕೊಲೆ, ಹಲ್ಲೆ ನಡೆಸಿರುತ್ತಾರೆ. 13 ನೇ ಲೋಕಸಭೆ ಚುನಾವಣೆ ಪ್ರಚಾರ ನಡೆಯುವ ಸಂದರ್ಭದಲ್ಲಿ, ಕೇರಳದ ಪ್ರಮುಖ ಹಬ್ಬವಾದ ಓಣಂ ದಿನದಂದು ದೇಶಾಭಿಮಾನಿ ಕಣ್ಣೂರು ಆವೃತ್ತಿ ಮ್ಯಾನೇಜರ್, ಹಾಗೂ ವಡಗರ ಲೋಕಸಭಾ ಕ್ಷೇತ್ರದ ಚುನಾವಣೆ ಕಾರ್ಯದರ್ಶಿಯಾದ ಕಾಂ|| ಪಿ. ಜಯರಾಜನ್‌ರವರ ಮನೆಗೆ ನುಗ್ಗಿ ಅವರ ಮೇಲೆ ಭೀಕರ ಹಲ್ಲೆ ನಡೆಸಲಾಯಿತು. ಈ ಮೃಗೀಯ ಕೃತ್ಯ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಯಾವ ಗಲಭೆ, ಅಶಾಂತಿ ಇರಲಿಲ್ಲ. ಶಾಂತಿಯುತವಾಗಿ ನಡೆಯುತ್ತಿದ್ದ ಚುನಾವಣೆ ಕೆಲಸಕಾರ್ಯಗಳನ್ನು ಬುಡಮೇಲು ಮಾಡಲು ಆರ್.ಎಸ್.ಎಸ್. ನವರು ಈ ಕಾರ್ಯತಂತ್ರ ರೂಪಿಸಿದ್ದರು. ನಂತರ ಇವರು ಈ ಸಂಗಾತಿಗೆ ಎದುರಾಗಿ ಸುಳ್ಳು ಪ್ರಚಾರ ಆರಂಭಿಸಿದರು. ಕಾ|| ಜಯರಾಜನ್ ಸಾಯಬೇಕಾದ ಉಗ್ರವಾದಿಯಾಗಿದ್ದರು, ಎಂದು ಕರಪತ್ರ ಹಂಚಿರುತ್ತಾರೆ. ಇದು ಸದಾ ಆರ್.ಎಸ್.ಎಸ್. ನವರು ಅಳವಡಿಸಿಕೊಂಡು ಬಂದ ತಂತ್ರವಾಗಿದೆ. ಕೊಲ್ಲಬೇಕಾದ ವ್ಯಕ್ತಿಗಳನ್ನು ಮೊದಲೇ ಗುರುತಿಸುವುದು, ಮುಂದಿನ ಹಂತವಾಗಿ ಆ ವ್ಯಕ್ತಿಯ ವಿರುದ್ಧ ಅಪಪ್ರಚಾರ ನಡೆಸುವುದು, ನಂತರ ಕೊಲೆ ಮಾಡುವುದು, ಈ ರೀತಿಯ ತಂತ್ರಗಳನ್ನು ಎಲ್ಲಾ ಘಟನೆಗಳಲ್ಲಿ ಆರ್.ಎಸ್.ಎಸ್.ನವರು ಅಳವಡಿಸಿಕೊಂಡು ಬಂದಿರುತ್ತಾರೆ. ಕಾಂ|| ಜಯರಾಜನ್‌ರವರನ್ನು ಕೊಲೆ ಮಾಡುವುದು, ಈ ರೀತಿ ಒಂದು ಗಲಭೆ ಉಂಟು ಮಾಡಿ ಚುನಾವಣೆ ಕೆಲಸಕಾರ್ಯಗಳನ್ನು ಬುಡಮೇಲು ಮಾಡುವುದು ಇವರ ಉದ್ದೇಶವಾಗಿತ್ತು. ಕಾ|| ಜಯರಾಜನ್‌ರವರ ಮೇಲೆ ಹಲ್ಲೆ ನಡೆದು ಎರಡು ದಿನ ಕಳೆದ ನಂತರ ತಲ್ಲಚೇರಿ ಬಳಿ ಸಿಪಿಐ(ಎಂ) ಕಾರ್ಯಕರ್ತ ಕಾ|| ದಾಸ್‌ರವರನ್ನು ಕೊಲೆ ಮಾಡಲಾಯಿತು. ಇದೇ ರೀತಿ ಮಾಡಿದರೆ ಚುನಾವಣೆ ಸಂಧರ್ಭದಲ್ಲಿ ಅರಾಜಕತೆ ಉಂಟುಮಾಡಿದರೆ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಕಾರ ಕ್ರಮ ಕೈಗೊಳ್ಳುತ್ತಾರೆ, ಈ ಮೂಲಕ ಗಲಭೆಗಳು ನಡೆಯುತ್ತವೆ.' ಚುನಾವಣೆ ಕೆಲಸಗಳು ತಲೆಕೆಳಗಾಗುತ್ತವೆ ಎಂದು ಆರ್.ಎಸ್.ಎಸ್. ನವರು ಬಾವಿಸಿದರು. ಆದರೆ ಸಿಪಿಐ(ಎಂ) ಕಾರ್ಯಕರ್ತರು ದೃಢವಾದ ಸಂಯಮವನ್ನು ಪಾಲಿಸಿ ಚುನಾವಣೆ ಕೆಲಸ ಕಾರ್ಯಗಳನ್ನು ಮುಂತೆಗೆದುಕೊಂಡು ಹೋದರು. ಕಾ|| ಜಯರಾಜನ್ ಮೇಲೆ ನಡೆದ ಹಲ್ಲೆಗೆ ಪ್ರತೀಕವಾಗಿ ಒಬ್ಬನೇ ಒಬ್ಬ ಅರ್.ಎಸ್.ಎಸ್. ಕಾರ್ಯಕರ್ತನ ಮೇಲೆ ಕಿಂಚಿತ್ತು ದೂರು ಕೂಡ ಸಿಪಿಐ(ಎಂ) ಕಾರಿಯಕರ್ತರು ಎರಚಿರುವುದಿಲ್ಲ. ಆಕ್ರಮಣದಿಂದ ಆದ ರೋಷ ಹಾಗೂ ನೋವನ್ನು ಹಲ್ಲಿಕಚ್ಚಿ ಸಂಭಾಳಿಸಿ ಶಾಂತಿಯನ್ನು ಕಾಪಾಡಿರುತ್ತಾರೆ. ಆದರೆ ಆರ್.ಎಸ್.ಎಸ್ ನವರು ಸುಮ್ಮನಿರದೆ ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಇದೇ ತಂತ್ರ ಬಳಸಿದರು. ಕೊನೆಯಲ್ಲಿ ಒಂದು ಶಾಲೆಯಲ್ಲಿ ನಡೆದ ಒಂದು ಘಟನೆ ನಂತರ ಆರ್.ಎಸ್.ಎಸ್. ಪುನಃ ಜಿಲ್ಲೆಯಲ್ಲಿ ಕೊಲೆಯನ್ನು ಒಂದು ಆಯುಧವಾಗಿ ಬಳಸಿ ಗಲಭೆ ನಡೆಸಿರುತ್ತಾರೆ.

ಆದರೆ ಶಾಲೆಯಲ್ಲಿ ನಡೆದ ಘಟನೆಯಲ್ಲಿ ಮೃತಪಟ್ಟ ಶಿಕ್ಷಕ ಕೆಲವು ತಿಂಗಳುಗಳ ಮೊದಲು 8ನೇ ತರಗತಿಯಲ್ಲಿ ಓದುತ್ತಿದ್ದ ಓರ್ವ ವಿದ್ಯಾರ್ಥಿನಿಯನ್ನು ಮಾನಭಂಗ ಮಾಡಲು ಪ್ರಯತ್ನ ಮಾಡಿದ್ದ. ಈ ವಿಷಯವನ್ನು ಅರಿತ ಆ ವಿದ್ಯಾರ್ಥಿನಿಯ ಪಾಲಕರು ಹಾಗೂ ಕುಟುಬಂದವರು ಶಾಲೆಯ ಮುಖ್ಯೋಪಾಧ್ಯಯರಿಗೆ ದೂರು ನೀಡಿದ್ದರು. ಈ ಶಿಕ್ಷಕ ಆ ಪ್ರದೇಶದ ಆರ್.ಎಸ್.ಎಸ್. ಮುಖಂಡ ಅಲ್ಲದೆ ಅಖಿಲ ಭಾರತ ಮುಖಂಡರಲ್ಲೊಬ್ಬರ ಸಹೋದರನಾಗಿರುತ್ತಾನೆ. ಇದರಿಂದ ಈ ಘಟನೆಗೆ ಾಜಕೀಯ ಬಣ್ಣ ಕೊಡಲಾಯಿತು. ಈ ಘಟನೆಯನ್ನು ಆರ್.ಎಸ್.ಎಸ್. ಸಿಪಿಐ(ಎಂ) ಘರ್ಷಣೆ ಎಂದು ಕೆಲವು ಪತ್ರಿಕೆಗಳಲ್ಲಿ ತೀವ್ರ ಪ್ರಚಾರ ಕೊಡಲಾಯಿತು. ಅಂದು ರಾತ್ರಿ ಅದೇ ಪಂಚಾಯತಿನಲ್ಲಿ ಆರ್.ಎಸ್.ಎಸ್.ನವರು ಇಬ್ಬರು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರು. ಸ್ಕೂಟರಿನಲ್ಲಿ ತೆರಳುತ್ತಿದ್ದ ಕಾಂ. ಜಿ.ಪ್ರದೀಪ್‌ರವರನ್ನು ಬಾಂಬ್ ಎಸೆದು ನಂತರ ಕೊಡಲಿಯಿಂದ ಕತ್ತರಿಸಲಾಯಿತು. ಇವರ ಆಕ್ರಂದನ ಕೇಳಿ ನೆರವಿಗೆ ಬಂದ ಇಬ್ಬರು ಸಿಪಿಐ(ಎಂ) ಕಾರ್ಯಕರ್ತರನ್ನು ಕೂಡ ಸ್ಥಳದಲ್ಲಿಯೇ ಕೊಲ್ಲಲಾಯಿತು. ಮರುದಿನ ಬೆಳಿಗ್ಗೆ ಹಾಲು ವಿತರಣೆ ಮಾಡಲು ಹೋದಂತಹ ಸಿಪಿಐ(ಎಂ) ಸದಸ್ಯ ಕಾಂ. ರಾಧಕೃಷ್ಣರವರನ್ನು ಆರ್.ಎಸ್.ಎಸ್.ನವರು ಸಾಯಿಸಿರುತ್ತಾರೆ. ಶಾಲಾ ಶಿಕ್ಷಕರನ ಘಟನೆಗೂ ಸಿಪಿಐ(ಎಂ) ಕಾರ್ಯಕರ್ತರ ಕೊಲೆಗೂ ಏನು ಸಂಬಂಧ ಎಂದು ಆರ್.ಎಸ್.ಎಸ್.ನವರೇ ಉತ್ತರಿಸಬೇಕಾಗಿದೆ. ಹಲ್ಲೆಗಳು ಇಲ್ಲಿಗೂ ನಿಂತಿಲ್ಲ. ಅದೇದಿನ ಬೆಳಿಗ್ಗೆ ಸಿಪಿಐ(ಎಂ)ಸ್ಥಳೀಯ ಸಮಿತಿ ಸದಸ್ಯ ಹಾಗೂ ಶಾಲಾ ಶಿಕ್ಷಕರಾದ ಕಾಂ. ಸುರೇಶ್‌ಬಾಬುರವರನ್ನು ಅವರು ಪುಸ್ತಕ ಹಾಗೂ ಊಟದೊಡನೆ ಶಾಲೆಯ ಗೇಟಿನ ಬಳಿ ಬರುತ್ತಿದ್ದ ಸಮಯದಲ್ಲಿ ಅವರ ಮೇಲೆ ಹಲ್ಲೆ ನಡೆಸಲಾಯಿತು. ಆದರೆ ನಿಜ ಪರಿಸ್ಥಿತಿಯನ್ನು ಮಾಧ್ಯಮಗಳು ಸರಿಯಾಗಿ ವರದಿ ಮಾಡಿದರೆ ಈ ಘಟನೆಗಳಿಗೆ ಯಾರು ಜವಾಬ್ದಾರಿ ಎಂದು ಜನರಿಗೆ ಗೊತ್ತಾಗುತ್ತದೆ. ಕಾಂ. ಜಯರಾಜ್‌ರವರ ಕೊಲೆ ಪ್ರಯತ್ನದ ನಂತರ ಈ ಹಲ್ಲೆಗಳು ಇತ್ತೀಚಿಗೆ ಪುನಃ ಆರಂಭಗೊಂಡವು. ಕಾಂ. ಜಯರಾಜನ್‌ರವರ ಕೈಕಾಲುಗಳನ್ನು ತುಂಡರಿಸಿ, ಅವರು ಸತ್ತರೆಂದು ಬಿಟ್ಟು ಹೋಗುವ ಸಮಯದಲ್ಲಿ ಹಲ್ಲೆಕಾರರು 'ಓಂ ಕಾಳಿ' ಎಂಬ ಘೋಷಣೆ ಕೂಗಿರುತ್ತಾರೆ. ಈ ಹಲ್ಲೆಗೆ ಮೊದಲು ಆರ್.ಎಸ್.ಎಸ್. ಪ್ರಮುಖ ಮುಖಂಡರು ಸಾರ್ವಜನಿಕ ಸಭೆಗಳಲ್ಲಿ "ಮುಂದೆ ನಾವು ಬಲ್ಬ್‌ಗಳನ್ನು ಒಡೆಯದೆ, ಟ್ರಾನ್ಸ್‌ಫಾರ್ಮರ್‌ಗಳನ್ನು ನಾಶ ಮಾಡುತ್ತೇವೆ"(ಕಾರ್ಯಕರ್ತರನ್ನು ಕೊಲ್ಲದೆ, ಪ್ರಮುಖ ನಾಯಕರನ್ನು ಕೊಲ್ಲುತ್ತೇವೆ) ಎಂದು ಘೋಷಿಸಿರುತ್ತಾರೆ. ಅದಲ್ಲದೆ ಕಣ್ಣೂರು ಜಿಲ್ಲಾ ಕೇಂದ್ರವನ್ನೇ ಭಸ್ಮ

ಪುಟ 11 ಕ್ಕೆ

ಸಾಮ್ರಾಜ್ಯಶಾಹಿಗಳ ನಿದ್ದೆಗೆಡಿಸಿದ 'ಸಿಯೆಟ್ಲ್' ಸಮ್ಮೇಳನ



ಪ್ರತಿಭಟನೆಗಳ ನಡುವೆ ಡಬ್ಲ್ಯು.ಟಿ.ಓ. ಸಮ್ಮೇಳನ ಆರಂಭವಾದ ಸುದ್ದಿ ಓದಿದ್ದೀರಿ. ಯಾವುದೇ ಜಂಟಿ ಘೋಷಣೆ, ನಿರ್ಣಯ ಅಷ್ಟೇ ಏಕೆ, 'ಧನ್ಯವಾದಸಮರ್ಪಣೆ' ಕೂಡಾ ಇಲ್ಲದೆ ಅದು ಮುಕ್ತಾಯಗೊಂಡಿತು. ಇದು 1991 ರ ನಂತರ ಅಮೆರಿಕಾ ಅನುಭವಿಸಿದ ಮೊದಲ ಸೋಲು ಎಂದು ಈ ಸಮ್ಮೇಳನದ ಒಟ್ಟಾರೆ ಚಿತ್ರ ನೀಡುತ್ತಾ ಭಾರತದ ನಿಯೋಗದಲ್ಲಿದ್ದ ಸಿಪಿಐ(ಎಂ) ಪ್ರತಿನಿಧಿ ಡಾ ಬಿಪ್ಲವ್ ದಾಸ್ ಗುಪ್ತಾ ಹೇಳಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿಯ ಯಜಮಾನಿಕೆಗೆ ಪರಿಣಾಮಕಾರೀ ಸವಾಲು ಬಂತು, ಅವರ ಗೋಸುಂಬೆತನ ಬಯಲಿಗೆ ಬಂತು.

ಸಿಯೆಟ್ಲ್ ಸಮ್ಮೇಳನದಲ್ಲಿ ಅಧ್ಯಕ್ಷ ಕ್ಲಿಂಟನ್ ಭಾಷಣ ಸಾಮ್ರಾಜ್ಯಶಾಹಿಗಳು ನಿರೀಕ್ಷಿಸಿದ್ದಕ್ಕೆ ವಿರುದ್ಧವಾದ ಪ್ರತಿಕ್ರಿಯೆ ಪಡುವಂತೆ ಕಾಣುತ್ತದೆ. ವಾಸ್ತವವಾಗಿ ಅಧ್ಯಕ್ಷ ಕ್ಲಿಂಟನ್ ಡಬ್ಲ್ಯು.ಟಿ.ಓ. ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಿರಲಿಲ್ಲ, ಚುನಾವಣಾ ವರ್ಷದಲ್ಲಿ ಅಮೆರಿಕನ್ ಮತದಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದಂತಿತ್ತು. ಮೂರನೇ ಜಗತ್ತಿನ ದೇಶಗಳ ಕಮ್ಮಿ ಕೂಲಿಯ ಉತ್ಪಾದನೆಗಳ ವಿರುದ್ಧ ಅಮೆರಿಕನ್ನರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ ಎಂದು ಕ್ಲಿಂಟನ್ ಡಬ್ಲ್ಯು.ಟಿ.ಓ. ಪ್ರತಿನಿಧಿಗಳಿಗೆ ಹೇಳಿದರು. ಅದಕ್ಕೆ ಪ್ರತಿಯಾಗಿ - ಈ ಸಭೆ ಭಾರತ ಅಥವಾ ಬೇರಾವ ಬಡ ದೇಶದಲ್ಲಿ ನಡೆದಿದ್ದರೂ ಇಂತಹ ಪ್ರತಿಭಟನೆ ನಡೆಯುತ್ತಿತ್ತು, ಪ್ರತಿಭಟನಾಕಾರರು 'ಈ ಗೋಸುಂಬೆತನ ಬಿಡಿ, ಸಿರಿವಂತ ದೇಶಗಳ ಮಾರುಕಟ್ಟೆಗಳನ್ನು ಬಡದೇಶಗಳ ರಫ್ತುಗಳಿಗೆ ತೆರೆಯಿರಿ; ನಮ್ಮ ಉದ್ದಿಮೆಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಕೈವಶ ಮಾಡಿಕೊಳ್ಳುತ್ತಿರುವುದನ್ನು ನಿಲ್ಲಿಸಿ" ಎಂದು ಹೇಳುತ್ತಿದ್ದರು. ನಮ್ಮ ಜನರ ಆ ದನಿಗಳನ್ನು ಕೇಳಿ ಎಂದು ಈ ದೇಶಗಳ ಪ್ರತಿನಿಧಿಗಳು ಕ್ಲಿಂಟನ್‌ಗೆ ಹೇಳಿದರು. ತಮ್ಮ ಇತರ ಭಿನ್ನಾಭಿಪ್ರಾಯಗಳನ್ನೆತ್ತಿ ಬದಿಗಿಟ್ಟು 'ಲೇಬರ್ ಸ್ಟಾಂಡರ್ಡ್' ವಿಷಯದಲ್ಲಿ ಮಾತ್ರ ಒಗ್ಗಟ್ಟಾಗಿ ನಿಂತರು.

ಅಷ್ಟೇ ಅಲ್ಲ, ಮುಂದೆ ಇದರಿಂದಾಗಿ ಈ ಸಮ್ಮೇಳನದಲ್ಲಿ ಯಾವುದೇ ಒಮ್ಮತಕ್ಕೆ ಬರುವುದೇ ಕಷ್ಟಸಾಧ್ಯವಾಯಿತು. ಸಮ್ಮೇಳನ ಮುಂದುವರೆದಂತೆ ಅಮೆರಿಕಾ ಮತ್ತು ಯುರೋಪ್ ಬೆದರಿಕೆ, ಆಶ್ವಾಸನೆ ಎಲ್ಲವನ್ನು ಸೇರಿಸಿ ಒಂದಾದ ಮೇಲೊಂದರಂತೆ 'ಲೇಬರ್ ಸ್ಟಾಂಡರ್ಡ್' ಬಗ್ಗೆ ಕರಡುಗಳನ್ನು ತಯಾರಿಸಿದವು. ಇವುಗಳಲ್ಲಿ ಒಂದಾದರೂ ಕರಡನ್ನು ಪ್ರತಿನಿಧಿಗಳು ಒಪ್ಪಬಹುದು ಎಂಬ ಅವರ ನಿರೀಕ್ಷೆ ಈಡೇರಲೇ ಇಲ್ಲ. ಬಾಂಗ್ಲಾದೇಶದ ನೇತೃತ್ವದ 48 'ಅತಿ ಕಮ್ಮಿ ಅಭಿವೃದ್ಧಿ ಹೊಂದಿದ ದೇಶ'ಗಳಿಗೆ ರಿಯಾಯ್ತಿಗಳನ್ನು ನೀಡಿ ಅವನ್ನು 'ಕಮ್ಮಿ ಅಭಿವೃದ್ಧಿ ಹೊಂದಿದ' ದೇಶಗಳಿಂದ ಪ್ರತ್ಯೇಕಿಸುವ ಅವರ ತಂತ್ರವೂ ಫಲ ಕೊಡಲಿಲ್ಲ. ಹಲವು ವರ್ಷಗಳಲ್ಲಿ ಮೊತ್ತ ಮೊದಲ ಬಾರಿಗೆ ಈ ತಂತ್ರ ವಿಫಲಗೊಂಡಿತು. ಐದು ವರ್ಷಗಳ ಹಿಂದೆ ಉರುಗ್ವೇ ಸುತ್ತಿನ ಮಾತುಕತೆಗಳಲ್ಲಿ ಮೌನ ಪ್ರೇಕ್ಷಕರಾಗಿದ್ದ ಬಡ ದೇಶಗಳು ಈ ಬಾರಿ ತಮ್ಮ ಸಿಟ್ಟನ್ನು ವಿವಿಧ ದ್ವಿಪಕ್ಷೀಯ ಮಾತುಕತೆಗಳಲ್ಲಿ, ಬೇರೆ ಭಾಷಣಗಳಲ್ಲಿ ವ್ಯಕ್ತಗೊಳಿಸಿದರು.

ಡಿಸೆಂಬರ್ 2 ರ ಸಂಜೆ ಅಮೆರಿಕಾ ತನ್ನ ಭಂಡತನ ಪ್ರದರ್ಶಿಸಲು ಹೋಗಿ ಮತ್ತೊಮ್ಮೆ ಮುಗ್ಗರಿಸಿತು. ಏನಾದರೂ ಒಪ್ಪಂದ ತರಿಸಬೇಕು ಎಂಬ ಹತಾಶೆಯಿಂದ ಅದು ಒಂದು 'ಸಂಪೂರ್ಣ ಸಮಿತಿ' ರಚಿಸಿತು. 120 ಕ್ಕೂ ಹೆಚ್ಚು ದೇಶಗಳ ಪೈಕಿ ಕೇವಲ 23 ದೇಶಗಳ ಪ್ರತಿನಿಧಿಗಳಿರುವ ಒಂದು ಸಮಿತಿಯನ್ನು ರಚಿಸಿ ಡಬ್ಲ್ಯು.ಟಿ.ಓ. ನ ಮಹಾನಿರ್ದೇಶಕನ ಕಚೇರಿಯ 'ಗ್ರೀನ್ ರೂಂ' ನಲ್ಲಿ ಚರ್ಚೆಗೆ ಏರ್ಪಾಡು ಮಾಡಲಾಯಿತು. ಆದರೆ ಆ ಕೋಣೆಯಲ್ಲಿ 50 ಕ್ಕಿಂತ ಹೆಚ್ಚು ಮಂದಿ ಕೂರುವ ಅವಕಾಶವಿಲ್ಲದ್ದರಿಂದ ಈ 23 ದೇಶಗಳ ಒಬ್ಬ ಮಂತ್ರಿ ಮತ್ತೊಬ್ಬ ಸಹಾಯಕ ಮಾತ್ರ ಭಾಗವಹಿಸುವಂತಾಯಿತು. ಈ ಚರ್ಚೆ ಡಿಸೆಂಬರ್ 3 ರಂದು ದಿನವೆಲ್ಲಾ ನಡೆದರೂ ಉಪಯೋಗವಾಗಲಿಲ್ಲ. ಏಕೆಂದರೆ ಈ ಸಮಿತಿಯಲ್ಲಿಲ್ಲದ 100 ಕ್ಕೂ ಹೆಚ್ಚು ದೇಶಗಳು - ಇವುಗಳಲ್ಲಿ ಹೆಚ್ಚಿನವು ಬಡ, ಸಣ್ಣ, ಕರಿಯ ದೇಶಗಳು - ಈ ಅವಮಾನಕಾರೀ ಕೃತ್ಯದಿಂದ ಸಿಟ್ಟಿಗೆದ್ದು ಸಮ್ಮೇಳನವನ್ನೇ ಬಹಿಷ್ಕರಿಸುವುದಾಗಿ ಬೆದರಿಸಿದರು. ಇದರಿಂದ ಈ ಸಮಿತಿಯಲ್ಲಿ ಸೇರುವ 'ಅದೃಷ್ಟ' ಪಡೆದ ಭಾರತ, ಪಾಕಿಸ್ತಾನ, ಬಾಂಗ್ಲಾ ದೇಶ ಪ್ರತಿನಿಧಿಗಳೂ ಈ ನೂರಕ್ಕೂ ಹೆಚ್ಚು ದೇಶಗಳ ಭಾವನೆಗಳನ್ನೇ ಆ ಸಮಿತಿಯ ಸಭೆಯಲ್ಲೂ ವ್ಯಕ್ತಪಡಿಸಲೇಬೇಕಾಗಿ ಬಂತು.

ಡಿಸೆಂಬರ್ 3 ರ ಸಂಜೆಯ ವೇಳೆಗೆ ಸಿಯಾಟ್ಲ್ ಸಮ್ಮೇಳನ ಮುರಿದು ಬೀಳುವ ಎಲ್ಲಾ ಲಕ್ಷಣಗಳೂ ಕಾಣುತ್ತಿದ್ದವು. ಶ್ರೀಮಂತ ಮತ್ತು ಬಡ ದೇಶಗಳ ನಡುವಿನ ಪ್ರಶ್ನೆಯೊಂದಿಗೆ, ಕೃಷಿ ಸಬ್ಸಿಡಿಗಳ ಬಗ್ಗೆ ಅಮೆರಿಕಾ ಮತ್ತು ಯುರೋಪು ನಡುವಿನ ವಿವಾದ, ಆಹಾರ ಭದ್ರತೆಯ ಪ್ರಶ್ನೆಯ ಮೇಲೆ ಅಮೆರಿಕಾ ಮತ್ತು ಜಪಾನ್ ನಡುವಿನ ವಿವಾದಗಳೂ ಬಗೆಹರಿಯಲಿಲ್ಲ.

ಒಂದು ದಶಕದ ಹಿಂದೆ ಅಮೆರಿಕಾದ ವ್ಯಾಪಾರ ಪ್ರತಿನಿಧಿ ಕಾರ್ಲಾಹಿಲ್ಸ್ ದುರಹಂಕಾರ ಪ್ರದರ್ಶಿಸಿದಂತೆ ಈ ಸಮ್ಮೇಳನದ ಅಧ್ಯಕ್ಷೆಯಾಗಿದ್ದ ಅಮೆರಿಕಾದ ಪ್ರಸಕ್ತ ವ್ಯಾಪಾರ ಪ್ರತಿನಿಧಿ ಸಿರ್ಲಿನ್ ಬರ್ಶಿಫ್‌ಸ್ಕಿ ಕೂಡಾ ದುರಹಂಕಾರ ಪ್ರದರ್ಶನಕ್ಕೆ ಮುಂದಾದರೂ ಕಳೆದ ಹತ್ತು ವರ್ಷಗಳಲ್ಲಿ ಪರಿಸ್ಥಿತಿ ಬದಲಾದುದನ್ನು ಆಕೆ ಗಮನಿಸಿದಂತಿರಲಿಲ್ಲ. ಐದು ವರ್ಷಗಳ ಹಿಂದೆ ಉರುಗ್ವೇ ಸುತ್ತಿನ ಮಾತುಕತೆಗಳಲ್ಲಿ ವಿಶ್ವ ವ್ಯಾಪಾರದಿಂದ ನಮಗೆ ಏನೇನೋ ಪ್ರಯೋಜನಗಳು ದಕ್ಕುತ್ತವೆ ಎಂದಿರಿ. ಆದರೆ ನಮಗೆ ಸಿಕ್ಕಿದ್ದು ಏನೂ ಇಲ್ಲ. ಹಲವು ವಿಷಯಗಳಲ್ಲಿ ಈ ಉದಾರೀಕರಣದಿಂದ ಕಳಕೊಂಡದ್ದೇ ಹೆಚ್ಚು ಎಂದು ಹೆಚ್ಚಿನ ದೇಶಗಳ ಪ್ರತಿನಿಧಿಗಳು ಟೀಕಿಸಿದರು.

ಒಟ್ಟಿನಲ್ಲಿ 1994-95 ರಲ್ಲಿ ಗ್ಯಾಟ್ ಮಾತುಕತೆಗಳಲ್ಲಿ ಮೂರನೇ ಜಗತ್ತಿನ ದೇಶಗಳನ್ನು ಬದಿಗೊತ್ತಿದಂತೆ ಇನ್ನು ಮುಂದೆ ಸಾಧ್ಯವಿಲ್ಲ ಎಂದು ಸಾಮ್ರಾಜ್ಯಶಾಹಿಗಳ ಗಮನಕ್ಕೆ ತಂದ ಸಮ್ಮೇಳನ ಇದು. ಈಗ ವಿಶ್ವದ ಆರ್ಥಿಕವನ್ನು ಆಳುವ ತ್ರಿಮೂರ್ತಿಗಳಲ್ಲಿ ಈ ಡಬ್ಲ್ಯು.ಟಿ.ಓ. ಒಂದು (ಉಳಿದೆರಡು ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್). ಆದರೂ ಐ.ಎಂ.ಎಫ್.-ವಿಶ್ವಬ್ಯಾಂಕ್‌ಗೂ ಇದಕ್ಕೂ ಕೆಲವು ಸಂಘಟನಾ ಭಿನ್ನತೆಗಳಿವೆ. ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ನಲ್ಲಿ ವಾಣಿಜ್ಯಕಂಪನಿಗಳಂತೆ ಆಯಾಯ ದೇಶಗಳು ಹೊಂದಿರುವ ಬಂಡವಾಳದ ಪಾಲಿಗೆ ಅನುಗುಣವಾಗಿ ಮತದಾನದ ಹಕ್ಕುಗಳಿದ್ದರೆ(ಬಹುಪಾಲು ಬಂಡವಾಳ ಹೊಂದಿರುವ ಪಾಶ್ಚಿಮಾತ್ಯ ದೇಶಗಳಿಗೆ ಹೆಚ್ಚಿನ ಮತಗಳು) ಡಬ್ಲ್ಯು.ಟಿ.ಓ. ಹಾಗಲ್ಲ. ಇಲ್ಲಿ ಪ್ರತಿಯೊಂದು ದೇಶಕ್ಕೂ ಒಂದೇ ಮತವಷ್ಟೇ ದೊಡ್ಡದಿದ್ದರೂ, ಎಷ್ಟೇ ಸಣ್ಣದಿದ್ದರೂ. ಅಲ್ಲದೆ ಇಲ್ಲಿ ಪ್ರತಿಯೊಂದು ನಿರ್ಣಯಕ್ಕೂ ಸರ್ವಸಮ್ಮತಿ ಅಗತ್ಯ. ಇದರಿಂದಾಗಿ ಸಾಮ್ರಾಜ್ಯಶಾಹಿ ದೇಶಗಳು ಎಷ್ಟೇ ಪ್ರಯತ್ನಿಸಿದರೂ ಬೆದರಿಸಿದರೂ ಸರ್ವಸಮ್ಮತಿಯಂತೂ ಸಾಧ್ಯವಾಗಲಿಲ್ಲ. ಆದ್ದರಿಂದ ಉದ್ಘಾಟನಾ ಸಮಾರಂಭದಂತೆ ಸಮಾರೋಪ ಸಮಾರಂಭವೂ ಸಪ್ಪೆ ರೀತಿಯಲ್ಲೇ ಮುಗಿಯಿತು. ಹೌದು, ಸಿಯೆಟ್ಲ್ ಸಮರದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಸೋತಿದೆ. ಅದರ ಯಜಮಾನಿಕೆಗೆ ಬಲವಾದ ಸವಾಲು ಬಂದಿದೆ; ಗೋಸುಂಬೆತನ ಬಯಲಿಗೆ ಬಂದಿದೆ. 'ಆದರೆ ಮೂರನೇ ಜಗತ್ತಿನ ದೇಶಗಳು ಗೆದ್ದವೆಂದು ಬೀಗುವಂತಿಲ್ಲ, ಸಂತೃಪ್ತ ಮನೋಭಾವ ತಾಳುವಂತಿಲ್ಲ. ಮತ್ತೆ ಧಾಳಿ ಮಾಡುವ ಸಂಪನ್ಮೂಲ ಅವರ ಬಳಿಯಿದೆ. ಅಲ್ಲದೆ ನಮ್ಮಂತಹ ದೇಶಗಳ ಆಳರಸರ ಶರಣಾಗತಿಯ ಮನೋಭಾವವೂ ಅವರ ಸಹಾಯಕ್ಕಿರುತ್ತದೆ. ನಮ್ಮ ದೇಶದ ಈಗಿನ ಪ್ರಧಾನ ಆಳುವ ಪಕ್ಷ ಬಿಜೆಪಿ ಮತ್ತು ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಅಮೆರಿಕದ ಒತ್ತಡಗಳಿಗೆ ತಲೆಬಾಗುವ ಪಕ್ಷಗಳು ಎಂದೂ ನಾವೂ ಮರೆಯುವುಂತಿಲ್ಲ. ಒಂದು ಕಾಳಗ ಈಗ ಮುಗಿದಿದೆಯಷ್ಟೆ. ಆದರೆ ಯುದ್ಧ ಇನ್ನೂ ಸಾಗಿದೆ"

ವರದಿ: **ವಿಪ್ಲವ ದಾಸ್ ಗುಪ್ತಾ**
ಸಿಪಿಐ(ಎಂ) ಎಂ.ಪಿ.

ಈ ಸಮ್ಮೇಳನದಲ್ಲಿ ಭಾರತದ ನಿಯೋಗದ ಮುಖಂಡರಾಗಿದ್ದವರು ಬಿಜೆಪಿಗೆ ಅಥವಾ ಕಾಂಗ್ರೆಸ್ಸಿಗೆ ಸೇರಿದವರಲ್ಲ ಎಂಬುದು ಗಮನಾರ್ಹ. ಡಿ.ಎಂ.ಕೆ.ಯ ಮುರುಸೋಳಿ ಮಾರನ್ ನೇತೃತ್ವದ ಈ ನಿಯೋಗದಲ್ಲಿ ಇದ್ದ ಇತರ ಮೂವರು ಸಂಸತ್ ಸದಸ್ಯರಲ್ಲಿ ಇಬ್ಬರು ಪ್ರಮುಖ ವಿರೋಧ ಪಕ್ಷಗಳಿಗೆ ಸೇರಿದವರು - ಕಾಂಗ್ರೆಸ್ ಮತ್ತು ಸಿಪಿಐ(ಎಂ). ಮತ್ತೊಬ್ಬರು ಆಳುವ ಕೂಟಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿರುವ ತೆಲುಗುದೇಶಂ ಪಕ್ಷದವರು. ಈ ನಿಯೋಗದಲ್ಲಿದ್ದ ಅಧಿಕಾರಶಾಹಿ ಪ್ರತಿನಿಧಿಗಳು ಎಂದರೆ ವಾಣಿಜ್ಯ ಕಾರ್ಯದರ್ಶಿ, ಪ್ರಧಾನಮಂತ್ರಿಗಳ ಕಾರ್ಯದರ್ಶಿ ಮತ್ತು ಅಮೆರಿಕಾ, ವಿಶ್ವಸಂಸ್ಥೆ ಹಾಗೂ ಡಬ್ಲ್ಯು.ಟಿ.ಓ. ದಲ್ಲಿನ ನಮ್ಮ ರಾಯಭಾರಿಗಳು. ಒಟ್ಟಾರೆಯಾಗಿ ಈ ತಂಡ ಚೆನ್ನಾಗಿಯೇ ಕೆಲಸ ಮಾಡಿತು ಎಂದು ತಂಡದ ಸದಸ್ಯರಲ್ಲೊಬ್ಬರಾದ ಸಿಪಿಐ(ಎಂ)ನ ಬಿಪ್ಲವ್ ದಾಸ್‌ಗುಪ್ತಾ ಹೇಳಿದ್ದಾರೆ. ಡಬ್ಲ್ಯು.ಟಿ.ಓ. ಬಗ್ಗೆ ಒಂದು ರಾಷ್ಟ್ರೀಯ ಒಮ್ಮತ ರೂಪಿಸಬೇಕೆಂಬ ಸಿಪಿಐ(ಎಂ) ಆಗ್ರಹ ಕೊನೆಗೆ ಸಿಯೆಟ್ಲ್‌ನಲ್ಲಾದರೂ ರೂಪುಗೊಂಡಿತು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಒಂದು ಮುಖ್ಯ ಅಪಸ್ವರ ಬಂದದ್ದು ಫಿಕಿ, ಸಿಐಐ ಮತ್ತು ಅಸೋಚಾಂ ಈ ಮೂರು ಬಂಡವಾಳಶಾಹಿ ಗುಂಪುಗಳ ಪ್ರತಿನಿಧಿಗಳಿಂದ ಮಾತ್ರ. ಅಮೆರಿಕಾ ಹೇಳಿದ ಹಾಗೆ ನಡೆಯದಿದ್ದರೆ ಭಾರತವನ್ನು ಮೂಲೆಗೊತ್ತಬಹುದು ಎಂದು ಈ ಮಂದಿ ಮತ್ತೆ-ಮತ್ತೆ 'ಎಚ್ಚರಿಸಲು' ಪ್ರಯತ್ನಿಸಿದರು!.

ಕಣ್ಣೂರು ಗಲಭೆಗಳ ಹಿಂದೆ....

ಪುಟ 10 ರಿಂದ

ಮಾಡುವಂತಹ ಬಾಂಬ್ ತಮ್ಮ ಬಳಿ ಇದೆ ಎಂದು ಹೇಳಿಕೊಂಡಿರುತ್ತಾರೆ.

ಕೇರಳದಲ್ಲಿ ಬಹಿರಂಗವಾಗಿ ಆಯುಧಗಳೊಡನೆ ಕವಾಯತು ನಡೆಸುವ ಒಂದೇ ಒಂದು ಸಂಘಟನೆ ಆರ್.ಎಸ್.ಎಸ್. ಆಗಿದೆ. ಇವರು ಮನುಷ್ಯರನ್ನು ಕೊಲ್ಲುವುದಕ್ಕೆ ಹಾಗೂ ತುಂಡು ಮಾಡಲು, ಹೊಡೆದು ಬೀಳಿಸಲು, ಸ್ಫೋಟಕ ಸಾಮಗ್ರಿಗಳನ್ನು ಉಪಯೋಗಿಸಲು ಶಾಸ್ತ್ರೀಯವಾಗಿ ತರಬೇತಿ ನೀಡುತ್ತಾರೆ. ಇದಕ್ಕಾಗಿ ದೊಡ್ಡ ರೀತಿಯಲ್ಲಿ ಆಯುಧಗಳನ್ನು ಶೇಖರಣೆ ಮಾಡುವುದು, ಅನಂತರ ಕೊಲೆ ನಡೆಸುವವರಿಗೆ ಆಯುಧ ತರಬೇತಿ ನಂತರ ಉನ್ನತ ತರಬೇತಿಗಾಗಿ ಆರ್.ಎಸ್.ಎಸ್.ಕೇಂದ್ರವಾದ ನಾಗಪುರಕ್ಕೆ ಕಳುಹಿಸಿ ಕೊಡುವುದು ನಡೆದುಕೊಂಡು ಬಂದಿದೆ.

ಈ ಆಯುಧಗಳು, ಕೊಲೆ ನಡೆಸುವವರು, ಸ್ಫೋಟಕ ವಸ್ತುಗಳು ಎಲ್ಲವನ್ನು ಆರ್.ಎಸ್.ಎಸ್.ನವರು ತಯಾರು ಮಾಡಿ ಇಟ್ಟಿರುತ್ತಾರೆ. ಇವರಮುಂದೆ ಸಿಪಿಐ(ಎಂ) ಸಂಬಂಧವಿರುವ ಯಾರೇ ಬರಲಿ ಅವರಿಗೆ ಅಪಾಯ ಕಾದಿರುತ್ತದೆ. ಇತ್ತೀಚೆಗೆ ತಲ್ಲಚೇರಿ ಬಳಿಯ ಪಾನೂರಿನಲ್ಲಿ ಸಿಪಿಐ(ಎಂ) ಹಿತೈಷಿಯಾದ ಮನೋಜ್‌ರವರನ್ನು ಕೊಲೆ ಮಾಡಿರುವುದು ಇದಕ್ಕೆ ಸಾಕ್ಷಿ. ಕಾಂ. ಮನೋಜ್ ರವರಿಗೆ ಅನೇಕ ಆರ್.ಎಸ್.ಎಸ್. ಸ್ನೇಹಿತರಿದ್ದರು. ಅವರ ಜೊತೆ ಕೆಲಸಕ್ಕೆ ತೆರಳುವಾಗ ಈ ಸ್ನೇಹಿತರೇ ಮನೋಜ್‌ರವರನ್ನು ತುಂಡರಿಸಿ ಕೊಲೆ ಮಾಡಿರುತ್ತಾರೆ.

ಸಿಪಿಐ(ಎಂ) ಪಕ್ಷಕ್ಕೆ ಮತ ನೀಡಿರುವ ಒಂದೇ ಕಾರಣಕ್ಕೆ ನಿವೃತ್ತ ಆರೋಗ್ಯ ನಿರೀಕ್ಷರಾದ ಕೃಷ್ಣನ್‌ನಾಯರ್‌ರವರನ್ನು ತುಂಡು, ತುಂಡಾಗಿ ಕತ್ತರಿಸಿ ಕೊಂದಿರುತ್ತಾರೆ. ಇದಲ್ಲದೆ ಮೈಸೂರಿನಲ್ಲಿ ಕೆಲಸ ಮಾಡಿ ಜೀವನ ನಡೆಸುವ ಕನಕರಾಜ್‌ರವರನ್ನು, ಅವರು ಪಾನೂರಿಗೆ ಬಂದಾಗ ಅವರನ್ನು ಮಾತ್ರವಲ್ಲದೆ ಕಾಂ.ಕುಂಜಿ ಕಣ್ಣನ್‌ವರನ್ನು ಸಹ ಅವರ ತಾಯಿ, ಮಡದಿ, ಮಕ್ಕಳ ಮುಂದೆಯೇ ಕೊಂದಿರುತ್ತಾರೆ. ಇವರು ಮಾಡಿರುವ ತಪ್ಪೇನು? ಆರ್.ಎಸ್.ಎಸ್. ಕೇಂದ್ರವಾದ ಕೈವೇಲಿ ಗ್ರಾಮದಲ್ಲಿ ಇವರು ಸಿಪಿಐ(ಎಂ) ಕಾರ್ಯಕರ್ತರಾಗಿದ್ದು ಏಕೈಕ ಕಾರಣ. ಈ ಕ್ರೂರ ಕೃತ್ಯಗಳ ಬಗ್ಗೆ ಯಾವುದೇ ಕಾಂಗ್ರೆಸ್ ನಾಯಕರಾಗಲೀ, ನಿಷ್ಪಕ್ಷದಿಂದ ನಡೆಯುವ ಯಾವುದೇ ಪ್ರಚಾರ ಮಾಧ್ಯಮಗಳಾಗಲೀ ಬರೆದಿರುವುದಿಲ್ಲ. ಏತಕ್ಕಾಗಿ ಈ ಕಪಟತನ ತೋರಿಸುವುದು? ಸಿಪಿಐ(ಎಂ) ಪಕ್ಷದವರು ಏಕಪಕ್ಷೀಯವಾಗಿ ಆಕ್ರಮಕ್ಕೆ, ಸಾವಿಗೆ ತುತ್ತಾಗುವುದು ಹಾಗೂ ಸಾಯಲು ಇರುವವರು ಎಂದು ಇವರು ಕಂಡಿರಬೇಕು. ಆರ್.ಎಸ್.ಎಸ್. ನವರು ಕೊಲೆ ಮಾಡುವ ಹಕ್ಕು ಉಳ್ಳ ಸಂಘಟನೆ ಎಂದು ಇವರು ಕಂಡಿರಬಹುದು. ಆರ್.ಎಸ್.ಎಸ್. ನವರ ಕತ್ತಿಯಿಂದ ಸತ್ತವರ ಕುಟುಂಬಗಳ ಕಣ್ಣೀರು ಇವರಿಗೆ ಕಾಣುತ್ತಿಲ್ಲವೇ? ಕಾಂಗ್ರೆಸ್-ಸಿಪಿಐ(ಎಂ) ವಿರೋಧದ ಹೆಸರಿನಲ್ಲಿ ಹೀನಾಯವಾದ ಮಾರ್ಗದಲ್ಲಿ ಸಿಪಿಐ(ಎಂ) ಅನ್ನು ಇಲ್ಲವಾಗಿಸುವ ತಂತ್ರವನ್ನು ಕಾಂಗ್ರೆಸ್‌ನವರು ಅಳವಡಿಸಿಕೊಂಡು ಬಂದಿರುತ್ತಾರೆ. ಇವತ್ತು ಸಿಪಿಐ(ಎಂ) ಗೆ ಆದ ಗತಿ ತಮಗೂ ಸಹ ಕಾದಿದೆ ಎಂದು ಕಾಂಗ್ರೆಸ್‌ನವರು ತಿಳಿದಿರುವುದಿಲ್ಲ. ಕೇರಳವನ್ನು ಸಂಘ ಪರಿವಾರದ ಸ್ವಾಧೀನ ರಾಜ್ಯವಾಗಿ ಮಾರ್ಪಾಡು ಮಾಡಲು ಮಾಡಲು ಆರ್.ಎಸ್.ಎಸ್. ನವರು ಹೊರಟಿದ್ದಾರೆ ಎಂದು ಕಾಂಗ್ರೆಸ್‌ನವರು ತಿಳಿದಿಲ್ಲ.

ಆರ್.ಎಸ್.ಎಸ್.ನವರು ಸಿಪಿಐ(ಎಂ)ಗೆ ಎದುರಾಗಿ ಮಾತ್ರವಲ್ಲ, ಪೋಲೀಸರ ವಿರುದ್ಧವಾಗಿಯೂ ಆಕ್ರಮಗಳನ್ನು ನಡೆಸಿರುತ್ತಾರೆ. ನಿರಂತರವಾಗಿ ಅನೇಕ ಪೋಲೀಸ್ ಅಧಿಕಾರಿಗಳು ಈ ಆಕ್ರಮಕ್ಕೆ ಬಲಿಯಾಗಿದ್ದಾರೆ. ತಲ್ಲಿಚೇರಿಯ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ರವರನ್ನು ಕೊಲೆ ಮಾಡಲು ಪ್ರಯತ್ನಿಸಲಾಯಿತು. ಇದೇ ಪ್ರದೇಶದಲ್ಲಿ ಡಿವೈಎಸ್‌ಪಿಯವರ ಮೇಲೆ ಬಾಂಬ್ ಹಾಕಲಾಯಿತು. ಸರ್ಕಲ್ ಇನ್ಸ್‌ಪೆಕ್ಟರರವರಮೇಲೆ ಹಲ್ಲೆ ನಡೆಸಿದ್ದಾರೆ. ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರ ರಿವಾಲ್ವರ್ ಕಸಿದು ಕೊಂಡಿರುತ್ತಾರೆ. ಪೋಲೀಸರು ದಸ್ತಗಿರಿ ಮಾಡಿದವರನ್ನು ಬಿಡುಗಡೆ ಮಾಡಾಲು ಪೋಲೀಸ್ ವ್ಯಾನಿನ ಮೇಲೆ ಬಾಂಬ್ ದಾಳಿ ನಡೆಸಿ, ಬಂಧಿತ ಕೊಲೆಗಡುಕರನ್ನು ಬಿಡಿಸಿ, ವ್ಯಾನ್‌ಗೆ ಬೆಂಕಿ ಹಚ್ಚಿರುತ್ತಾರೆ. ಅಲ್ಲಪುಳಾದಲ್ಲಿ ಡಿವೈಎಸ್‌ಪಿಯ ಮೇಲೆ ಹಲ್ಲೆ ನಡೆಸಿರುತ್ತಾರೆ. ಈ ಹಲ್ಲೆ ನಡೆಸಿದ ಆರ್.ಎಸ್.ಎಸ್. ಕಾರ್ಯಕರ್ತರನ್ನು ದಸ್ತಗಿರಿ ಮಾಡಿದ ಕಾರಣಕ್ಕೆ ಡಿವೈಎಸ್‌ಪಿ ಮನೆ ಮೇಲೆ ಹಲ್ಲೆ ನಡೆಸಲಾಯಿತು. ಈ ಅಟ್ಟಹಾಸಗಳನ್ನು ನಡೆಸುವ ಮುಂಚೆ ಸಂಘ ಪರಿವಾರದವರು ಒಂದು ಕರಪತ್ರ ಬಿಡುಗಡೆ ಮಾಡಿ ಪೋಲೀಸರಿಗೆ ಎಚ್ಚರಿಕೆ ನೀಡುತ್ತಾರೆ. ಈ ನೋಟಿಸಿನಲ್ಲಿ ಪೋಲೀಸರ ಮನೆಯವರ ಮೇಲೆ ಆಕ್ರಮಣ ನಡೆಸುತ್ತೇವೆ ಮಾತ್ರವಲ್ಲ ಅವರ ಕುಟುಂಬದವರು ಬೇರೆ ರಾಜ್ಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದದರೆ ಅವರಿಗೆ ಏನು ಮಾಡುತ್ತೇವೆ ಎಂದು ನೋಡಿ ಎಂಬ ಕರಪತ್ರ ಹೊರಡಿಸುತ್ತಾರೆ. ಮಾತ್ರವಲ್ಲ ನಾವು ಮಾರ್ಕ್ಸಿಸ್ಟರನ್ನು ಕೊಲೆ ಮಾಡುತ್ತೇವೆ, ಹಲ್ಲೆ ಮಾಡುತ್ತೇವೆ, ಆದರೆ ಈ ಬಗ್ಗೆ ಪೋಲೀಸರು ಅಲ್ಲಾಡಬಾರದು ಎಂದು ಎಚ್ಚರಿಕೆ ನೀಡಿರುತ್ತಾರೆ, ತಪ್ಪಿದಲ್ಲಿ ನೀವು ಮುಂದೆ ಅನುಭವಿಸಬೇಕಾಗುತದೆ ಎಂದು ಸಹ ಹೇಳಲಾಗಿದೆ. ಈ ರೀತಿ ಒಂದು ಭಯಾನಕ ಪರಿಸ್ಥಿತಯನ್ನು ಕಣ್ಣೂರಿನಲ್ಲಿ ಉಂಟು ಮಾಡಿ, ರಾಜ್ಯದ ಶಾಂತ ಜನ ಜೀವನವನ್ನು ಏರುಪೇರು ಮಾಡಲು ಹೊರಟಿರುತ್ತಾರೆ. ಈ ಏರುಪೇರು ವಿರುದ್ಧ ಎಲ್ಲಾ ಶಾಂತಿಪ್ರಿಯ ಸಂಘಟನೆಗಳು, ಚಳುವಳಿಗಳು, ವ್ಯಕ್ತಿಗಳು ಎಚ್ಚರಿಕೆಯಿಂದ ಇರಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಸಿಪಿಐ(ಎಂ) ಎಂದೂ ಆಕ್ರಮಣಕಾರಿ ಪ್ರವೃತ್ತಿಯನ್ನು ನಂಬುವುದಿಲ್ಲ ಹಾಗೂ ಈ ಪ್ರವೃತ್ತಿಗೆ ಹೋಗುವುದಿಲ್ಲ. ಈ ಯಥಾರ್ಥ ಸತ್ಯವನ್ನು ಪತ್ರಿಕೆ ಮತ್ತು ಮಾಧ್ಯಮಗಳು ಹೊರತರಬೇಕಾಗಿದೆ.

○

ಆರಂಭವಾಗಿದೆ ಗ್ರಾಮಾಂತರ ಕೃಪಾಂಕಕ್ಕಾಗಿ ಹೋರಾಟದ ಅಂಕ



ಆರ್.ರಾಮಕೃಷ್ಣ

ಕರ್ನಾಟಕ ರಾಜ್ಯ ಹೈಕೋರ್ಟ್‌ನ ವಿಭಾಗೀಯ ಪೀಠವು, ಇದುವರೆಗೆ ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳ ಪ್ರಶ್ನೆಯಲ್ಲಿ ಗ್ರಾಮಾಂತರ ವಿದ್ಯಾರ್ಥಿ-ಅಭ್ಯರ್ಥಿಗಳಿಗೆ ಇದ್ದ ಕೃಪಾಂಕ ಅವಕಾಶವನ್ನು ರದ್ದು ಪಡಿಸಿ ತನ್ನ ತೀರ್ಪು ನೀಡಿದೆ.

ದೇಶ ಸ್ವಾತಂತ್ರ್ಯ ಕಂಡು ಅರ್ಧ ಶತಮಾನವೇ ಉರುಳಿ ಹೋಗಿದೆ. ಆದರೆ ದೇಶದ ಶೇ 70 ರಷ್ಟು ಜನ ಬದುಕುತ್ತಿರುವ ಗ್ರಾಮಾಂತರ ಪ್ರದೇಶಗಳಿಗೆ, ಯಾವುದೇ ಸಮಾಜದ ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ಸಾರಿಗೆ ವ್ಯವಸ್ಥೆ, ವಿದ್ಯುತ್ ಇತ್ಯಾದಿಗಳನ್ನು ಪೂರೈಸುವಲ್ಲಿ ನಮ್ಮ ಆಳುವ ಸರ್ಕಾರಗಳು ವಿಫಲವಾಗಿವೆ. ಶಿಕ್ಷಣ ಸೌಲಭ್ಯಗಳ ಪ್ರಶ್ನೆಯಲ್ಲಂತೂ ಆ ಮಾತು ಮತ್ತಷ್ಟು ನಿಜ.

ಕೈಗಾರಿಕೆ-ವಾಣಿಜ್ಯ-ಉದ್ದಿಮೆ ಇತ್ಯಾದಿ ಯಾವುದೇ ಪ್ರಶ್ನೆ ಇರಲಿ ಜನಪರ ಅಭಿವೃದ್ಧಿಯೆಂಬ ಬೆಳವಣಿಗೆಯ ದಾರಿಯಿಂದ ದೂರವೇ ಉಳಿದಿರುವ ಕರ್ನಾಟಕದಂತಹ ರಾಜ್ಯದಲ್ಲಿ ಆಗಿರುವ ಬೆಳವಣಿಗೆಯೂ ನಗರ ಕೇಂದ್ರೀಕೃತವಾಗಿದ್ದು ಗ್ರಾಮಾಂತರ ಪ್ರದೇಶಗಳು, ಈ ಪ್ರದೇಶದ ಜನರು ಪರಂಪರಾಗತವಾದ ಮೌಢ್ಯ ಮುಸುಕಿದ ಅದೇ ಗ್ರಾಮೀಣ ಪರಿಸರದಲ್ಲಿಯೇ ಕಾಲತಳ್ಳಬೇಕಿದೆ. ಕಾರ್ಖಾನೆ-ವಾಣಿಜ್ಯ-ಉದ್ದಿಮೆ-ಮಾಹಿತಿ-ಮನರಂಜನಾ ಸಾಧನ-ಸಂಸ್ಥೆ ಆರೋಗ್ಯ ಸೌಕರ್ಯಗಳು ಎಲ್ಲವೂ ನಗರಗಳಲ್ಲಿ ಬೀಡು ಬಿಟ್ಟಿವೆ. ಈ ವ್ಯವಸ್ಥೆಯ ಭಾಗವಾಗಿಯೇ ಶಿಕ್ಷಣ ಸೌಲಭ್ಯಗಳೂ ಸಹ ನಗರ ಕೇಂದ್ರಿತವಾಗಿಯೇ ಇವೆ.

ಬೆಂಗಳೂರು-ಮೈಸೂರು-ಮಂಗಳೂರು ಇತ್ಯಾದಿ ನಗರಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಲಭ್ಯವಿರುವ ಶೈಕ್ಷಣಿಕ ಸೌಲಭ್ಯಗಳೂ ಪೂರಕ ಸೌಕರ್ಯಗಳು, ಒಟ್ಟಾರೆ ಶೈಕ್ಷಣಿಕ ಪರಿಸರ ಗ್ರಾಮಾಂತರ ಪ್ರದೇಶಗಳಲ್ಲಿ ದೊರೆಯುವುದು ದುರ್ಲಭ. ನಮ್ಮ ರಾಜ್ಯ ಸರ್ಕಾರದ ಅಂಕಿ ಅಂಶಗಳೇ ಸಾರುವಂತೆ. ಗ್ರಾಮಾಂತರ ಪ್ರದೇಶದ ಸಾವಿರಾರು ಶಾಲೆಗಳಲ್ಲಿ ಸಮರ್ಪಕವಾದ ಕಟ್ಟಡಗಳಿಲ್ಲ. ಸಾವಿರಾರು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕಟ್ಟಡ-ಶಿಕ್ಷಕರೇ ಇಲ್ಲ ಎಂದ ಮೇಲೆ ಗ್ರಂಥಾಲಯ-ಪ್ರಯೋಗಾಲಯ-ಕ್ರೀಡಾ-ಸಾಂಸ್ಕೃತಿಕ ಚಟುವಟಿಕೆಗಳ ಅವಕಾಶ ಸೌಲಭ್ಯಗಳ ಬಗೆಗೆ ಮಾತನಾಡುವಂತೆಯೇ ಇಲ್ಲ.

ಇದು ಮಾಹಿತಿ ಸ್ಫೋಟದ ಯುಗ. ಶಾಲೆಯಲ್ಲಿನ ಪಠ್ಯ-ಪಾಠ, ಶಿಕ್ಷಕರು, ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎಂಬುದು ನಿಜವಾದರೂ ತಾನು ಬದುಕುವ ಒಟ್ಟಾರೆ ಪರಿಸರವೂ ಮನುಷ್ಯನ ಅರಿವು, ಪ್ರಜ್ಞೆಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ನಗರ ಹಾಗೂ ಗ್ರಾಮಾಂತರ ಪ್ರದೇಶ ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳ ನಡುವೆ ಈ ವಿಚಾರದಲ್ಲಿ ಅಗಾಧವಾದ ಅಂತರ ಇದೆ. ಈಗ ಶಾಲೆಯಲ್ಲಿ ಕಲಿಯುತ್ತಿರುವವರೇ ತಮ್ಮ ಕುಟುಂಬದಲ್ಲಿ ಶಾಲೆಯ ಮೆಟ್ಟಿಲು ಹತ್ತಿದ 'ಪ್ರಥಮ ತಲೆಮಾರಿನ ಶಿಕ್ಷಿತ'ರಾಗಿರುವ ಸಾಧ್ಯತೆ ಗ್ರಾಮಾಂತರ ಪ್ರದೇಶಗಳಲ್ಲಿ ವಿಪರೀತ ಇದೆ. ತಮ್ಮ ಬದುಕಿನ ಜೊತೆ ಜೊತೆಗೆ



ಬೆಸೆದುಕೊಂಡ ಕೃಷಿ ಚಟುವಟಿಕೆ-ಕೂಲಿ -ದುಡಿತಗಳೊಂದಿಗೆ ದೀಪದ ಬೆಳಕಿನಲ್ಲಿ ಇಲ್ಲವೇ 'ಮಂಪರು' ಹಿಡಿದ 'ಲೈಟು'ಬೆಳಕಿನಲ್ಲಿ ಓದು, ಶಾಲೆ-ಕಾಲೇಜಿಗೆ ಬರಲು ಮೈಲಿಗಟ್ಟಲೆ ನಡಿಗೆ, ಹತ್ತಾರು ಮೈಲಿ ಬಸ್ ಪ್ರಯಾಣ ಇತ್ಯಾದಿ ಬವಣೆ.

ನಗರಗಳಲ್ಲಿನ ಪತ್ರಿಕೆ-ದೂರದರ್ಶನ-ದೂರದರ್ಶನದ ವಿವಿದ ಚಾನೆಲ್‌ಗಳು, ಇಂಟರ್‌ನೆಟ್, ಕಂಪ್ಯೂಟರ್ ಹೆಚ್ಚಿನ ಸಂಖ್ಯೆಯ ಶಿಕ್ಷಿತರು - ತುಲನಾತ್ಮಕವಾಗಿ ಉತ್ತಮ ಶೈಕ್ಷಣಿಕ ಸೌಲಭ್ಯಗಳು ಇತ್ಯಾದಿಗಳನ್ನೊಳಗೊಂಡ ಪರಿಸರದಲ್ಲಿ ಸಹಜವಾಗಿ ಮೂಡುವ ಅರಿವು-ತಿಳುವಳಿಕೆಯಿಂದ ಗ್ರಾಮಾಂತರ ಪ್ರದೇಶದ ಜನ ವಂಚಿತರಾಗಿದ್ದಾರೆ. ಈ ಕಾರಣಗಳಿಂದಾಗಿ ನಗರ ಪ್ರದೇಶಗಳಲ್ಲಿನ ಜನರ ಬುದ್ಧಿಮತ್ತೆ ಸಾಕಷ್ಟು ಹೆಚ್ಚಿರುತ್ತದೆ. ಹೀಗಾಗಿ ವಿದ್ಯಾರ್ಥಿ, ಶೇಕಡಾವಾರು ಹೆಚ್ಚು ಅಂಕ ಗಳಿಸುವ, ರ್‍ಯಾಂಕ್ ಗಳಿಸುವ ಅವಕಾಶಗಳೂ ಹೆಚ್ಚು.

ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿಯಲ್ಲಿ ಅಸಮಾನತೆ ನಿವಾರಣೆಯಾಗಿ ಗ್ರಾಮಾಂತರ ಪ್ರದೇಶಗಳಿಗೂ ಶೈಕ್ಷಣಿಕ ಸೌಲಭ್ಯಗಳು ವಿಸ್ತರಣೆಯಾಗಿಉತ್ತಮ ಶೈಕ್ಷಣಿಕ ಪರಿಸರ ರೂಪುಗೊಳ್ಳುವವರೆಗೆ ಗ್ರಾಮಾಂತರ ಕೃಪಾಂಕ ಮುಂದುವರಿಯುವುದು ತೀರಾ ಅಗತ್ಯ.

ಕರ್ನಾಟಕ ರಾಜ್ಯ ಸರ್ಕಾರವು ತಾನು ಗ್ರಾಮಾಂತರ ಕೃಪಾಂಕದ ಪರವಾಗಿಇರುವುದಾಗಿಯೂ, ಈ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಹೋಗುವುದಾಗಿ ಘೋಷಿಸಿದೆ. ಘೋಷಣೆಯ ತೀವ್ರತೆ ಕೃತಿಯಲ್ಲಿ ಕಾಣುತ್ತಿಲ್ಲ. ಹೈಕೋರ್ಟ್‌ಗೆ ನಗರ-ಗ್ರಾಮಾಂತರ ನಡುವೆ ಇರುವ ವ್ಯತ್ಯಾಸಗಳ ಕುರಿತು ಯಾವುದೇ ನಿರ್ದಿಷ್ಟ ಮಾಹಿತಿ ಒದಗಿಸಿಲ್ಲ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಪ್ರಸ್ತಾಪಿಸಿದೆ. ಮತ್ತು ಸಂವಿಧಾನದ 14, 15,16 ರ ವಿಧಿಗಳನ್ನು ಉಲ್ಲೇಖಿಸಿದ ಹೈಕೋರ್ಟ್ ಸಂವಿಧಾನದ ಗ್ರಾಮೀಣ ಕೃಪಾಂಕ ನೀತಿಯು 'ಸಮಾನತೆ' ರಾಜ್ಯದ ತಾರತಮ್ಯ ರಹಿತ ನೀತಿ ಹಾಗೂ ಸಮಾನ ಅವಕಾಶಗಳ ಆಶಯಗಳ ವಿರುದ್ಧ ಇದೆ ಎಂದು ವಿವರಿಸಿ ಗ್ರಾಮೀಣಕೃಪಾಂಕ ವನ್ನು ರದ್ದುಪಡಿಸಿದೆ.

ಈಗಾಗಲೇ, ಆಂಧ್ರಪ್ರದೇಶ, ಮಹಾರಾಷ್ಟ್ರ,ಹರ್‍ಯಾಣ, ಉತ್ತರ ಪ್ರದೇಶ ಮುಂತಾದ ರಾಜ್ಯಗಳ ಇದೇ ರೀತಿಯ ಕೃಪಾಂಕ ನೀತಿಗೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಸುಪ್ರೀಂಕೋರ್ಟ್ ಹಲವು ತೀರ್ಪುಗಳನ್ನು ನೀಡಿರುವುದರಿಂದ ಮತ್ತೊಮ್ಮೆ ಕರ್ನಾಟಕ ರಾಜ್ಯ ಸರ್ಕಾರದ ಮೇಲ್ಮನವಿಗೆ ಇದೇ ತೀರ್ಪು ಕಾದಿದೆ ಎಂಬುದು ಸ್ಪಷ್ಟ.

ಒಂದೊಮ್ಮೆ ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಗ್ರಾಮಾಂತರ ಕೃಪಾಂಕವನ್ನು ನೀಡುವ ಬದ್ಧತೆ-ಕಾಳಜಿ ಏನಾದರೂ ಇದ್ದಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಬದಲಾಗಿ ಗ್ರಾಮೀಣ ಕೃಪಾಂಕ ಮುಂದುವರಿಕೆಗೆ ಅವಕಾಶವಾಗುವಂತೆ ತತ್‌ಕ್ಷಣ ಸುಗ್ರೀವಾಜ್ಞೆ ಹೊರಡಿಸಲು ಶಿಫಾರಸು ಮಾಡುವುದು ಮತ್ತು ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ ಅಗತ್ಯ ಸಂವಿಧಾನ ತಿದ್ದುಪಡಿ ತರುವಂತೆ ಒತ್ತಡ ತರುವುದು ಇದೊಂದೆ ಈಗ ಈ ಸಮಸ್ಯೆಯ ಪರಿಹಾರ... ಉಳಿದಿರುವ ಏಕೈಕ ಮಾರ್ಗ.

ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳ... ಉಲ್ಲೇಖಿಸಿಯೇ ರಾಜ್ಯ ಹೈಕೋರ್ಟ್ ವಿಭಾಗೀಯ ಪೀಠ ತೀರ್ಪು ನೀಡಿರುವಾಗ ರಾಜ್ಯ ಸರ್ಕಾರ ಮತ್ತೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಹೋಗಬೇಕಿ... ಎಂಬುದೇ ನಡು... ಅರ್ಥವಾಗದಿರುವ ಪ್ರ... 'ಗ್ರಾಮಾಂತರ' ಎಂದು ಈಗ ಪರಿಗಣಿಸಲಾಗಿರು... ಕಡೆ ಕೆಲವು ಉತ್ತಮ ಸೌಕರ್ಯ-ಸೌಲಭ್ಯಗಳುಳ್ಳ ಶಿಕ್ಷ... ಸಂಸ್ಥೆಗಳಿರುವುದನ್ನು ತೀರ್ಪಿನಲ್ಲಿ ಉಲ್ಲೇಖಿಸಲಾಗಿ... ಆದರೆ 'ಗ್ರಾಮಾಂತರ ಪ್ರದೇಶ' ಎಂದು... ತೀರ್ಮಾನಿಸಲು ಇರುವ ಅಳತೆಗೋಲು ಮತ್ತು ಶೇ... ಎಷ್ಟು ಅಂಕಗಳನ್ನು ಕೃಪಾಂಕವಾಗಿ ನೀಡಬೇಕು ಇತ್ಯಾ... ಅಂಶಗಳ ಬಗೆಗೆ ವೈಜ್ಞಾನಿಕ ಅಧ್ಯಯನಕ್ಕೆ ನಿಷ್ಕರ್ಷೆ... ಅವಕಾಶ ಉಳಿಸಿಕೊಳ್ಳಬಹುದು. ಆದ... 'ಗ್ರಾಮಾಂತರ' ವ್ಯಾಪ್ತಿಯಲ್ಲಿ ಈಗ ಬರುವ ಕೆಲ... ಪಟ್ಟಣ-ಪ್ರದೇಶಗಳಲ್ಲಿ ಉತ್ತಮ ಸೌಲಭ್ಯ ಇದೆ ಎನ್ನು... ಅಂಶ ಹಳ್ಳಿಗಾಡಿನಲ್ಲಿ ಅರಿವಿನ ಬೆಳಕನ್ನು ಕಾಣು... ಅವಕಾಶವಿಲ್ಲದೆ ನರಳುವ ಲಕ್ಷಾಂತರ ವಿದ್ಯಾರ್ಥಿಗ... ತೊಡಕನ್ನು ಕಡಿಮೆ ಮಾಡುವುದಿಲ್ಲ.

ನಗರ ಪ್ರದೇಶಗಳ ಬಡವರು, ಗುಡಿಸಲು ನಿವಾ... ಗಳು ಸಹ ಅವಕಾಶವಂಚಿತರು ಎಂಬ ಅ... ಪರಿಗಣಿಸಬೇಕಾದದ್ದೆ. ಆದರೆ ಈ ಸಮಸ್ಯೆ ಬಗ್ಗೆ... ಪ್ರತ್ಯೇಕವಾಗಿಯೇ ಚರ್ಚಿಸಬೇಕಿದೆ. ಸಮಸ್ಯೆಗೆ ಸು... ಪರಿಹಾರ ರೂಪಿಸಬೇಕಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್(SFI), ಭಾರ... ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DY... ಸಂಘಟನೆಗಳು ಗ್ರಾಮಾಂತರ ಕೃಪಾಂಕದ ವಿಚಾರದ... ಸ್ಪಷ್ಟ ನಿಲುವನ್ನು ವಿದ್ಯಾರ್ಥಿ-ಯುವಜರ ಮುಂದಿಟ್ಟಿ...

ಗ್ರಾಮಾಂತರ ಪ್ರದೇಶಗಳಿಗೆ ಶೈಕ್ಷಣಿಕ ಸೌಲಭ್ಯ... ವಿಸ್ತರಣೆ ಈ ಸಮಸ್ಯೆಗೆ ಶಾಶ್ವತ ಪರಿಹಾ... ಅಲ್ಲಿಯವರೆಗೆ ಗ್ರಾಮಾಂತರ ವಿದ್ಯಾರ್ಥಿ-ಅಭ್ಯರ್ಥಿಗ... ಕೃಪಾಂಕ ಮುಂದುವರಿಯಬೇಕು. ಈ ನಿರ್ದಿ... ಸಂದರ್ಭದಲ್ಲಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸ... ಅಗತ್ಯ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಸು... ಸಂವಿಧಾನ ತಿದ್ದುಪಡಿ ತರಲು ಕೇಂದ್ರ ಸರ್ಕಾ... ಮೇಲೆ ಒತ್ತಡ ತರಬೇಕು.

ಈ ಬೇಡಿಕೆಯೊಂದಿಗೆ ಡಿಸೆಂಬರ್ 2, 99 ರಂ... ರಾಜ್ಯವ್ಯಾಪಿ ಪ್ರತಿಭಟನೆಗಳು ವ್ಯಾಪಕವಾಗಿ ನಡೆದ... ಡಿಸೆಂಬರ್ 22,99 ರಂದು ಬೆಂಗಳೂರಿನ... ಸಾವಿರಾರು ವಿದ್ಯಾರ್ಥಿ-ಯುವಜನರ ಬೃಹ... ರಾಜ್‌ಭವನ್ ಚಲೋ ಸಂಘಟಿಸಲು ತೀರ್ಮಾ... ತೀವ್ರ ಸಿದ್ಧತೆ ನಡೆಸಿವೆ. ಸ್ವಯಂ ಸ್ಫೂರ್ತಿಯಿ... ವಿದ್ಯಾರ್ಥಿಗಳು ರಾಜ್ಯಾದ್ಯಂತ ಬೀದಿಗಿಳಿದಿದ್ದಾರೆ...

ಡಿಸೆಂಬರ್ 22 ರ ರ್‍ಯಾಲಿ ಮತ್ತು ಹೋರಾಟಗ... ಯಶಸ್ವಿಗೊಳಿಸುವುದೇ 'ಗ್ರಾಮಾಂತರ ಕೃಪಾಂಕ'... ಸಾಧಿಸುವ ಹಾಗೂ ಆಳುವ ಸರ್ಕಾರಗಳ... ಎಚ್ಚರಿಸುವ ದಾರಿ.

ಕೃಪಾಂಕಕ್ಕೆ ನಾವು ಬದ್ಧರೆಂದರೆ ಸಾಲದು ಮಾತಿನ ದಾಟಿ ಕೃತಿಯಲ್ಲಿ ಬರಲಿ ಕೃಷ್ಣಾರವರೇ,



ಬೆಳಗ್ಗೆ ಎದ್ದರೆ ಕೊಟ್ಟಿಗೆ ಸಾರಿಸಿ, ದನ-ಕರುಗಳಿಗೆ ಹುಲ್ಲಾಕಿ, ಹಾಲು ಕರೆಯಲು ಅನುವುಗೊಳಿಸಿ, ಕರೆವ ಹಾಲನ್ನು ಡೈರಿಗೆ ಹಾಕಿ, ಶಾಲೆಗೆ ದೌಡಾಯಿಸುವ ಹಳ್ಳಿ ಮಕ್ಕಳು, ಮನೆಯಿಂದ ಸುಮಾರು ಮೈಲಿ ನಡೆದೇ ಹೋಗಿ ಶಾಲೆ ತಲುಪುವ ಅವರಿಗೆ ಶಾಲೆಗೆ ಹೋದೊಡನೆ ಅಲ್ಲಿ ಕಾದಿರುವುದು ಸುಸಜ್ಜಿತವಾದ ಶಾಲೆ - ಕೊಠಡಿ, ಮೇಸ್ಟ್ರಲ್ಲ. ಆಗಲೋ ಈಗಲೋ ಬಿದ್ದೋಗುವ ಕೊಠಡಿ, ಮೇಸ್ಟ್ರಿದ್ದರೆ-ಕೊಠಡಿಯಿಲ್ಲ ಎರಡೂ ಇದ್ದರೆ - ಕಪ್ಪು ಹಲಗೆ (ಬ್ಲಾಕ್ ಬೋರ್ಡ್) ಇಲ್ಲದಿರುವುದು. ಶಾಲೆಗೆ ಹೋಗಿ ಹಿಂತಿರುಗಿ ಬಂದೊಡನೆ ಅಪ್ಪನೋ ಅಮ್ಮನೋ ಹೇಳುವ ಗದ್ದೆ-ಹೊಲ-ತೋಟದ ಕೆಲಸ, ದನ-ಕುರಿ-ಎಮ್ಮೆ ಕಾಯುವ ಕೆಲಸ ಇವೆಲ್ಲವೂ ಸಹ ನಮ್ಮ ಗ್ರಾಮಾಂತರ ಪ್ರದೇಶದ ಮಕ್ಕಳ ಶಿಕ್ಷಣದ ಭಾಗ.

ಇವರು ಹಾಗೂ ನಗರದಲ್ಲಿ ಶಾಲೆ- ಟ್ಯೂಷನ್-ಟಿ.ವಿ., ಪಾರ್ಕ್, ಲೈಬ್ರರಿ ಇಷ್ಟೇ ಶಿಕ್ಷಣ - ಜೀವನ, ಬದುಕೆಂದುಕೊಂಡಿರುವ ನಗರದ ವಿದ್ಯಾರ್ಥಿಗಳೊಂದಿಗೆ ಇವರು ಸ್ಪರ್ಧಿಸಬೇಕು. ಇಂದೂ ಸಹ ಗ್ರಾಮಾಂತರ ಪ್ರದೇಶದ ಮಹಿಳಾ ಸಾಕ್ಷರತೆ ಶೇ. 35 ರಷ್ಟು ಮಾತ್ರವಾಗಿದೆ. ಈ ಅನಕ್ಷರಸ್ತ ತಾಯಂದಿರು ತಮ್ಮ ಮಕ್ಕಳು ಓದಬೇಕು ನೌಕರಿ ಸೇರಬೇಕು, ದೊಡ್ಡ ಸಾಹೇಬರಾಗಬೇಕೆಂಬ ಮಹಾದಾಸೆ ಹೊಂದಿದ್ದರೂ ಸಹಾ ತನ್ನ ಅ,ಆ,ಇ,ಈ ಕಲಿಯುವ ಮಗು ಕೇಳುವ ಪ್ರಶ್ನೆಗೆ ಹೇಗೆ ತಾನೆ ಉತ್ತರಿಸಿಯಾಳು? ತಾಯಿ-ತಂದೆ ಪಾಠ ಕಲಿಯಲು ಸಹಾಯ ಮಾಡದಿದ್ದರೆ ಹೋಗಲಿ, ಊರಲ್ಲಿ ಪಾಠ ಹೇಳಿಕೊಡುವವರು ಇಲ್ಲ, ತಾನೇ ಓದಿಕೊಳ್ಳೋಣವೆಂದರೆ ಹಾಳಾದ್ದ ಕೆರಂಟ್ ಕೂಡ ಇರದ್ದು, ಇದ್ದರೂ ಸಹ 'ಹಾಫ್‌ಫ್ಯೂಸ್' ಇಂತೆಲ್ಲಾ. ಸಮಸ್ಯೆಯೊಂದಿಗೆ 300 ಜನಸಂಖ್ಯೆ ಇರುವ ಶೇ. 40ರಷ್ಟು ಊರಿನ ಮಕ್ಕಳು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕನಿಷ್ಠ 3 ಕಿ.ಮಿ., ಪ್ರೌಢಶಾಲೆಗಳಿಗೆ ಶೇ. 60ರಷ್ಟು ಊರಿನ ಮಕ್ಕಳು ಕನಿಷ್ಠ 3 ಕಿ.ಮಿ. ನಡೆದು ಹೋಗಬೇಕಾದ ಪರಿಸ್ಥಿತಿ ವಾಸ್ತವ ಸಂಗತಿ- ಸರ್ಕಾರದ ಅಂಕಿ-ಸಂಖ್ಯೆಗಳ ಪ್ರಕಾರವೇ ಇದೆ. (ಮಾನವ ಅಭಿವೃದ್ಧಿ ವರದಿ - ಕರ್ನಾಟಕ ರಾಜ್ಯ ಸರ್ಕಾರ).

ರಾಜ್ಯ ಸರ್ಕಾರ ರಾಜ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಕಟು ಸತ್ಯವನ್ನೇಕೆ ಹೇಳಲಿಲ್ಲ. ಅಂತೆಯೇ ಕಣ್ಣಿಗೆ ರಾಚುವಂತೆ ಬರುವ ಎಸ್.ಎಸ್.ಎಲ್.ಸಿ. ಪರೀಕ್ಷೆ, 7ನೇ ತರಗತಿ ಪರೀಕ್ಷೆ ಫಲಿತಾಂಶಗಳಲ್ಲಿರುವ ನಗರ ಹಾಗೂ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ಮಧ್ಯೆಯಿರುವ ಅಜಗಜಾಂತರ ಅಂತರಗಳ ವಿವರವನ್ನು ಏಕೆ ನ್ಯಾಯಾಲಯಕ್ಕೆ ಸಲ್ಲಿಸಲಿಲ್ಲ? 52 ವರ್ಷಗಳ ಸ್ವತಂತ್ರ್ಯದ ನಂತರವೂ ಶಿಕ್ಷಣವನ್ನು ಸಮರ್ಪಕವಾಗಿ ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ನ್ಯಾಯಾಲಯ ಎಲ್ಲಿ ಛೀಮಾರಿ ಹಾಕೀತೋ ಎಂಬ ಭಯ ಬಹುಶಃ ಹಿಂದಿನ ಪಟೇಲರ ಹಾಗೂ ಇಂದಿನ ಕೃಷ್ಣರ ಎರಡೂ ಸರ್ಕಾರಗಳನ್ನು ಕಾಡುತ್ತಿರಬಹುದು.

ಈಗಾಗಲೇ ಕೃಷ್ಣಾರವರು ಹೇಳಿರುವಂತೆ ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ನಂತರವೂ ವಾಸ್ತವದಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶಗಳ ನಡುವೆ ಇರುವ ಈ ಅಂತರವನ್ನು ಸ್ಪಷ್ಟವಾಗಿ ಪ್ರತಿಪಾದಿಸಲು ಅಂಜಿದರೆ, ನಮ್ಮ ಗ್ರಾಮಾಂತರ ಅಭ್ಯರ್ಥಿಗಳ ಶೇ. 10ರಷ್ಟು ಕೃಪಾಂಕದ ಗತಿಯೇನು ಎಂಬ ಪ್ರಶ್ನೆ ಪ್ರತಿಯೊಬ್ಬ ಸಾಮಾಜಿಕ ನ್ಯಾಯ ಬಯಸುವ ಹೃದಯವನ್ನು ಕಾಡುತ್ತಿರುವುದಂತೂ ನಿಜ. ಈಗಾಗಲೇ ಹರಿಯಾಣ ಸರ್ಕಾರ ಸುಪ್ರಿಂ ಕೋರ್ಟ್‌ಗೆ ಹೋಗಿ ಮುಗ್ಗರಿಸಿರುವಂತೆ, ಅಂತೆಯೇ ತೆಲಗು ಮಾಧ್ಯಮದ ಅಭ್ಯರ್ಥಿಗಳಿಗೆ ಶೇ. 5 ರಷ್ಟು ಕೃಪಾಂಕ ನೀಡುವ ನೀತಿ, ಅಂತೆಯ ಮಹರಾಷ್ಟ್ರ, ರಾಜಸ್ಥಾನ ಉತ್ತರ ಪ್ರದೇಶ ಹಾಗೂ ರಾಜಸ್ಥಾನ ಸರ್ಕಾರಗಳು ಮುಗ್ಗರಿಸಿರುವಂತೆ ಕರ್ನಾಟಕ ಸರ್ಕಾರವು ಮುಗ್ಗರಿಸಿದರೆ ಗ್ರಾಮಾಂತರ ಕೃಪಾಂಕದ ಪಾಡೇನು ಎಂಬ ಪ್ರಶ್ನೆ ಸರ್ವಸಾಮಾನ್ಯವಾಗಿ ಎಲ್ಲರ ಮುಂದಿನ ಪ್ರಶ್ನೆಯಾಗಿದೆ. ಆದಕಾರಣದಿಂದಲೇ ಈಗಾಗಲೇ ಸುಪ್ರಿಂಕೋರ್ಟ್ ಗ್ರಾಮಾಂತರ ಕೃಪಾಂಕ ನೀಡಿಕೆ - ಅಸಿಂಧು ಎಂದು ಸುನಿಲ್ ಜೈಟ್ಲೆ Vs ಹರಿಯಾಣ ಸರ್ಕಾರ ಕೇಸಿನಲ್ಲಿ ಸ್ಪಷ್ಟ ತೀರ್ಪನಿತ್ತಿರುವ ಕಾರಣ, ಸಂವಿಧಾನದ ಪರಿಚ್ಛೇದ 14,15 ಹಾಗೂ 16 ರಲ್ಲಿ ಈ ಗ್ರಾಮಾಂತರ ಕೃಪಾಂಕ ನೀಡಲು ಸಾಧ್ಯತೆಗಳು ಬಹಳ ಕಡಿಮೆ ಇರುವ ಕಾರಣ ಸುಗ್ರೀವಾಜ್ಞೆ ಹಾಗೂ ಸಂವಿಧಾನ ತಿದ್ದುಪಡಿಯಷ್ಟೆ ಉಳಿದಿರುವ ದಾರಿ ಎಂಬ ಅಂಶ ಈ ಹಿಂದಿನ ಪಟೇಲರ ಸರ್ಕಾರದ ತಲೆಗಂತೂ ಹೋಗಲಿಲ್ಲ, ಕನಿಷ್ಠ ಕೃಷ್ಣಾರವರಿಗಾದರೂ ತಲೆಗೆ ಹತ್ತುತ್ತದೆಯೊ ಎಂದು ಕಾದು ನೋಡಬೇಕಿದೆ. ಗ್ರಾಮಾಂತರ ಕೃಪಾಂಕಕ್ಕೆ ನಮ್ಮ ಸರ್ಕಾರ ಬದ್ಧರೆಂಬ ತಮ್ಮ ಮಾತನ್ನು ಕೃಷ್ಣಾರವರು ಕೃತಿಗೆ ತರುವರೆ ಎಂದು ಕಾದು ನೋಡಬೇಕಿದೆ.

ಕೆ.ಎನ್.ಉಮೇಶ್

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಂಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ